
ಪಂಚಮುಖಿ

ಬಿ.ಎಚ್. ಶ್ರೀಧರ



ತೇಜು ಪಬ್ಲಿಕೇಷನ್ಸ್

ಪಂಚಮುಖಿ

ಬಿ.ಎಚ್. ಶ್ರೀಧರ

ತೇಜು ಪಬ್ಲಿಕೇಷನ್ಸ್
ನಂ. 1014, 24ನೇ ಮುಖ್ಯರಸ್ತೆ, 16ನೇ ಕ್ರಾಸ್,
ಬಿ.ಎಸ್.ಕೆ. 2ನೇ ಹಂತ, ಬೆಂಗಳೂರು – 560 070.

PANCHAMUKHI

by

B.H. Shridhara

Mob : 8762150109

Published by
V. Padmavathi, on behalf of **Teju Publications**
1014, 24th Main, 16th Cross, BSK 2nd Stage
Bangalore - 560 070. Mob : 9900195626

First Edition : 2020

Pages : 48 + iv

Price : ₹ 40 ಬೆಲೆ : ರೂ. ೪೦

No. of Copies : 1100

70 GSM Maplitho – 1/8 Demy

Cover Design: **Chandrashekar**

Typeset at : **Page Designers**
Bangalore - 560 004. Ph : 41691270

Printed at : **Sathyananda Printers**
Pipeline Parallel Road, Cholura Palya,
Bangalore - 560 023.

ಪ್ರಸ್ತಾವನೆ

ಪ್ರೊ. ಬಿ.ಎಚ್. ಶ್ರೀಧರರು ಖ್ಯಾತ ಕವಿ, ವಿಮರ್ಶಕ, ಚಿಂತಕರು. ೪೦ರ ದಶಕದಲ್ಲಿ ಬರೆಯಲು ಆರಂಭಿಸಿದ ಶ್ರೀಧರರು ೮೦ರ ದಶಕದ ಕೊನೆಯವರೆಗೂ ಅವ್ಯಾಹತವಾಗಿ ಬರಹದ ಕಾಯಕದಲ್ಲಿ ತೊಡಗಿಸಿಕೊಂಡು ತಮ್ಮ ಐವತ್ತಕ್ಕೂ ಹೆಚ್ಚು ಪ್ರಬುದ್ಧ, ಮೌಲಿಕ ಕೃತಿಗಳಿಂದ ಮತ್ತು ಅಸಂಖ್ಯಾತ ಲೇಖನಗಳಿಂದ ಕನ್ನಡಸಾಹಿತ್ಯವನ್ನು ಶ್ರೀಮಂತಗೊಳಿಸಿದವರು.

ಶ್ರೀಧರರ ಪ್ರಕಟಿತ ಕೃತಿಗಳಲ್ಲಿ ಹಲವು ಅಲಭ್ಯವಾಗಿಹೋಗಿದ್ದ ಸ್ಥಿತಿಯಲ್ಲಿ ಬೆಂಗಳೂರಿನ ತೇಜು ಪಬ್ಲಿಕೇಷನ್ಸ್ ಅವುಗಳನ್ನೆಲ್ಲ ಮತ್ತೆ ಪ್ರಕಟಿಸಲು ಮುಂದೆ ಬಂದು, 'ಬಿ.ಎಚ್. ಶ್ರೀಧರ ಸಮಗ್ರ ಸಾಹಿತ್ಯ ಸರಣಿ'ಯ ರೂಪದಲ್ಲಿ ಆಯಾ ಪ್ರಕಾರಗಳಿಗನುಗುಣವಾಗಿ ಕಾವ್ಯ, ವಿಮರ್ಶೆ, ವಿಚಾರ, ಸಂಕೀರ್ಣ, ಅನುವಾದ-೧ ಮತ್ತು ಅನುವಾದ-೨ (ಸುಮಾರು ೫೦೦೦ ಪುಟಗಳು) ಎಂಬ ೬ ಸಂಪುಟಗಳಲ್ಲಿ ಅವುಗಳನ್ನು ಇತ್ತೀಚೆಗೆ (೨೦೧೩ರಿಂದ ೨೦೧೯ರ ಅವಧಿಯಲ್ಲಿ) ಹೊರತಂದಿತು. ಆದರೆ ಸಮಗ್ರ ಸಾಹಿತ್ಯ ಪ್ರಕಟಿಸುವ ಸಮಯದಲ್ಲಿ ಪ್ರಸ್ತುತ ಕೃತಿ 'ಪಂಚಮುಖಿ'ಯ ಒಂದೂ ಪ್ರತಿ ಲಭ್ಯವಿರಲಿಲ್ಲವಾದ್ದರಿಂದ ಸಮಗ್ರಸಾಹಿತ್ಯದಲ್ಲಿ (೩ನೆಯ ಸಂಪುಟ 'ವಿಚಾರ'ದಲ್ಲಿ) ಈ ಕೃತಿ ಸೇರ್ಪಡೆಯಾಗಲಿಲ್ಲ.

ಡಿಸೆಂಬರ್ ೨೦೧೮ರಲ್ಲಿ ಕೇಂದ್ರ ಸಾಹಿತ್ಯ ಅಕಾಡಮಿಯ ವತಿಯಿಂದ ಸಿದ್ಧಾಪುರ(ಉತ್ತರಕನ್ನಡ)ದ ಎಮ್.ಜಿ.ಸಿ. ಕಾಲೇಜಿನಲ್ಲಿ ನಡೆದ ಬಿ.ಎಚ್. ಶ್ರೀಧರರ ಶತಮಾನೋತ್ಸವದ ಆಚರಣೆಯ ಸಂದರ್ಭದಲ್ಲಿ, ಅಲ್ಲಿಯ ಗ್ರಂಥಾಲಯದಲ್ಲಿ ಈ 'ಪಂಚಮುಖಿ' ಪುಸ್ತಕದ ಪ್ರತಿಯೊಂದು ದೊರಕಿತು. ಶ್ರೀಧರರು ಆ ಕಾಲೇಜಿನ ಪ್ರಥಮ ಪ್ರಾಂಶುಪಾಲರಾಗಿ ೧೯೬೯ರಿಂದ ೧೯೭೬ರವರೆಗೆ ಸೇವೆ ಸಲ್ಲಿಸಿದ್ದರು. ಅಲ್ಲಿಯ ಪ್ರಾಧ್ಯಾಪಕವರ್ಗ ಶ್ರೀಧರರ ಕೃತಿಗಳನ್ನು ವ್ಯವಸ್ಥಿತವಾಗಿ (ಪ್ರತ್ಯೇಕವಾಗಿ) ಶ್ರದ್ಧೆಯಿಂದ ಇರಿಸಿದ್ದು ಶ್ಲಾಘನಾರ್ಹ. ಅವರಿಗೆ ಹಾರ್ದಿಕ ಕೃತಜ್ಞತೆಗಳು.

ಹೀಗೆ ಆಕಸ್ಮಿಕವಾಗಿ ದೊರೆತ 'ಪಂಚಮುಖಿ' ಈಗ ತೇಜು ಪಬ್ಲಿಕೇಷನ್ಸ್‌ನಿಂದಲೇ ಮತ್ತೆ ಮುದ್ರಿತವಾಗುತ್ತಿದೆ. ಶ್ರೀ ರಾಮನಾಥರಿಗೆ ಮತ್ತೆ ಕೃತಜ್ಞತೆಗಳು.

'ಪಂಚಮುಖಿ' ಹೆಸರೇ ಹೇಳುವಂತೆ, ಇದು ಐದು ವೈಚಾರಿಕ ಪ್ರಬಂಧಗಳ ಸಂಕಲನ. ೧೯೫೧ರಲ್ಲಿ ಉಡುಪಿಯ ಅಂತರಂಗ ಪ್ರಕಾಶನ ಸಂಸ್ಥೆಯಿಂದ ಪ್ರಥಮ ಬಾರಿಗೆ ಮುದ್ರಿತವಾದ ಕೃತಿ ಇದು. ಕನ್ನಡದ ಜೀವನಸೂತ್ರ, ಸಾಹಿತ್ಯದ ಸಿದ್ಧಿ, ವಿಶ್ವಶಾಂತಿ, ರಾಷ್ಟ್ರೀಯ ಪುನರುಜ್ಜೀವನ ಮತ್ತು ಸಾಹಿತ್ಯದ ಪ್ರಾಧಾನ್ಯ ಎಂಬ ಪ್ರಬಂಧಗಳನ್ನು ಇದು ಒಳಗೊಂಡಿದೆ. ಎಲ್ಲ ಪ್ರಬಂಧಗಳೂ ಶ್ರೀಧರಸಾಹಿತ್ಯದ ಸ್ಥಾಯಿಭಾವವಾದ ನೈತಿಕ ನಿಲುವನ್ನು ಧ್ವನಿಸುತ್ತವೆ.

ಮೊದಲ ಪ್ರಬಂಧ 'ಕನ್ನಡದ ಜೀವನಸೂತ್ರ' ಅಂದಿನ ಕಾಲಘಟ್ಟದ ಸಂದರ್ಭದಲ್ಲಿ ರಾಜಕೀಯ ಐಕ್ಯ, ಆರ್ಥಿಕ ಮುನ್ನಡೆ ಮತ್ತು ಸಾಂಸ್ಕೃತಿಕ ಸಾಮರಸ್ಯ ಎಂಬ ವಿಷಯಗಳನ್ನು ವಿಸ್ತೃತವಾಗಿ ಚರ್ಚಿಸುತ್ತದೆ. ಭಾಷಾವಾರು ವಿಂಗಡಣೆಯ ಮೂಲಕ ಸಾಧಿಸಲಾಗುವ ರಾಜಕೀಯ ಐಕ್ಯ, "ಕ್ರಾಂತಿಕಾರಕ ಸಾಮ್ಯವಾದವೇ ಗುರಿಯಾದರೂ 'ಕ್ರಾಂತಿಯಲ್ಲದ' ವಿವರ್ತಮಾರ್ಗದ ರಚನಾತ್ಮಕ ಸಾಮ್ಯನೀತಿಯನ್ನು" ಅನುಸರಿಸಿ ಸಾಧಿಸುವ ಆರ್ಥಿಕ ಸಮಾನತೆ, ಹಾಗೆಯೇ ವಿದ್ಯಾಸಂಸ್ಥೆಗಳ ಏಕಸೂತ್ರತೆ, ಪಠ್ಯಪುಸ್ತಕಾದಿಗಳ ಐಕ್ಯ, ಭಾಷಾಮರ್ಯಾದೆಯ ಒಮ್ಮತ ಇತ್ಯಾದಿ ಶೈಕ್ಷಣಿಕ ಸಾಮರಸ್ಯಗಳ ಮೂಲಕ ಹೊಂದಬೇಕಾದ ಸಾಂಸ್ಕೃತಿಕ ಸಾಮರಸ್ಯ, ಇವು ಕನ್ನಡಿಗರ ನಿಜ ಪ್ರಗತಿಯ ತಳಹದಿಗಳೆಂದು ಶ್ರೀಧರರಿಲ್ಲಿ ಪ್ರತಿಪಾದಿಸುತ್ತಾರೆ. ಇವೆಲ್ಲ ಇಂದಿಗೂ ಸರಿಯೇ.

'ಸಾಹಿತ್ಯದ ಸಿದ್ಧಿ' ಎಂಬ ಪ್ರಬಂಧ ಶ್ರೀಧರರ ಮುಂದಿನ ಎಲ್ಲ ವಿಮರ್ಶಾಕೃತಿಗಳಲ್ಲಿಯ ಮುಖ್ಯ ಅಂಶವಾದ 'ಕಾವ್ಯನಿಕಷ'ದ ಕಲ್ಪನೆಯನ್ನೇ ಅಭಿವ್ಯಕ್ತಿಸುತ್ತದೆ. "ಕಲಾಸಾಧನದಿಂದ, ಸಾಹಿತ್ಯಾನುಶೀಲನದಿಂದ ಕಾಲಕಾಲಕ್ಕೆ ಬುದ್ಧಿ–ಭಾವನೆಗಳ ಸಂಸ್ಕಾರ ಉದಾತ್ತತರವಾಗುತ್ತ ಹೋಗುವುದೇ ಸಾಹಿತ್ಯಾದಿ ಕಲೆಗಳ ನಿಕಷ, ಸತ್ವನಿರ್ಣಾಯಕ ಫಲಿತಾಂಶ" ಎನ್ನುವುದು ಅವರ ನಿಖರ ನುಡಿ.

ಮೂರನೆಯ ಪ್ರಬಂಧ 'ವಿಶ್ವಶಾಂತಿ'. ಪ್ರಬಲ ರಾಷ್ಟ್ರಗಳಾದ ಅಮೇರಿಕ, ರಷ್ಯಗಳು ಪರಸ್ಪರರ ಮೇಲೆ ಪ್ರಾಬಲ್ಯ ಸಾಧಿಸುವ ಉದ್ದೇಶದಿಂದ ಇತರ ಪುಟ್ಟ ರಾಷ್ಟ್ರಗಳನ್ನು ಬಳಸಿಕೊಂಡು ಆಡುತ್ತಿರುವ ಕ್ರೂರ ಆಟದಿಂದ ಮುಕ್ತಿ ಪಡೆಯುವ, ತನ್ಮೂಲಕ ಶಾಂತಿ–ಸಮೃದ್ಧಿಗಳನ್ನು ಸಾಧಿಸುವ ಮಾರ್ಗೋಪಾಯವನ್ನು ಈ

ಪ್ರಬಂಧ ಸೂಚಿಸುತ್ತದೆ. "ಬದುಕಬೇಕೆಂಬ ಆಸೆಯಿಂದ ಬಿಡಿಸಿಕೊಳ್ಳಲಾರದವರಿಗೆ ಪ್ರೀತಿತತ್ವ ಹಿಡಿದು ಶಾಂತಿಗಾಗಿ ಅಜಸ್ರವಾಗಿ ಹೋರಾಡುವುದನ್ನು ಬಿಟ್ಟರೆ ಬೇರೆಯ ಮಾರ್ಗವೇ ಇಲ್ಲ" ಎನ್ನುತ್ತಾರೆ ಶ್ರೀಧರರು. "ವಿಶ್ವಭ್ರಾತೃತ್ವಬೋಧಕ"ವಾದ ವಿಶ್ವಧರ್ಮವೊಂದು ಇಲ್ಲದೆ ವಿಶ್ವಶಾಂತಿ ಅಸಾಧ್ಯ. ಏಕೆಂದರೆ, ಸಾಮಾನ್ಯ ಜನರಿಗೆ ಧರ್ಮದ ಅಗತ್ಯವಿದೆ. ಹಾಗಾಗಿ ಅದರ ಆಧಾರದ ಮೇಲೆಯೇ ಶಾಂತಿಯನ್ನು ತಲುಪುವುದು ಸುಲಭ ಮತ್ತು ಅನಿವಾರ್ಯ ವಿಕಲ್ಪ ಎಂಬುದು ಶ್ರೀಧರರ ವಿಚಾರ.

'ರಾಷ್ಟ್ರೀಯ ಪುನರುಜ್ಜೀವನ' ಪ್ರಬಂಧದಲ್ಲಿ ಭಾರತದ ನೈತಿಕ ಅಧಃಪತನವನ್ನು ಅಂದೇ ಗುರುತಿಸಿದ ವಿಷಾದವಿದೆ. "ಜಾತೀಯತೆ, ವರ್ಗಕಲಹ, ಪಕ್ಷ–ಪ್ರತಿಪಕ್ಷಗಳ ದ್ವಂದ್ವ – ಇವೇ ಮೊದಲಾದ ಜ್ವಾಲೆಗಳಿಂದ ನಮ್ಮ ನಾಡು ಉರಿಯುತ್ತಿರುವ ಈ ಕಾಲದಲ್ಲಿ ಶಾಂತಿಯ ನೀರನ್ನೆರೆಯಲು ಸಾಧ್ಯವಾಗದಿದ್ದರೆ ನಮ್ಮ ಈ ಹಿಂದೀ ಸ್ವಾತಂತ್ರ್ಯವು ಚಿರಕಾಲ ಬಾಳುವುದು ಸಂದೇಹಾಸ್ಪದವೇ ಸರಿ" ಎಂದು ನಿರಾಶೆಯಿಂದ ನುಡಿಯುತ್ತಲೇ ಪ್ರಜಾಸತ್ತೆಯ ಯಶಸ್ಸಿಗೆ ಹಿಂದಿನ ಧರ್ಮಶಾಸ್ತ್ರಕಾರರ ನೀತಿಸಾರವನ್ನು ಪಾಲಿಸದೆ ಗತ್ಯಂತರವಿಲ್ಲ ಎಂಬ ನಿಗಮನಕ್ಕೆ ತಲುಪುತ್ತಾರೆ. ೫೦ರ ದಶಕದಲ್ಲಿ ಶ್ರೀ ವಿನೋಬಾ ಭಾವೆಯವರು ಹುಟ್ಟು ಹಾಕಿದ 'ಸರ್ವೋದಯ ಸಮಾಜ'ದಲ್ಲಿ ಒಂದು ಆಶಾಕಿರಣವನ್ನು ಕಂಡುಕೊಂಡು ಭಾರತೀಯ ತರುಣ–ತರುಣಿಯರು ಆ ಸಂಸ್ಥೆಯ ಧ್ಯೇಯವನ್ನು ಅನುಸರಿಸಲೆಂದು ಮುಗ್ಧವಾಗಿ ಬಯಸುತ್ತಾರೆ. ಶ್ರೀಧರರ ಅಂದಿನ ಕಳಕಳಿಗೆ ಇಂದಿನ ಈ ವಿಷಮ ಗಳಿಗೆಯಲ್ಲಿ ಏನೆನ್ನೋಣ?

ಐದನೆಯ ಪ್ರಬಂಧವಾದ 'ಸಾಹಿತ್ಯದ ಪ್ರಾಧಾನ್ಯ' ಬದುಕಿನ ಸಾರ್ಥಕ್ಯಕ್ಕೆ ಸಾಹಿತ್ಯದ ಅಗತ್ಯವನ್ನು ಸರಸ ಶೈಲಿಯಲ್ಲಿ ನಿರೂಪಿಸುತ್ತದೆ. "ಮಾನವನ ಸಾಮಾಜಿಕ, ಆರ್ಥಿಕ ಜೀವನದ ಎಲ್ಲ ಕಾರ್ಯಗಳನ್ನೂ ನಡೆಸುವವು ಅವನ ಹೃದಯ ಮತ್ತು ಬುದ್ಧಿಗಳೇ ಆಗಿರುವುದರಿಂದ ಅವುಗಳನ್ನು ಸಂಸ್ಕರಿಸಿದರೆ, ಸುಧಾರಿಸಿದರೆ ಅವಕ್ಕೆ ಅಧೀನವಾದ ಅವನ ಕಾರ್ಯಗಳಲ್ಲೆಲ್ಲ ಸುಧಾರಣೆ ತಲೆದೋರುವುದು ಸ್ವಾಭಾವಿಕ" ಎಂಬುದು ಶ್ರೀಧರರ ತರ್ಕ. ಬುದ್ಧಿ–ಹೃದಯಗಳ ಈ ಸಂಸ್ಕಾರ ಆಗುವುದು ಸು–ಸಾಹಿತ್ಯದಿಂದಲೇ ಎಂಬುದು ಸಹಜ ಸಿದ್ಧ. "ಮಾನವನಲ್ಲಿ ಮಾನವತೆಯನ್ನು ಮೂಡಿಸಲು, ವಿಶ್ವಕುಟುಂಬತ್ವವು ಉದಯಿಸಲು, ಸಚ್ಚಿದಾನಂದವನ್ನು ಉದ್ಭವಿಸಲು ಸಾಧನವಾಗುವ ಸಾಹಿತ್ಯವೇ ಆದರ್ಶ ಸಾಹಿತ್ಯ. ತಾತ್ಕಾಲಿಕ ವಿನೋದಲಾಭ ನೀಡುವ ಸಾಹಿತ್ಯಕ್ಕಿಂತ ಜೀವನವಿಕಾಸಕ್ಕೆ ಸಂಜೀವಿನಿಯಾಗಬಲ್ಲಂಥ ಸಾಹಿತ್ಯವೇ ಶ್ರೇಷ್ಠ" ಎಂಬುದು ಶ್ರೀಧರರ ಮತ.

ಜನ ಶಿಕ್ಷಣದ ಧ್ಯೇಯವನ್ನು ಹೊತ್ತಿದ್ದ ಶ್ರೀಧರರ ಎಲ್ಲ ಕೃತಿಗಳ ಹಿಂದೆಯೂ ಈ ಜನ–ಮನ ಸಂಸ್ಕಾರದ ಕಳಕಳಿ ಇದ್ದೇ ಇದೆ.

'ಪಂಚಮುಖಿ'ಯ ಶೈಲಿ, ಭಾಷೆಯ ಸರಳತೆ, ಸುಭಗತೆ ಶ್ರೀಧರಗದ್ಯ ಗಡಚು ಎನ್ನುವ ಆಕ್ಷೇಪಕ್ಕೆ ಉತ್ತರದಂತಿದೆ.

– ರಾಜಶೇಖರ ಹೆಬ್ಬಾರ

(ಸಂಪಾದಕರು, ಬಿ.ಎಚ್. ಶ್ರೀಧರ ಸಾಹಿತ್ಯ ಸಮಗ್ರ ಸರಣಿ)

ಪರಿವಿಡಿ

೧. ಕನ್ನಡದ ಜೀವನ ಸೂತ್ರ

ಮಾನವ ಕುಲವು ಪ್ರಕೃತ್ಯಾ ಪ್ರಗತಿಪರವಾದುದು. ವಿಘ್ನ ಪರಂಪರೆಗಳಿಂದ ಅದರ ಮುನ್ನಡೆ ಕೆಲಕಾಲ ಕುಂಠಿತವಾದಂತೆ ಕಂಡುಬರಬಹುದು, ಆದರೆ ಸೋಲು ಗೆಲುವಿನ ಮೆಟ್ಟಿಲೆಂಬ ಮಾತಿನಂತೆ ಪುನಃ ಚೇತರಿಸಿಕೊಂಡು ಪುರೋಗಾಮಿಯಾಗುವುದು ಅದಕ್ಕೆ ಸ್ವಭಾವ ಸಹಜವಾದದ್ದು. ಹೀಗೆ ಮುನ್ನಡೆ ಮುಂದೋಟ ಮಾನವ ಕುಲದ ಆದರ್ಶ. ಈ ಮುನ್ನಡೆಯಲ್ಲಿ, ಮುಂಬರಿವಿನಲ್ಲಿ ಧ್ರುವತಾರೆಯಂತೆ ಮಾರ್ಗದರ್ಶಕವಾದುದೆಂದರೆ ವ್ಯಕ್ತಿ ವ್ಯಕ್ತಿಗಳ ಸಹಕಾರ. ಮಹಾಯುದ್ಧಗಳೆಷ್ಟೋ ಆಗಿ ಹೋದವು; ಆದರೆ ಮತ್ತೆ ಮತ್ತೆ ಜಗತ್ತು ಒಕ್ಕೂಟ, ಒಮ್ಮತ, ಸಹಕಾರ ತತ್ವಗಳನ್ನು ಹಿಡಿಯಲು ಪ್ರಯತ್ನಿಸುತ್ತಲೇ ನಡೆದಿದೆ. ಇಂದು ಸಂಸ್ಕೃತ ಮಾನವನ ದೃಷ್ಟಿ ವಿಶ್ವವಿಶಾಲವಾಗಿದೆ; ಅವಯವಗಳ ಸಾಮಂಜಸ್ಯದಿಂದ ಅವಯವಿ ಸಮಂಜಸವೆನಿಸುವುದೆಂಬ ತತ್ವವನ್ನು ಅರಿತು ಆ ಕೋನದಿಂದ ಜಗತ್ತನ್ನು ನೋಡುತ್ತಿದೆ. ಮಣಿಗಣಗಳನ್ನು ಸೂತ್ರವೊಂದು ಕ್ರಮವಾಗಿ ಪವಣಿಸಿ ಹಿಡಿದಿರುವಂತೆ ಮಾನವ ಕೋಟಿಯ ಭ್ರಾತೃಭಾವ ಅಸಂತೋಷ ಸಂತೋಷಗಳ ನಡುವೆ, ಘರ್ಷಣಾಮರ್ಷಣಗಳ ಮೂಲಕ, ದಂಗೆ ಶಾಂತಿ ಸ್ಥಾಪನೆಗಳೊಳಗೆ, ತಕರಾರು ಕರಾರುಗಳ ಮೂಲಕ ದೃಢಪಡುತ್ತ ಹೋಗಿದೆ. ಈ ಅನಾದಿ ಪ್ರಯತ್ನದ ಅಂತ್ಯ ಸಿದ್ಧಿಗೆ ಸೂತ್ರಪ್ರಾಯವಾದುದೆಂದರೆ ಐಕ್ಯಸಂಬಂಧ. ಒಡೆದ ಗಾಜಿನ ಎರಡು ಚೂರುಗಳು ಸರಿಯಾಗಿ ಜೋಡಿಸಲ್ಪಟ್ಟರೆ ತಮ್ಮ ತಮ್ಮ ವಕ್ರಮುಖಗಳ ಸಂಯೋಗದಿಂದಲೇ ಶ್ರೀಮುಖವಾಗುವಂತೆ ವ್ಯಕ್ತಿತ್ವ, ವರ್ಗತ್ವ, ರಾಷ್ಟ್ರತ್ವ ಮುಂತಾದ ಭಿನ್ನ ಮುಖಗಳೊಂದಾದರೆ, ಹೊಂದಿಕೊಂಡು ಹೋದರೆ ಮಾನವತ್ವ, ಪ್ರಪಂಚತ್ವಗಳು ಸಾಧಿಸಲ್ಪಡುವುವು. ಈ ಆಧುನಿಕ ವಿಜ್ಞಾನ ಮಾರ್ಗವನ್ನು ಕಣ್ಣೆದುರಿಟ್ಟುಕೊಂಡು ಪ್ರತಿಯೊಂದು ಜನಪದವೂ ಜಗದ ಸುಶ್ಲಿಷ್ಟ ಅಂಗವಾಗಿ ಬಾಳಲು ಪ್ರಯತ್ನಿಸುವುದೇ ಉತ್ತರೋತ್ತರವಾದ ಪ್ರಗತಿಯೆನ್ನಬಹುದು.

ರಾಜಕೀಯ ಐಕ್ಯ

ಅಂಗಿಯು ಪರಿಧಿಯೊಳಗೆ ಅಂಗಗಳಿರುವಂತೆ ಜೀವನದ ಮಹಾವರಣದೊಳಗೆ ಅನೇಕ ಒಳ ಆವರಣಗಳಿವೆ. ಅಂತಹವುಗಳಲ್ಲಿ ಹೊರಗಣ

ದೃಷ್ಟಿಯಿಂದ, ವ್ಯಾಪ್ತಿಯ ಮರ್ಯಾದೆಯಿಂದ ಮೊದಲು ಕಾಣುವುದು ರಾಜಕೀಯ ಆವರಣ. ಅನಾದಿಕಾಲದಿಂದ ಇಂದಿನವರೆಗೆ ಇದರ ಪ್ರಾಧಾನ್ಯವಿದ್ದೇ ಇದೆ; ವಿಶೇಷ ಸಂದರ್ಭಗಳಲ್ಲಿ ವಿಶೇಷವಾಗಿ ಪ್ರಾಧಾನ್ಯ ಪಡೆಯುತ್ತದೆ. ಅದರಿಂದಲೇ ಇಂದು ಪ್ರತಿಯೊಂದು ರಾಷ್ಟ್ರವೂ, ಪ್ರಾಂತ್ಯವೂ, ಪ್ರದೇಶವೂ ಜೀವನದ ಉಳಿದ ಆವರಣಗಳ ಸಾಮಂಜಸ್ಯಕ್ಕೆ ರಾಜಕೀಯ ಆವರಣವೇ ತಳಹದಿಯೆಂಬುದನ್ನರಿತು ಅದನ್ನು ಎಲ್ಲಕ್ಕಿಂತ ಮೊದಲು ಸುಧಾರಿಸಲು, ಅನುಕೂಲವಾಗಿ ಪರಿವರ್ತಿಸಲು ವಿಶೇಷ ಲಕ್ಷ್ಯ ಕೊಡುತ್ತಿದೆ. 'ರಾಜಾ ಕಾಲಸ್ಯಕಾರಣಂ' ಎಂಬುದಕ್ಕೆ ಬಹಳ ವಿಶಾಲಾರ್ಥವಿದೆ. ಆಳರಸನೊಬ್ಬನಿರಲಿ, ಹತ್ತುಮಂದಿ ಪ್ರತಿನಿಧಿಗಳ ಕೂಟವಿರಲಿ, ಸಾಂಕುಶ ಪ್ರಭುತ್ವವಿರಲಿ, ನಿರಂಕುಶವಿರಲಿ – ಜೀವನದ ಆಧಾರ ದಂಡದಂತಿರುವ ಉದ್ಯೋಗಾದಿಗಳ ಸುವ್ಯವಸ್ಥೆಗೆ ರಾಜಾಧಿಕಾರ, ಸರಕಾರ ನಿಯಂತ್ರಣ ಅತ್ಯಗತ್ಯವಿರುವುದರಿಂದ ಅತ್ತ ಜನ ಹೆಚ್ಚು ಹೆಚ್ಚಾಗಿ ಲಕ್ಷ್ಯವೀಯುತ್ತಿರುವುದು ಸ್ವಾಭಾವಿಕ. ತ್ರಿಕರಣಗಳಿಂದ ವ್ಯಕ್ತಿಯೊಬ್ಬನು ಮಾಡುವ ಕಾರ್ಯಗಳನ್ನು ತಡೆಹಿಡಿವ ಇಲ್ಲವೆ ಪ್ರೋತ್ಸಾಹಿಸುವ ಶಕ್ತಿಯೇ ರಾಜಶಕ್ತಿಯೆಂಬುದು ಸರ್ವದಾ ಅನುಭವಗಮ್ಯವಾದರೂ ಯುದ್ಧಾದಿ ಗಂಡಾಂತರ ಪರಿಸ್ಥಿತಿಗಳಲ್ಲಿ ವಿಶೇಷತಃ ನಾಗರಿಕ ಅನುಭವಕ್ಕೆ ಬರುತ್ತದೆಂಬುದನ್ನು ಸರ್ವರೂ ಬಲ್ಲರು. ಆದುದರಿಂದ ಒಂದು ದೇಶ, ಪ್ರಾಂತ ಶಾಂತಿ, ಸಮೃದ್ಧಿಗಳನ್ನು ಪಡೆಯಬೇಕಾದರೆ ಮೊಟ್ಟಮೊದಲನೆಯದು ರಾಜಕೀಯ ಉಪಾಧಿಯ ಅನುಕೂಲವೃತ್ತಿಯೆಂಬುದು ನಿರ್ವಿವಾದವಾದುದು.

ಮೇಲಿನ ಮಾತಿನ ಸತ್ಯತೆಗೆ ಹಿಂದುಸ್ತಾನವಿಂದು ಮುಸಲಮಾನರಿಗೆ ಪಾಲು ಕೊಟ್ಟಾದರೂ, ಸ್ವಾತಂತ್ರ್ಯ ಪಡೆಯಲೊಪ್ಪಿ ಆಡಳಿತದ ಅಧಿಕಾರವನ್ನು ಸಂಪಾದಿಸಿದುದೇ ಸಾಕ್ಷಿ. ಜಗತ್ತಿಗೆ ರಾಷ್ಟ್ರಗಳಂಗಗಳಾದರೆ ರಾಷ್ಟ್ರಕ್ಕೆ ಅಥವಾ ದೇಶಕ್ಕೆ ಪ್ರಾಂತಗಳಂಗಗಳು, ಹಾಗಿರುವಾಗ ತನ್ನ ಪಾಲಿಗೆ ಬರತಕ್ಕ ಸ್ವಾತಂತ್ರ್ಯವನ್ನು ಪ್ರತಿಯೊಂದು ಪ್ರಾಂತವೂ ಪಡೆಯುತ್ತದೆ, ಪಡೆಯಬೇಕಾಗುತ್ತದೆ. ಈ ನ್ಯಾಯವನ್ನು ಅನುಸರಿಸಿಯೇ ಭಾಷಾವಾರು ಪ್ರಾಂತರಚನೆಗಿಂದು ಮಹತ್ವ ಪ್ರಾಪ್ತಿಯಾಗಿದೆ! ಜಗತ್ತಿನ ವಿವಿಧ ಪ್ರಾಕೃತಿಕ ಶಕ್ತಿಗಳಲ್ಲಿ ವಾಯುವಿಗಿರುವ ಬಲ ಮತ್ತು ನೈರ್ಮಲ್ಯಗಳು ಉಳಿದವಕ್ಕಿಲ್ಲ. ಹಾಗೆಯೇ ಪ್ರಾಂತ ನಿರ್ಮಾಣಕ್ಕೆ ಜಾತಿ, ಧರ್ಮ ಮುಂತಾದ ಅನೇಕ ತತ್ವಗಳಿದ್ದರೂ ಅವೆಲ್ಲವುಗಳಿಂದ ಪ್ರಬಲವೂ ನಿರ್ಮಲವೂ ವೈಜ್ಞಾನಿಕವೂ ಆದುದೆಂದರೆ ಭಾಷಾತತ್ವ. ಅದನ್ನು ಕಡೆಗಣಿಸಿದ್ದರಿಂದ ಉಳಿದ ಪ್ರಾಂತಗಳಿಗಿಂತ ದೀನರೂ ಹೀನರೂ ಆಗಿ ಬಾಳಬೇಕಾಗಿ ಬಂದಿರುವ ಕರ್ನಾಟಕ ಜನರ ಗತಿ ಇಂದು ಕರುಣಾಜನಕವಾಗಿದೆ. ದೇಹಕ್ಕೆ ಅಗತ್ಯವಾದ ವಸ್ತುಗಳಲ್ಲಿ ಗಾಳಿ ಹೇಗೆ

ಪ್ರಥಮದ್ದೋ ಹಾಗೇ ವ್ಯಕ್ತಿಗಳ ನಿತ್ಯ ವ್ಯವಹಾರದಲ್ಲಿ ಭಾಷೆ ಪ್ರಧಾನವಾದದ್ದು. ಪ್ರದರ್ಶನೀಯವಾದ ಬಾಹ್ಯ ಧರ್ಮಾಚಾರ ಪದ್ಧತಿಗಳಿಂದ ಏಳಿಗೆಗೆ ಹೇಗೆ ಭಂಗ ಬರುವುದೆಂಬುದಕ್ಕೆ ಇಂದಿನ ಪಾಕಿಸ್ತಾನ ಸ್ಥಾಪನೆಯು ಹಿಮಾಲಯೋಪಮವಾದ ನಿದರ್ಶನವಾಗಿದೆ. ನಮ್ಮ ಸನಾತನಿಗಳ ಕಣ್ಣು ಇದರಿಂದಲೂ ತೆರೆಯದೆ ಹೋದರೆ ಅವರು ಈ ಯುಗದಲ್ಲಿ, ಈ ಜಗದಲ್ಲಿ ಬದುಕಿಲ್ಲವೆಂದೇ ಹೇಳಬೇಕು. ವರ್ಗದ ಮಾತೆತ್ತಿದರೆ ಗಾಂಧೀಜಿ ಇಂದು ವರ್ಣರಹಿತ ಹಿಂದು ಜಾತಿಯನ್ನು ನಿರ್ಮಿಸಬೇಕೆಂಬ ಆಧುನಿಕ ವಿಜ್ಞಾನ ರಹಸ್ಯವನ್ನರಿತುಕೊಳ್ಳಬೇಕಾಗುವುದು. ಭಾಷಾಖಂಡದೊಳಗೆ ಸಂಸ್ಕೃತಿ, ಅದರೊಳಗೆ ಧರ್ಮಕರ್ಮಗಳು, ಅವುಗಳೊಳಗೆ ಕೌಟುಂಬಿಕ ಆಚಾರ ವ್ಯವಹಾರಗಳು, ಹೀಗಿರುವುದರಿಂದ ಭಾಷಾವಾರವನ್ನೇ ಪ್ರಾಂತ ಪರಿಧಿಯನ್ನಾಗಿ ಮಾಡಬೇಕೆಂಬ ಯೋಜನೆ ಇಂದು ಮುಂದೆ ಬಂದಿದೆ.

ರಾಜಭಾಷೆ ಅನ್ಯವಾಗಿ ಉಳಿದುದರಿಂದಲೇ ನಮ್ಮ ಪ್ರಾಂತ ಭಾಷೆಗಳಿಂದು ಆಗಬೇಕಾದಷ್ಟು ಪುಷ್ಟಿಯಾಗಿಲ್ಲ; ಸಾಹಿತ್ಯವು ಪೂರ್ಣವಾಗಿಲ್ಲ. ಬಾಯಿಬಿಟ್ಟರೆ ಬಣ್ಣಗೇಡು ಎಂಬ ಪಾಡಾಗಿದೆ. ರಾಜೋದ್ದೇಶ ಬೇರೆಯಾದುದರಿಂದಲೇ ಪ್ರಾಂತಗಳ ಉದ್ಯೋಗ ಶಿಕ್ಷಣಾದಿಗಳು ಸಶಕ್ತ ಜನಪದವನ್ನು ನಿರ್ಮಿಸಿಲ್ಲ. ಅಧಿಕಾರೇತರ ಸಂಸ್ಥೆಗಳು ಎಷ್ಟೇ ಹೆಣಗಿದರೂ ಕನ್ನಡ ಸಮಾಜ, ಸಾಹಿತ್ಯ ಸಂಸ್ಕೃತಿಗಳು ಸಾಮರಸ್ಯ ಹೊಂದಿಲ್ಲ; ಅಭಿವೃದ್ಧಿ ಹೊಂದಲಿಲ್ಲ. ಅದನ್ನರಿತೇ ಕನ್ನಡಿಗರಿಂದು ರಾಜಕೀಯ ಒಕ್ಕೂಟವನ್ನು ತಮ್ಮ ಪ್ರಥಮ ಸಾಧ್ಯವೆಂದು ಗ್ರಹಿಸಿದ್ದಾರೆ. ಇದರ ಬಗ್ಗೆ ಎಷ್ಟು ಹೇಳಿದರೂ ಕಡಿಮೆಯೇ ಆದೀತು. ಸುದೈವದಿಂದ ಸರ್ವಭಾಗದ ಕನ್ನಡಿಗರೂ ಈ ವಿಷಯದಲ್ಲಿ ಎಚ್ಚತ್ತಿರುವುದರಿಂದ ಇಲ್ಲಿ ಹೆಚ್ಚಾಗಿ ಬಿಂಬಿಸಬೇಕಾಗಿಲ್ಲ. ಕಾರ್ಯ ಮುಂದೆ ಸಾಗಬೇಕಾಗಿದೆ, ಸಾಗುತ್ತಿದೆ.

ಆರ್ಥಿಕ ಮುನ್ನಡೆ

ಆರ್ಥಿಕ ವಿತರಣದ ದೃಷ್ಟಿಯಿಂದ ಜಗತ್ತಿಂದು ಇಬ್ಭಾಗವಾಗಿದೆ, ಇಮ್ಮತವಾಗಿದೆ. 'ಬಲವೇ ನ್ಯಾಯ'ವೆಂಬ ಮತದ ಮೇಲೆ ಒಂದು ವ್ಯಕ್ತಿ ಇಲ್ಲವೆ ಒಂದು ಗುಂಪು ಸ್ವಶಕ್ತಿಯನ್ನು ಪ್ರಯೋಗಿಸಿ ಉತ್ಪಾದಿಸಲವಕಾಶಕೊಡಬೇಕೆಂಬ ಬಂಡವಾಲಶಾಹಿಯೊಂದು ಕಡೆ, ದುಡಿತ ಮತ್ತು ಅದರ ಫಲಗಳ ಭೋಕ್ತೃಗಳು ಕೇವಲ ಕೆಲವರು ಇಲ್ಲವೆ ಹಲವರಲ್ಲ, ಎಲ್ಲರೂ ಎಂಬ ಸಮಾಜ ಅಥವಾ ಸಾಮ್ಯವಾದ ಮತ್ತೊಂದು ಕಡೆ. ಈ ಎರಡು ಮುಖಗಳಿಂದ ಪ್ರಜಾಪ್ರಭುತ್ವ ಬೆಳೆದು ಬಂದಿದೆ. ಇದರಿಂದಲೇ ಯುರೋಪಿನಲ್ಲಿ ಪೂರ್ವ ಹಾಗೂ ಪಶ್ಚಿಮ

ಪ್ರಜಾಸತ್ತೆಗಳಿಂದು ಇಗ್ಗುಂಪಾಗಿದೆ. ನಮ್ಮ ನಯಜ್ಞರು ಎಲ್ಲ ವ್ಯವಹಾರದಲ್ಲೂ ಸ್ವಲ್ಪ ಜನರ ಬಹು ಸುಖಕ್ಕಿಂತ ಬಹುಜನರ ಸ್ವಲ್ಪ ಸುಖವೇ ಲೇಸೆಂದು ನಮಗೆ ಮೊದಲಿಂದ ಕಲಿಸಿದ್ದಾರೆ. ಒಬ್ಬನಿಗೆ ಹೊಟ್ಟೆ ತುಂಬುವುದಕ್ಕಿಂತ ಇಬ್ಬರು ಅರೆಹೊಟ್ಟೆ ತುಂಬಿಸಿಕೊಳ್ಳುವುದೇ ಲೇಸೆಂದು ನೀತಿ ವಿಶಾರದರೊಪ್ಪುವರು. ಎಲ್ಲರೂ ಬಹು ಸುಖಿಗಳಾದರಂತೂ ಪರಮ ಸಂತೋಷ. ಹೇಗೇ ಆಗಲಿ, ಅಲ್ಪಸಂಖ್ಯರ ಬಹು ಸುಖಕ್ಕಾಗಿ ಬಹುಸಂಖ್ಯರು ಅಲ್ಪ ಸುಖ ಇಲ್ಲವೆ ಅಸುಖಪಡುವ ಬಂಡವಾಲವಾದದ ನೆರಳು ಭಾರತೀಯ ಸಂಸ್ಕೃತಿಗೆ ಒಪ್ಪುವಂಥದಲ್ಲ; ಕೇವಲ ಲಾಂಛನಾಸ್ಪದವಾದುದೇ ಸರಿ.

ಹಿಂದೆ ಹೇಳಿದ ರಾಜಕೀಯ ಐಕ್ಯಕ್ಕೆ ಈ ರಾಷ್ಟ್ರೀಕರಣ ಇಲ್ಲವೆ ಸಮೀಕರಣ ತತ್ವವು (ಸಾಮ್ಯವಾದ) ಬೆನ್ನು ಮೂಳೆಯಂತಿದೆ. ಆರ್ಥಿಕ ವರ್ಗಗಳಿರುವುದು ಪರಸ್ಪರ ಮತ್ಸರ, ಸ್ಪರ್ಧೆ ಹಾಗೂ ದಮನ ಪ್ರಯತ್ನಗಳಿಗೆಡೆಗೊಡುವುದೆಂಬುದಕ್ಕೆ, ಸರ್ವಹಿತವನ್ನು ಕಡೆಗಣಿಸಿ ವರ್ಗಹಿತವಷ್ಟನ್ನೆ ನೋಡುವಂತಾಗುವುದೆಂಬುದಕ್ಕೆ ೧ನೆಯ ಮಹಾಯುದ್ಧದಲ್ಲಿ ಜರ್ಮನ್ ಜ್ಯೂಗಳ ನಡತೆಯೇ ಸಾಕ್ಷಿ. ಅರ್ಥವೊಂದು ಶಕ್ತಿ, ಅದರಂತೆ ಅಧಿಕಾರವೂ ಒಂದು ಶಕ್ತಿ ; ಇವೆರಡರಲ್ಲಿ ಯಾವುದೊಂದನ್ನೇ ಆಗಲಿ, ಹೆಚ್ಚು ಕಡಿಮೆಮಾಡಿ ಹಂಚಿ ವರ್ಗಗಳನ್ನು ಸೃಷ್ಟಿಸಿದರೆ ಸಮಾಜದ ಆಯುಷ್ಯವನ್ನು ಮೊದಲೇ ಕಡಿಮೆ ಮಾಡಿಟ್ಟಂತಾಗುತ್ತದೆ. ಸರಕಾರಿ ನೌಕರರೆಂಬ ಒಂದು ವರ್ಗ, ಸರಕಾರದವರಿಗೆ ಬೇಕಾದವರೆಂಬ ಅಲ್ಪ ಸಂಖ್ಯಾಕತೆಯ ವಿಶೇಷ ಹಕ್ಕುಳ್ಳವರದೊಂದು ವರ್ಗ, ಇವೆರಡು ನಮ್ಮ ದೇಶದ ಸ್ವಾತಂತ್ರ್ಯಸಾಧನೆಯಲ್ಲಿ ಎಂತಹ ಕಂಟಕಗಳಾಗಿ ಪರಿಣಮಿಸಿದವೆಂಬುವನ್ನು ಇಷ್ಟು ಬೇಗ ಯಾರೂ ಮರೆತಿರಲಾರರು. ವರ್ಗರಹಿತ ಸಮಾಜಬೇಕೆಂದು ಅಸ್ಪೃಶ್ಯೋದ್ಧಾರಕರಾದ ಗಾಂಧಿಯವರು ಹೇಳುತ್ತಾರೆ. ಹಾಗೇ – ಎಂದರೆ ಧಾರ್ಮಿಕ ಮತ್ತು ಸಾಂಸ್ಕೃತಿಕ ನೆಲೆಗಳಲ್ಲಿ ಎಂತೋ ಅಂತು–ಆರ್ಥಿಕ ಪ್ರಮಾಣದಲ್ಲೂ "ವೈಷಮ್ಯ"ವಿರಕೂಡದು.

ಪ್ರಕೃತಿಸಹಜವಾದ ಮತ್ಸ್ಯನ್ಯಾಯುವನ್ನು ಬಿಡುವಂತೆ ಮಾಡಿ ಮತ್ಸ್ಯಸದೃಶಮಾನವನು ನ್ಯಾಯವಾದ ಹಿಡಿವಂತೆ ಮಾಡುತ್ತ ಬಂದುದೇ ಸಂಸ್ಕೃತಿ ಇಲ್ಲವೆ ನಾಗರಿಕತೆ. ಆದುದರಿಂದ ಈ ನ್ಯಾಯವೇ ಬಲವೆಂಬ ನ್ಯಾಯ ಸಮ್ಮತವಾದ ಸಾಮ್ಯತತ್ವವಲ್ಲದೆ ಬಂಡವಾಲಿಗರ ಭೇದದೃಷ್ಟಿಯ, ವರ್ಗಮೂಲದ ಸಾಮ್ಯವಾದ ತತ್ವವು ಕನ್ನಡ ನಾಡಿಗೆ ಹಿತಕರವೆನಿಸದು. ಕ್ರಾಂತಿಕಾರಕ ಸಾಮ್ಯವಾದವೇ ಗುರಿಯಾದರೂ "ಕ್ರಾಂತಿಯಿಲ್ಲದೆ" ವಿವರ್ತಮಾರ್ಗದ ರಚನಾತ್ಮಕ ಸಾಮ್ಯನೀತಿಯನ್ನು ನಮ್ಮ ಭಾವೀ ಸ್ವತಂತ್ರ ಪ್ರಾಂತವು ಅನುಸರಿಸುವುದೆಂದು ಆಶಿಸುತ್ತೇನೆ.

ನಮ್ಮ ಬಂಡವಾಲಿಗರಾದರೂ ತಮ್ಮ ಹಿಂದಿನ ಸಂಕುಚಿತದೃಷ್ಟಿಯನ್ನು ಬಿಟ್ಟು ಸ್ವಕಾರ್ಯ ಸ್ವದೇಶಕಾರ್ಯವೆರಡಕ್ಕೂ ನ್ಯಾಯವಾದ ಸ್ಥಾನ ದೊರೆವಂತೆ ಸಹಕಾರ ತತ್ವದಿಂದ ಹೊಸ ಹಾಗೂ ದೊಡ್ಡ ದೊಡ್ಡ ಬಂಡವಾಲದ ವಿಶಾಲ ಕರ್ನಾಟಕದ ಅವಶ್ಯಕತೆಯನ್ನು ಪೂರಯಿಸುವ ವಿಶೇಷೋದ್ಯಮಗಳನ್ನು ಪ್ರಾರಂಭಿಸಿ, ವ್ಯವಸಾಯಿಕ ಮತ್ತು ಔದ್ಯೋಗಿಕ ಅಭಿವೃದ್ಧಿಯನ್ನು ಸಾಧಿಸಲು ನೆರವಾಗುವುದು ಅವರ ಕರ್ತವ್ಯ. ಕೈಗಾರಿಕೆಗಳ ಸ್ಥಾಪನೆ, ವ್ಯವಸ್ಥಾಪನೆ ಮತ್ತು ಉತ್ಪಾದನೆ ಇವುಗಳಲ್ಲಿ ಜಾಣರ ಜಾಣ್ಮೆಯನ್ನು ಜಾಣ್ಮೆಯಿಂದ ಬಳಸಿಕೊಳ್ಳುವ ಆಧುನಿಕ ಸಾಮ್ಯ ಸಹಕಾರ ತತ್ವಗಳನ್ನು ಅವರು ಅಳವಡಿಸಿಕೊಳ್ಳುವುದಗತ್ಯ. ಸ್ವಾಮಿ ಭೃತ್ಯಭಾವ ಸಂಬಂಧವನ್ನು ಜಾಗರೂಕತೆಯಿಂದ ಮತ್ತು ನಾಗರಿಕ ರೀತಿಯಿಂದ ನಡೆಸಿಕೊಂಡು ಹೋಗಬೇಕಲ್ಲದೆ ಅನಾಗತ ವಿಧಾತ ಬುದ್ಧಿಯಿಂದ ಅಗತ್ಯವಿರುವ ವೈಜ್ಞಾನಿಕ ಯಂತ್ರೋಪಕರಣ ಮತ್ತು ಆಧುನಿಕ ವಾಣಿಜ್ಯಕೌಶಲ ಇವುಗಳ ನೆರವನ್ನು ಸದಾ ಪಡೆದುಕೊಂಡು ಮುನ್ನಡೆಯತಕ್ಕದ್ದು. ಇಲ್ಲದಿದ್ದರೆ ಕರ್ನಾಟಕವು ಇನ್ನು ಶತಮಾನ ಕಳೆವವರೆಗೆ ಗತವೈಭವದ ಗುಂಗಿನಲ್ಲೇ, ಸ್ವಪ್ನದಲ್ಲೇ, ಸ್ತುತಿಪಾಠದಲ್ಲೇ ತೃಪ್ತಿ ಹೊಂದಬೇಕಾದೀತು. ನಮ್ಮ ಪ್ರಾಂತದ ಪ್ರಾಕೃತಿಕ ವರಗಳನ್ನು ಬುದ್ಧಿವಂತಿಕೆಯಿಂದ ಬಳಸಿಕೊಂಡು ನಮ್ಮ ಜೀವನಮಟ್ಟವನ್ನು ಹೆಚ್ಚಿಸತಕ್ಕ ಕ್ರಯಶಕ್ತಿಯನ್ನು ಬೆಳೆಸಬೇಕಾದರೆ ಸಾಹಸಿಕತೆ, ದೂರದೃಷ್ಟಿ, ಕಾರ್ಯಪಟುತ್ವಗಳು ನಮ್ಮ ವಣಿಗ್ವರ್ಗದಲ್ಲಿ ತಲೆದೋರಬೇಕು. ಅನ್ಯದೇಶೀಯರು ಮತ್ತು ಅನ್ಯಪ್ರಾಂತೀಯರು ನಮ್ಮ ಜಾಡ್ಯವನ್ನು ಆಗಲೇ ದುರುಪಯೋಗ ಪಡಿಸಿಕೊಂಡು ದುಡ್ಡನ್ನು ದೋಚಿಕೊಂಡು ಹೋದುದಕ್ಕೆ ಜೀವಂತ ನಿದರ್ಶನಗಳು ಒಂದೆರಡಿಲ್ಲ. ಇನ್ನಾದರೂ ಧರ್ಮ, ಕಾಮ, ಮೋಕ್ಷಗಳಿಗೆ ತಳಹದಿಯಾದ ಅರ್ಥ ಶಕ್ತಿಯನ್ನು ವೃದ್ಧಿಸಿಕೊಳ್ಳುವ ಪ್ರಾಂತದ ಧನಾಢ್ಯರು ಪ್ರಗತಿಶೀಲರಾಗಿ ದುಡ್ಡನ್ನು ಬಡ್ಡಿಗೆ ಹಾಕದೆ ಉದ್ಯಮಗಳಿಗಾಗಿ ಧೈರ್ಯದಿಂದ ಬಳಸಲುದ್ಯುಕ್ತರಾಗಬೇಕು.

ಸಾಂಸ್ಕೃತಿಕ ಸಾಮರಸ್ಯ

ನೋಟು ಕರಾರು, ಕಾಗದಪತ್ರ, ಕೋರ್ಟು ಫೀ ಸ್ಟಾಂಪು, ರುಜು ವ್ಯಾಜ್ಯ ವ್ಯವಹಾರಗಳಿಂದ ನಮ್ಮ ಭಾರತೀಯ ಸಂಸ್ಕೃತಿಯ ಅಡಿಗಲ್ಲಾದ ಪರಸ್ಪರ ವಿಶ್ವಾಸ, ವಚನತತ್ಪರತೆ ಇಂದು ಶಿಥಿಲವಾಗಿ ಹೋಗಿದೆ. ಹಿಂದುವಿರಲಿ, ಮುಸಲ್ಮಾನನಿರಲಿ, ವ್ಯಕ್ತಿ, ವ್ಯಕ್ತಿಗಳ ನಡುವಣ ಸಾಮಾಜಿಕ ಮತ್ತು ಆರ್ಥಿಕ ವ್ಯವಹಾರಗಳಲ್ಲಿ ಬ್ರಿಟಿಷರ ಆಡಳಿತ ತಲೆ ಹಾಕುವವರೆಗೆ ವಚನನಿಷ್ಠೆ ಮತ್ತು ದೈವಶ್ರದ್ಧೆಗಳು ಮುಖ್ಯಪಾತ್ರ ವಹಿಸಿ ನಿತ್ಯಜೀವನವನ್ನು ಸರಳವಾಗಿ ಸಾಗಿಸಲು ನೆರವಾಗಿದ್ದವು. ಇಂದು ಈ

ಗುಣಗಳು ಪರಶಾಸಕರ ವಕೀಲ ಕೋರ್ಟುಗಳ, ಸಾಕ್ಷಿ ಪಟ್ಟಿಗಳ ನ್ಯಾಯದಾನ ಪದ್ಧತಿಯಿಂದ ಆಮೂಲಾಗ್ರವಾಗಿ ಅದೃಢವಾಗಿ ಹೋಗಿವೆ. ಇದನ್ನು ಪುನರುದ್ಧಾರ ಮಾಡಲು ಪುಣೆಯ ಹತ್ತಿರ ಔಂಧ ಸಂಸ್ಥಾನದಲ್ಲಿಯ ಪಂಚಾಯತ ನ್ಯಾಯದಾನ ಪದ್ಧತಿಯನ್ನು ಅಭ್ಯಸಿಸಿ ನಮ್ಮಲ್ಲಿ ಜಾರಿಗೆ ತರಬೇಕು. ಈ ಪರಸ್ಪರವಾದ ವೈಯಕ್ತಿಕ ಚಾರಿತ್ರ ಶುದ್ಧಿಗೆ ಕಾರಣವಾದ ಗುಣ ನಮ್ಮಲ್ಲಿ ಬೆಳೆದು ಬಂದ ಹೊರತು ನಮ್ಮ ಒಕ್ಕಟ್ಟು ದೃಢವಾಗದು. ಸಹಕಾರ, ಘಟನಾಕಾರ್ಯ ಸುಸೂತ್ರ ಸಾಗದು. ಸಾಮೂಹಿಕ ಪ್ರಗತಿ ಸಾಧಿಸದು, ಸೌಹಾರ್ದ ಬೆಳೆಯದು. ಸುಖ ಲಭಿಸದು. ನಂಬಿಕೆಗೆ ದ್ರೋಹವನ್ನುಂಟು ಮಾಡುವುದು, ಬ್ರಹ್ಮಹತ್ಯಾದಿ ಘೋರಪಾತಕಗಳಿಗೆ ಸಮಾನವೆಂಬ ತಿಳಿವಳಿಕೆ ನಾಡಿನಲ್ಲಿ ಹರಡುವಂತೆ ವಿದ್ಯಾದಿ ಸಾಂಸ್ಕೃತಿಕ ಸಾಧನದಿಂದ ಧರ್ಮ, ನೀತಿ, ನ್ಯಾಯ ಪ್ರಕರಣದಿಂದ ಪ್ರಯತ್ನಿಸುವುದು ಆದ್ಯ ಕರ್ತವ್ಯ. ನಂಬಿಕೆಯಿಲ್ಲದೆ ಸ್ನೇಹ ಬೆಳೆಯದು; ಸ್ನೇಹ ಬೆಳೆಯದೆ ಐಕ್ಯ ಸಂಘಟಿಸದು, ಜಾತೀಯತೆ ಅಳಿಯದು, ಸಹಕೃತ ವ್ಯವಹಾರ ಸಾಗದು, ಸಂಘಶಕ್ತಿ ವೃದ್ಧಿಯಾಗದು. ಸ್ನೇಹವು ವ್ಯಕ್ತಿಗಳ ಪಾರಸ್ಪರಿಕ ವೈಯಕ್ತಿಕತೆ ಮತ್ತು ಸ್ವಾರ್ಥಸಾಧಕತೆಯನ್ನು ನಿಗ್ರಹಿಸುತ್ತದೆ; ಅಹಂಕಾರವನ್ನಳಿಸಿ 'ವಯಂಕಾರ'ವನ್ನು ಪ್ರಸ್ಥಾಪಿಸುತ್ತದೆ. ಕೂಡಿ ನಡೆವುದು ಅಲ್ಲಿಂದ ಪ್ರಾರಂಭವಾಗುತ್ತದೆ; ಸಹಭಾವ, ಸಹಯೋಗ, ಸಹಕಾರ, ಸಹಿಷ್ಣುತೆಗಳು ನಾಡಿಗರಲ್ಲಿ ಆಗ ಉದಯಿಸಿ ಅವರನ್ನು ಪ್ರಗತಿಪಥದಲ್ಲಿ ಮುನ್ನಡೆಸುತ್ತವೆ.

ಸಂಸ್ಕೃತಿ ವರ್ಧನದ ಪ್ರಥಮ ಮತ್ತು ಪ್ರಧಾನ ಸಾಧನವೇ ಶಿಕ್ಷಣ. ನಮ್ಮ ಕನ್ನಡಿಗರ ಶಿಕ್ಷಣಕ್ಕೆ ಇಂದು ವಿಶ್ವಾಮಿತ್ರರು ಬೇಕು, ದ್ರೋಣರು ಬೇಕು. ರವೀಂದ್ರನಾಥ ಠಾಕೂರರು ಬೇಕು, ಜಗದೀಶ ಚಂದ್ರಬೋಸ ಹಾಗೂ ಸರ್.ಸಿ.ವಿ. ರಾಮನ್ನಂಥವರು ಬೇಕು; ಸರ್.ಎಂ. ವಿಶ್ವೇಶ್ವರಯ್ಯ, ಸರ್.ಎಸ್. ರಾಧಾಕೃಷ್ಣರಂತಹ ಗುರುಗಳು ನಮ್ಮ ಮಹಾವಿದ್ಯಾಲಯಗಳ ಅಧ್ಯಾಪಕ ಪೀಠವನ್ನಲಂಕರಿಸಬೇಕು. ಇಂತಹ ಪ್ರಜೆಗಳನ್ನು ತಯಾರಿಸಬೇಕೆಂಬ ದಿವ್ಯಾದರ್ಶ ನವನಾಡಿನ ತಾಯ್ತಂದೆಯರ ಚಿತ್ರದಲ್ಲಿ ಚಿತ್ರಿತವಾಗಿರಬೇಕು. ವಿದ್ಯೆಯೊಂದು ಯೋಗವೆಂದು ತಿಳಿದು ಅಭ್ಯಸಿಸುವ ಉಪಾಸಕ ವೃತ್ತಿ ನಮ್ಮ ವಿದ್ಯಾರ್ಥಿಗಳಲ್ಲಿ ಬೆಳೆದು ಬರಬೇಕು. ಮಾತುಗಳು ಬಹುದೊಡ್ಡವೆನಿಸಬಹುದು; ಆದರೆ ಇಂತಹ ಸನ್ನಿವೇಶವುಂಟಾದ ಹೊರತು, ಉದ್ಧಾರವಾಗದು. ದೇಶದ ಸಾಂಸ್ಕೃತಿಕ ಅಧಃಪಾತವಾಗುತ್ತಿರುವುದನ್ನು ಭಾರತದ ಎಲ್ಲೆಡೆಗಳಲ್ಲೂ ಕಾಣುತ್ತಿದ್ದೇವೆ. ಹಿಂದೀಯ ವಾತಾವರಣಕ್ಕೆ ಯುಕ್ತವಾದ ನವಪದ್ಧತಿಯ ವಿದ್ಯಾಭ್ಯಾಸ ಕ್ರಮವನ್ನು ಆಚರಣೆಗೆ ತರುವುದರ ಬಗ್ಗೆ ಬಹಳ ಉತ್ಸಾಹದ ಮಾತುಗಳನ್ನು ವಿದ್ಯಾಶಾಸ್ತ್ರಜ್ಞರು ಆಗಲೆ ಆಡಿದ್ದಾರೆ. ಅದರೆ ಎಲ್ಲಕ್ಕಿಂತ ಮೊದಲು ನಮ್ಮ ಸರಕಾರಗಳು ದುಡ್ಡಿಗಾಗಿ ಆಳುತ್ತವೆ; ಉಳ್ಳವರಿಂದ ತೆಗೆದುಕೊಳ್ಳಲು

ಅಂಜುತ್ತವೆ. ಲಿಯಾಖತ ಅಲ್ಲಿಯ ಮುಖಂಡ ಪತ್ರಿಕೆಯ ಮೇಲೆ ಕಡಿತಾಯ ಹಾಕಿದ ಕಾಂಗ್ರೆಸ್ಸಿನ ಕೃತಿಯೇ ಎರಡನೆಯ ಮಾತಿಗೆ ನಿದರ್ಶನ; ಸಾರ್ಜಂಟಯೋಜನೆಯನ್ನು ಜಾರಿಗೆ ತರಲಾರದುದು ಮೊದಲನೆಯದಕ್ಕೆ ದೃಷ್ಟಾಂತ. ಇನ್ನು ಪ್ರತಿಯೊಂದು ಕಾರ್ಯಕ್ಷೇತ್ರದಲ್ಲೂ ಧೈರ್ಯಗೇಡಿತನ ತಲೆದೋರಿದ್ದಕ್ಕೆ ದೇಶದ ನಾನಾಭಾಗದ ಗಲಭೆಗಳನ್ನು ನಿಲ್ಲಿಸಲಾರದಾದ ಪೋಲೀಸು ಹಾಗೂ ಸೈನ್ಯದ ಅಧಿಕಾರಿಗಳ ಕಾರ್ಯಕ್ಷಮತೆಯ ಲಕ್ಷಣವು ಉದಾಹರಣೆಯಾಗಿದೆ! ಹಿಂದುಗಳ ಹುಡುಗಿಯರು ಮಾತ್ರ ಅಬಲೆಯರಾಗಿ ಅನ್ಯರಿಂದ, ಅಪಹರಿಸಲ್ಪಡುತ್ತಿರುವುದು ಮತ್ತೊಂದು ನಿದರ್ಶನ!

ನಮ್ಮ ಪ್ರಾಚೀನ ಆರ್ಯರಲ್ಲಿದ್ದ ಓಜಸ್ಸು ತೇಜಸ್ಸುಗಳು ಇಂದು ಮಾಯವಾಗಿ ಹಿಂದುಗಳೆಂದರೆ ಹಿಂದುಳಿದವರನ್ನಿಸಿದ್ದಾರೆ ಎಂದು ಹೇಳುವಂತಹ ಸಂಗತಿಗಳು ಇಂದಿನ ನಮ್ಮ ರಾಜಕೀಯ ಜೀವನ ರಂಗದಲ್ಲಿ ನಡೆದು ಹೋಗಿವೆ, ನಡೆಯುತ್ತಿವೆ. ಫ್ರೆಂಚರನ್ನು ಹಿಟ್ಲರನು ಗೆದ್ದಾಗ ಅಲ್ಲಿಯ ಮುಖ್ಯಮಂತ್ರಿಯು "No men, No money, No machinery" ಜನರಿಲ್ಲ, ಧನವಿಲ್ಲ, ಯಂತ್ರೋಪಕರಣಗಳಿಲ್ಲ" ಎಂದು ತಮ್ಮ ಸೋಲಿಗೆ ಕಾರಣ ಹೇಳಿದ. ಹೀಗೆ ನಮ್ಮ ನಾಡಿಂದು "ನಿರ್ವೀರ ಮುರ್ವೀತಲಂ" ಎನಿಸಿದುದು ಸರ್ವತ್ರ ಕಂಡುಬರುವ ಹಿನ್ನಡೆಗೆ ಮೂಲಭೂತ ಕಾರಣವಾಗಿದೆ. 'Nothing venture, nothing have ಯಾವುದಕ್ಕೂ ಕೈಯಿಕ್ಕದಿದ್ದರೆ ಏನೂ ಸಿಗುವುದಿಲ್ಲ' ಎಂಬ ಗಾದೆ ನಮ್ಮಲ್ಲಿ ಪರಿಪೂರ್ಣತೆ ಪಡೆದಂತಿದೆ. ಅದರಿಂದಲೆ ಹೊರಗಿನ ನಿಷ್ಠುರ ಸತ್ಯವಾದಿಗಳು ಭಾರತೀಯರನ್ನು Stay at home people ಕುಳಿತು ಕಾಲ ಕಳೆವ ಜನರೆಂದೂ ನಮ್ಮಲ್ಲಿರುವುದು Do nothing spirit ಏನೂ ಮಾಡದೆ ಕೈಕಟ್ಟಿ ಕುಳಿತುಕೊಳ್ಳುವ ವಿಚಿತ್ರ ಅನಾಸಕ್ತಿಯೆಂದೂ ಹೇಳಿದ್ದಾರೆ. ಹಿಂದುಸ್ಥಾನ ವಿಭಕ್ತವಾದುದು ನಮ್ಮ ನಿರ್ವೀರ್ಯತೆಯ ನಿಶಾನೆಯಾದರೂ ಸೋಲುಗೆಲುವಿನ ಮೆಟ್ಟಿಲೆಂಬಂತೆ ಅದು ನಮ್ಮನ್ನು ಎಚ್ಚರಿಸಿ ಕಲಿತನವನ್ನು ಕೆರಳಿಸುವ ದುಂದುಭಿದಸ್ವಾನವೆಂದೇ ಹೇಳಬೇಕು. ನಾಗರಿಕಂಮನ್ಯರಾಗಿ ನಾಗರಿಕರು ತಮ್ಮ ನಾಗರಿಕತೆಗೆ ಸಹಜವಾದ ಧೀರೋದಾರ ಪ್ರವೃತ್ತಿಯನ್ನು ಕಳೆದುಕೊಂಡುದಕ್ಕೆ ಆಗಬೇಕಾದ ಪ್ರಾಯಶ್ಚಿತ್ತ ಆಗಿಹೋಯಿತು. ತತ್ವಾಭ್ಯಾಸವಿಲ್ಲದಿದ್ದರೂ ನಮ್ಮ ಪೂರ್ವಜರ ತತ್ವಾಭ್ಯಾಸದಿಂದ ಹುಟ್ಟಿದ ಜಡತೆ ಮಾತ್ರ ಇಂದು ನಮ್ಮಲ್ಲಿ ಕಾಣುತ್ತಿದ್ದು ಐಹಿಕ ಆಮುಷ್ಮಿಕಗಳೆರಡಕ್ಕೂ ನಾವು ಎರವಾಗಿದ್ದೇವೆ. ಈ ತ್ರಿಶಂಕು ಸ್ವರ್ಗದಿಂದ ಮುಕ್ತರಾಗಬೇಕಾದರೆ ಮೊದಲು ಅಥರ್ವವೇದ, ಧನುರ್ವೇದಗಳನ್ನು ನಮ್ಮ ಜನ ಅಭ್ಯಸಿಸಿ ವಾಣಿಜ್ಯ ಮತ್ತು ಕ್ಷಾತ್ರ ತೇಜಸ್ಸುಗಳನ್ನು ಬೆಳೆಸಿಕೊಂಡು ವೈಜ್ಞಾನಿಕ ಮಾರ್ಗದಿಂದ ಹೊರನಾಡಿಗರ

ಭುಜಕ್ಕೆ ಭುಜ ತಾಗಿಸಿ ನಡೆವ ಬಲಪಡೆಯಬೇಕು. ಇಲ್ಲದಿದ್ದರೆ ಇಂದಿನ ತ್ವರಿತಗತಿಯಿಂದ ಸಾಗುವ ಜಗತ್ತಿನ ಓಟದ ಸ್ಪರ್ಧೆಯಲ್ಲಿ ಭಾರತೀಯರು, ಕನ್ನಡಿಗರು ಬಹಳ ಹಿಂದೆ ಉಳಿದು 'ಕಿಂದರಿಜೋಗಿ'ಯಲ್ಲಿಯ ಕುಂಟು ಹುಡುಗನಂತೆ ನಿರ್ವಿಣ್ಣರಾಗಿ ಪುನಃ ದಾಸ್ಯಪಂಕದಲ್ಲುರುಳಿ ನರಳಬೇಕಾಗಿ ಬರಬಹುದು. ಇಂತಹ ದುರ್ದಶೆ ಬಾರದಂತೆ ಮುನ್ನೆಚ್ಚರಿಕೆ ತೆಗೆದುಕೊಂಡು ಸಾಂಸ್ಕೃತಿಕ ಸಾಮರಸ್ಯದತ್ತ ಗಮನಕೊಡಬೇಕಾಗಿದೆ.

ಭಾರತೀಯ ಸಂಸ್ಕೃತಿಯ ಸಮ್ಮಿಲನ, ಸಾಮರಸ್ಯ ಉಂಟಾಗಬೇಕೆಂಬುದಕ್ಕೆ ಮೊದಲು ನಮ್ಮ ಪ್ರಾಂತ್ಯದ ಐಕ್ಯಭಾವವನ್ನು ದೃಢಪಡಿಸುವ ಸಾಂಸ್ಕೃತಿಕ ಏಕೀಕರಣವಾಗುವಂತೆ ಯತ್ನಿಸಬೇಕಾದುದು ಅನಿವಾರ್ಯ. ಕೂಲಿಕಾರ ಬಂಡವಾಳಿಗರಲ್ಲಿ ವರ್ಗ ಭೇದವಳಿಯಬೇಕಾದರೆ ಆ ಎರಡು ವರ್ಗಗಳ ನಡುವೆ ಮದುವೆ ನೆಂಟಸ್ತಿಕೆ ನಡೆಯಬೇಕೆಂದು ಗಾಂಧೀಜಿಯೆಂದಂತೆ ಕರ್ನಾಟಕ ಸಂಸ್ಕೃತಿ ಸಾಮರಸ್ಯಕ್ಕೆ ಮಂಗಳೂರು, ಮೈಸೂರು, ಧಾರವಾಡ, ಕಾರವಾರಾದಿ ವಿವಿಧ ಪ್ರದೇಶಗಳ ಜನರಲ್ಲಿ ಕೊಡುತರು ನಡೆಯಬೇಕು. ಈ ಸಾಮಾಜಿಕ ಸೂತ್ರದ ಪ್ರಾಮುಖ್ಯ ಅಷ್ಟಿಷ್ಟಲ್ಲ. ಜಾತೀಯ ಒಗ್ಗಟ್ಟಿಗಾಗಿ ಒದ್ದಾಡುವವರು ಮೊದಲು ತಮ್ಮಲ್ಲಿಯ ವರ್ಗೀಯ ಒಗ್ಗಟ್ಟನ್ನು ಗಟ್ಟಿಮಾಡಿಕೊಳ್ಳಬೇಕು. ಸಿರಿವಂತ–ಬಡವ, ವೈಷ್ಣವ–ಸ್ಮಾರ್ತ, ನೌಕರ–ಸ್ವತಂತ್ರೋದ್ಯೋಗಿ, ಕನ್ನಡ ಮಾತಿನವ–ಬೇರೆ ಮನೆಮಾತಿನವ, ಈ ವರ್ಗಗಳು ಪರಸ್ಪರ ಕೊಡುಕೊಳುಗಳಿಂದ ಬಾಂಧವ್ಯ ಬೆಳೆಸಿಕೊಂಡು ಕನ್ನಡತನವನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸುವುದು ಮೊದಲ ಕರ್ತವ್ಯ. ಅನಂತರ ಶೈಕ್ಷಣಿಕ ಏಕೀಕರಣಕ್ಕೆ ಕೈಹಾಕಬೇಕು.

ಶೈಕ್ಷಣಿಕ ಕ್ಷೇತ್ರದಲ್ಲಿ ಇಂದು ಕಂಡುಬರುವ ಪ್ರಾದೇಶಿಕತೆಯನ್ನು ಹೀಗೆ ಬೆಳೆಯಗೊಟ್ಟರೆ ಕರ್ನಾಟಕದಲ್ಲಿ ನಾಲ್ಕಾರು ಪಾಕಿಸ್ತಾನಗಳು ಸಾಂಸ್ಕೃತಿಕವಾಗಿ ಕಡೆತನಕ ಉಳಿಯಬಹುದು. ವಿದ್ಯಾಸಂಸ್ಥೆಗಳ ಏಕಸೂತ್ರತೆ, ಪಠ್ಯಪುಸ್ತಕಾದಿಗಳ ಐಕ್ಯ, ಭಾಷಾ ಮರ್ಯಾದೆಯ ಒಮ್ಮತ ಇತ್ಯಾದಿ ಸಾಮ್ಯಗಳನ್ನು ಸಾಧಿಸಿಕೊಳ್ಳದೆ ಕನ್ನಡ ಸಂಸ್ಕೃತಿಯ ಪುನರುಜ್ಜೀವನದ ಬಗ್ಗೆ ಮಾತನಾಡುವುದು ನಿಷ್ಫಲವೇ ಸರಿ. ಸಮವಸ್ತ್ರಧಾರಿಗಳಾದ ಒಂದು ರಾಜ್ಯದ ಸೈನಿಕರ ಪಂಕ್ತಿಯಂತೆ ಕನ್ನಡಿಗರ ಜೀವನದ ನಾನಾ ಕಾರ್ಯಕ್ಷೇತ್ರಗಳಲ್ಲಿ ಒಮ್ಮತದ ನಡೆಯುಂಟಾದ ಹೊರತು ಸಾಂಸ್ಕೃತಿಕ ಸಾಮರಸ್ಯವುಂಟಾಗದು; ಪರಸ್ಪರ ಸೌಹಾರ್ದ ವೃದ್ಧಿ ಹೊಂದದು, ಐಕ್ಯ ಉಂಟಾಗದು, ಏಳಿಗೆ ನನಸಾಗದು.

ಅನುಕರಣಬುದ್ಧಿಯು ಸಂಸ್ಕೃತಿ ಸಂವರ್ಧನದ ಮೊದಲ ಹಂತ. ನೆರೆಹೊರೆಯ ಪ್ರಾಂತಗಳವರ ಉತ್ತಮ ಗುಣಗಳನ್ನು ಅನುಸರಿಸುವುದು

ಅಭಿಮಾನಕ್ಕೆ ಕುಂದಲ್ಲ. ಮರಾಠರ ಒಕ್ಕಟ್ಟು ಮತ್ತು ಸಂಸ್ಥಾನಿರ್ಮಾಣ ಕೌಶಲ, ತಮಿಳರ ಕಾರ್ಯಸಾಧಕತೆ ಮತ್ತು ಪರಿಸ್ಥಿತಿಗೆ ಅನುಗುಣವಾಗಿ ನಡೆದುಕೊಳ್ಳುವ ಜಾಣ್ಮೆ, ತೆಲುಗರ ಗಂಡುತನ ಮತ್ತು ಆತ್ಮಗೌರವ – ಇವುಗಳನ್ನು ನಾವು ಕಲಿಯಬೇಕು. ಬನಿಯಾ ಜನರ ವ್ಯಾಪಾರ ಕೌಶಲ, ಯಾವ ಕೆಲಸವನ್ನೂ ಮಾಡುವೆವೆಂಬ ಮುಸಲ್ಮಾನರ ವೃತ್ತಿಗೌರವ, ಭಿಕ್ಷಾಧಿಕಾರಿಯಾಗಿದ್ದರೂ ಆತ್ಮರಕ್ಷಣೆಗೆ ಸದಾ ಸಿದ್ಧನಾಗಿರುವ ಶೀಖನ ಶೌರ್ಯ – ಇವುಗಳು ಅನುಕರಣೀಯವೆ.

ಹಿಂದಿನ ಕಾಲದ ತತ್ವಗಳನ್ನು, ಧರ್ಮವನ್ನು, ಮಹಾತ್ಮರನ್ನು, ಪೂಜಿಸುವ ದೌರ್ಬಲ್ಯವುಳ್ಳವರು ಇದ್ದವರೊಳಗೆ ಹೆಚ್ಚು ಆಧುನಿಕತೆಯುಳ್ಳ ಬುದ್ಧನನ್ನು ಆರಾಧಿಸಲು ತೊಡಗಬೇಕು. ಅವನ ವೈಜ್ಞಾನಿಕ ಹಾಗೂ ಧೀರೋದಾರ ದೃಢಭಾವಗಳನ್ನು ಆದರ್ಶವಾಗಿಟ್ಟುಕೊಳ್ಳಬೇಕು ಮತ್ತು ಗ್ರಂಥಗಳ ಅಥವಾ ಪ್ರವಾದಿಗಳ ಹಾಗೂ ಮಠಾಚಾರ್ಯರ ಹೆಸರಿನ ಮೇಲೆ ಆಣೆಯಿಟ್ಟು ವಾದಿಸುವ ಅಂಧಮಾರ್ಗವನ್ನು ತ್ಯಜಿಸಿ ಸ್ವತಃ ತನ್ನ ಅನುಭವದ ಮೇಲೆ ನಿಂತು ವಾದಿಸುವ ವಿಚಾರ ಸಾಮರ್ಥ್ಯವನ್ನು ಕೈಗೂಡಿಸಿಕೊಳ್ಳಬೇಕು. ಇಷ್ಟಾದ ಹೊರತು ನಮ್ಮಲ್ಲಿ ಹೆಸರಾಂತ ವಿಜ್ಞಾನಿಗಳಾಗಲೀ, ಕಲೆಗಾರರಾಗಲೀ, ತತ್ವಜ್ಞರಾಗಲೀ, ಸಾಹಿತಿಗಳಾಗಲಿ ಉದಯಿಸರು; ರಾಷ್ಟ್ರಮಾನ್ಯ ಇಲ್ಲವೇ ಲೋಕಮಾನ್ಯ ಪುರುಷರು ಅವತರಿಸರು; ನಮ್ಮ ಪುನರುತ್ಥಾನವಾಗದು. ಪುಲಿಕೇಶಿ, ಮಯೂರಶರ್ಮ, ಜಕ್ಕಣ್ಣ, ಶೇಷಣ್ಣ, ಪಂಪ, ಮಾಧವಾಚಾರ್ಯರು ಪುನಃ ಅವತರಿಸಬೇಕಾದರೆ, ಅಂಥವರು ನಾಡಿನಲ್ಲಿ ಹುಟ್ಟಬೇಕಾದರೆ ಮತ್ತು ರೂಪಗೊಳ್ಳಬೇಕಾದರೆ ಅಂತಹ ವಾತಾವರಣಗಳು ನಿರ್ಮಿತವಾಗುವುದಗತ್ಯ. ಈ ಕನಸುಗಳು ಕನ್ನಡಿಗರಲ್ಲಿ ಖಚಿತವಾಗಿ ಮೂಡಿ ನೆಲೆ ನಿಂತರೆ, ಅವುಗಳ ಬಗೆ ಉತ್ಕಂಠೆಯುಂಟಾದರೆ, ಉತ್ಸಾಹವೆದ್ದರೆ ಕನ್ನಡಿಗರು ಕಾರ್ಯಸಾಧನೆಯಲ್ಲಿ ಯಾವ ಪ್ರಾಂತದವರಿಗೂ ಹಿಂದುಳಿಯರು.

೨. ಸಾಹಿತ್ಯದ ಸಿದ್ಧಿ

ಸಾಹಿತ್ಯದಲ್ಲಿ ಒಂದು ಸಿದ್ಧಿಯಿದೆ. ಅದರ ಬಗ್ಗೆ ಅನೇಕರು ಅನೇಕ ವಿಧವಾಗಿ ಹೇಳಿದ್ದಾರೆ. ಕಾಂತಾ ಸಮ್ಮಿತಿಯಿಂದ ಸದುಪದೇಶ ಲಭಿಸುವುದು ಎಂಬುದು ಹಳೆಯ ಮಾತು. ಬ್ರಹ್ಮಾಸ್ವಾದ ಸಹೋದರವಾದ ರಸಾಸ್ವಾದ ಸಿಗುವುದೆಂಬುದೂ ಹಾಗೇ.

ರಸಾಸ್ವಾದವೆಂದರೆ ತಲ್ಲೀನತೆ, ರಸಮಯತೆ, ವರ್ಣಿತಾನುಭವದೊಡನೆ ಸಾಮರಸ್ಯ ಹೊಂದುವುದು, ವರ್ಣಿತಭಾವದೊಡನೆ ತತ್ಸದೃಶವಾದ ನಮ್ಮ ಭಾವ ಏಕೀಕೃತವಾಗುವುದು. ಮನುಷ್ಯನ ಪ್ರಧಾನ ಗುಣವಾದ ಸಹಾನುಭೂತಿಯೇ ಇದರ ತಳಹದಿ. ಸಹಾನುಭೂತಿಯು ಸಹಭಾವ ಜನ್ಯ, ಏಕಜೀವ ದೇಹದ್ವಯ ನ್ಯಾಯಜನ್ಯ, ಯೋಗದಲ್ಲಿ ಹೇಳಿದ ಮೊದಲ ಗುಣವಾದ ಮೈತ್ರೀಭಾವ ಜನ್ಯ.

ಮಿತ್ರತ್ವಕ್ಕಿಂತ ಪವಿತ್ರತರವಾದ ಮಾನವ್ಯ ಸಂಬಂಧವಿಲ್ಲ, ಅದರಷ್ಟು ಮಧುರವಾದ ಅನುಭವವು ಮತ್ತೊಂದಿಲ್ಲ ಎಂಬುದು ಬಹುಜನರ ಅನುಭಕ್ಕೆ ಬಂದ ವಿಷಯ. ಜೀವನದಲ್ಲಿ ಅನೇಕರಿಗೆ ಅನೇಕ ಕಾರಣಗಳಿಂದ ನಿಜ ಮೈತ್ರಿಯ ಅನುಭವವು ಬಹಳ ಕಾಲ ಸಿಗಬಹುದು. ರಾಜದ್ವಾರದಲ್ಲೂ ಸ್ಮಶಾನದಲ್ಲೂ ನೆರವಾಗುವ ಬಂಧು ದೊರೆತಿರಲಿಕ್ಕಿಲ್ಲ; ಸುಖ ದುಃಖಗಳಲ್ಲಿ ಸಮಭಾಗಿಯಾಗಿ ನಿಲ್ಲುವ ಮತ್ತೊಂದು ಜೀವ ನಚ್ಚಿನದಾಗಿ ಕಡೆ ತನಕ ಉಳಿದಿರಲಿಕ್ಕಿಲ್ಲ. ಬಾಳೊಂದು ಸುಖದುಃಖ ಸಂಗಮ, ಗುಣದೋಷಗಳ ಮಿಶ್ರಣ, ಅತ್ಯುಪಸ್ಥಿತಿ ಅನುಪಸ್ಥಿತಿಗಳ ಕೂಡಿಕೆ. ಆದುದರಿಂದ ಅನೇಕರಿಗೆ ಅಮೃತಗಳಿಗೆಗಿಂತ ವಿಷಗಳಿಗೆಗಳೇ ಹೆಚ್ಚಾಗಿರಬಹುದು. ಇನ್ನಿತರರಿಗೆ ಸುಖದ ದಿನಗಳು ಹೆಚ್ಚಿದರೂ ಅವು ಬೇಗನೆ ಕಳೆದು ಹೋದಂತೆನಿಸುವುದಲ್ಲದೆ ದುಃಖದ ದಿನಗಳು ಬಹಳ ಉದ್ದುದ್ದವಾಗಿ ತೋರುವುವು. ಈ ನಾನಾ ಕಾರಣಗಳಿಂದ ಜೀವನದಲ್ಲಿ ಎಷ್ಟೋ ಕಾಲಗಳಲ್ಲಿ ಅತೃಪ್ತಿ ಒಡ ಮೂಡಬಹುದು. ಆಗ ಸಾಹಿತ್ಯಾದಿ ಕಲಾಸ್ವಾದದಿಂದ ಅಂಥ ಅಸಮಾಧಾನಕರ ಸ್ಥಿತಿಯನ್ನು ಮರೆತು ಮನಸ್ಸನ್ನು ಉಲ್ಲಾಸಗೆಡದಂತೆ ಇಟ್ಟುಕೊಳ್ಳಬಹುದು. ರಸಾಸ್ವಾದವು ಸದಾ ಆನಂದಕರವಾದ ಅನುಭವ. ಕರುಣರಸದ ಆಸ್ವಾದನದಲ್ಲಿ ಕೂಡ ಆನಂದವಿದೆಯೆಂಬುದು ಸೂಕ್ಷ್ಮವಾಗಿ

ವಿಚಾರಿಸಿದರೆ ತಿಳಿಯದಿರದು. ಅದು "ದುಃಖ ಹೆತ್ತ ಸುಖ". ಪರದುಃಖ ಸಹಾನುಭೂತಿಯಲ್ಲಿ ಸಾತ್ವಿಕವಾದ ಒಂದು ಆನಂದವಿದೆ. ಆ ಅನುಭವದಲ್ಲಿ ಅದು ಅನ್ಯರದೆಂಬ ಜ್ಞಾನವಿದೆ, ಅನ್ಯರದಾದರೂ ತನ್ನದೇ ಎಂಬ ಭಾವನೆಯಿದೆ. ಇದರಿಂದ ತನ್ನದೇ ಆಗಿದ್ದರೆ ಉಂಟಾಗುತ್ತಿದ್ದ ವಾಸ್ತವಿಕ ನಷ್ಟದ ಅನುಭವವಿಲ್ಲ. ಅನ್ಯರದೆಂಬ ಉಪೇಕ್ಷಭಾವವಿಲ್ಲ. ಅವಾಸ್ತವಿಕವೆಂಬ ಜ್ಞಾನದ ಬಗ್ಗೆ ಲಕ್ಷ್ಯವಿಲ್ಲ. ಹೀಗೆ ರಸವೆಂಬುದೊಂದು ಆತ್ಮಾನಂದ. ಇಂಥ ವಿಲಕ್ಷಣದ್ದಿರುವುದರಿಂದಲೇ ಇದನ್ನು ಬ್ರಹ್ಮಾಸ್ವಾದ ಸಹೋದರ ಎನ್ನುವುದು.

ಇದರ ಮೇಲೆ ವಾಸ್ತವಿಕ ಪ್ರತ್ಯಕ್ಷಕ್ಕಿಂತ ಮಾನಸಿಕ ಪ್ರತ್ಯಕ್ಷವೇ ನಮಗೆ ಹೆಚ್ಚು. ಹತ್ತಿರದ್ದೆಂಬುದು ಸರ್ವವಿಧಿತವಾದುದು. ಈ ಮಾನಸಿಕ ಪ್ರತ್ಯಕ್ಷವು ಕಾವ್ಯಾದಿ ಕಲೆಗಳಲ್ಲಿ ಕೇವಲ ಆನಂದ ರೂಪದ್ದೇ ಇರುವುದರಿಂದ ಅವು ಬಹುಮಟ್ಟಿಗೆ ಆಧ್ಯಾತ್ಮಿಕ ಅಂಶಗಳಿಂದ ತುಂಬಿವೆ ಎಂದು ಹೇಳಲಾಗುತ್ತದೆ. ಇಹಪರಗಳೆರಡರ ಅಂತ್ಯದ ಗುರಿ ಆನಂದ, ಇದ್ದ, ಇರುತ್ತಿರುವ ಮತ್ತು ಇರುವ ಅನುಭವಗಳೆಲ್ಲ ಆನಂದ ಸ್ವರೂಪದವೆಂಬ ಔಪನಿಷದಿಕ ಸತ್ಯಕ್ಕೆ ರಸವು ಆಧಾರಭೂತವಾಗಿದೆ. ಇದರಿಂದ ಕಲಾರಾಧನೆಯು ಸದಾನಂದ ಸ್ಥಿತಿಗೊಯ್ಯುವ ಒಂದು ಶಿಕ್ಷಣ, ತರಬೇತು ಎಂದರೂ ಎನ್ನಬಹುದು. ಯೋಗ ಶಾಸ್ತ್ರಾದಿ ಕಠಿಣ ಮಾರ್ಗಗಳಿಂದ ಶೀಘ್ರವಾಗಿ ಮುಕ್ತಿಯನ್ನು, ಆತ್ಮದ ಮೂಲಸ್ಥಿತಿಯನ್ನು, ಕೇವಲತ್ವವನ್ನು ಪಡೆಯಲಾದರೆ ಕಲೋಪಾಸನದಿಂದ ಸುಲಭವಾಗಿ ಕ್ರಮೇಣ ಅದೇ ಗುರಿಯನ್ನು ಸಾಧಿಸಬಹುದೆಂಬುದೇ ರಸಿಕರ ಸಿದ್ಧಾಂತ. ಅಸಂಸ್ಕೃತ ಜಗತ್ತಿನಿಂದ ಕಲಾ ಸಂಸ್ಕಾರ ನಮ್ಮನ್ನು ಕಾಂತಾ ಸಮ್ಮಿತಿಯ ಉಪದೇಶ ರೂಪದ ರಸಾನುಭವದಿಂದ ಉದಾತ್ತತೆಗೊಯ್ಯುವುದು. ಉದಾತ್ತತೆಯ ಚರಮ ಸೀಮೆಯಲ್ಲೇ ಕೈವಲ್ಯವಿರುವುದು. ವಿಶ್ವ ಪ್ರೀತಿಯಿರುವುದು, ಅಣುವಿಗೆ ಮಹದ್ಭಾವ ಬರುವುದು, ಆತ್ಮವಿಕಾಸವಾಗಿ ವಿಶ್ವಾತ್ಮವಾಗುವುದು. ವಿಶ್ವದಲ್ಲಿ ಒಂದೆಡೆಯಿರುವ ಭಾವ ಹೋಗಿ ಎಲ್ಲೆಡೆಯ ವ್ಯಾಪ್ತಿ ಬಂದು ಅನಾಸಕ್ತಿ ಯೋಗದಿಂದ ಯೋಗದಲ್ಲಿದ್ದು ಭೋಗಿಸುತ್ತಿರುವ ಅಪೂರ್ವ ವ್ಯಾಹತಸ್ಥಿತಿ ಪ್ರಾಪ್ತವಾಗುವುದು. ಇದು ವಿಶ್ವದ ಸತ್ಯ; ಸೃಷ್ಟಿ, ಸ್ಥಿತಿ, ಲಯಗಳ ಒಳಗುಟ್ಟು. ಎಲ್ಲವೂ ನಶ್ವರವೆಂಬ ಮಾತಿಗೆ, ವಸ್ತುಗಳ ತಾತ್ಕಾಲಿಕತೆಯ ಮೂಲಕ ಅವುಗಳ ಬೆಲೆಯನ್ನು ನಿರ್ಣಯಿಸುವ ಅನುಭವಕ್ಕೆ ನಾಶವೆಂದು ತಿಳಿಯಬೇಕು. ಎಲ್ಲವೂ ಆತ್ಮ, ಅದು ಏಕಮೇವಾದ್ವಿತೀಯ, ಶಾಶ್ವತ ಎಂಬ ಮಾತಿಗೆ ವಸ್ತುಗಳ ಜೀವನಸೂತ್ರದ, ಭಾವತರಂಗಿಣಿಯ ನೈರಂತರ್ಯದ ಆಧಾರದ ಮೇಲೆ ಅವುಗಳ ಬೆಲೆಯನ್ನು ನಿರ್ಣಯಿಸುವ ಅನುಭವಕ್ಕೆ ನಿತ್ಯತ್ವ ಎಂದು ತಿಳಿಯಬೇಕು.

ಕಲಾ ಸಾಧನದಿಂದ, ಸಾಹಿತ್ಯಾನುಶೀಲನದಿಂದ ಕಾಲಕಾಲಕ್ಕೆ ಬುದ್ಧಿಭಾವನೆಗಳ ಸಂಸ್ಕಾರ ಉದಾತ್ತತರವಾಗುತ್ತ ಹೋಗುವುದೇ ಸಾಹಿತ್ಯಾದಿ ಕಲೆಗಳ ನಿಕಷ, ಸತ್ವನಿರ್ಣಾಯಕ ಫಲಿತಾಂಶ. ಕಲಾವಸ್ತು ಮತ್ತು ರಸಗ್ರಾಹಕ ಹೃದಯ ಇವುಗಳ ಪರಸ್ಪರ ಮೂಲ್ಯಗಳ ಮೇಲೆ ಸಿದ್ಧಿಯ ನಿಶ್ಚಿತಾನಿಶ್ಚಿತತೆಗಳು ಅವಲಂಬಿಸಿವೆ.

ಮೇಲಿನ ಅಂಶವನ್ನರಿಯದೆ ಹಲವರಿಂದು 'ನಮಗೆ ಅನ್ನ ಕೊಡುವ ಸಾಹಿತ್ಯ ಬೇಕು. ಬಟ್ಟೆ ಕೊಡುವ ಕಲೆಬೇಕು' ಎಂದು ಮುಂತಾಗಿ ಅರಚುತ್ತಾರೆ. ಆಹಾರ ನಿದ್ರಾಭಯ ಮೈಥುನಾದಿಗಳು ಪ್ರಾಣಿಗಳಿಗೆ ಹೇಗೋ ಹಾಗೇ ಮಾನವನಿಗೂ ಅನಿವಾರ್ಯ ಅವಶ್ಯಕತೆಗಳೆಂಬುದನ್ನು ಯಾರಿಗೂ ಅಲ್ಲಗಳೆವ ಧೈರ್ಯ ಬರಲಾರದು. ಆದರೆ ಅವುಗಳನ್ನೊದಗಿಸುವ ಸಾಧನಗಳು ಬೇರೆ. ಅವುಗಳು ಜೀವನ ವೃಕ್ಷಕ್ಕೆ ಗೊಬ್ಬರವಿದ್ದ ಹಾಗೆ; ಸಂಸ್ಕೃತಿಯ ಅಂಶವು ಸೂರ್ಯನ ಬೆಳಕಿದ್ದ ಹಾಗೆ. ಅದರ ಸಾಧನೆ ಕಲೆ. ಸೂರ್ಯನು ಹೇಗೆ ಗೊಬ್ಬರವನ್ನು ಕೊಡಲಾರನೋ ಹಾಗೇ ಸಾಹಿತ್ಯಾದಿ ಕಲೆಗಳೂ ನೇರವಾಗಿ ಅನ್ನವಸ್ತ್ರಗಳನ್ನು ಎಲ್ಲೆಡೆಯೂ ದೊರಕಿಸಿಕೊಡುವುದು ಅಸಾಧ್ಯ. ಕೆಲವೆಡೆ ಮಾರ್ಗಾಂತರದಿಂದ ದೊರಕಿಸಿಕೊಡಬಹುದು. ಸೂರ್ಯನು ಸಮುದ್ರದ ನೀರನ್ನು ಪೃಥ್ವಿಗೆ ಒದಗಿಸಿಕೊಟ್ಟಹಾಗೆ. ಬೆಳಕು ಮತ್ತು ಶಾಖಗಳನ್ನು ಕೊಡುವುದು ಹೇಗೆ ಸೂರ್ಯನ ನೇರವಾದ ಕೆಲಸವೋ ಹಾಗೆ ಸಂಸ್ಕೃತಿ ಮತ್ತು ಜ್ಞಾನಗಳನ್ನು ಕೊಡುವುದು ಕಲೆಯ ಕರ್ತವ್ಯ. ನೀರೊದಗಿಸುವುದು, ಸೂರ್ಯನಿಗೆ ಗೌಣಕರ್ತವ್ಯ ಇಲ್ಲವೆ ಅವನ ನೇರವಾದ ಕರ್ತವ್ಯದ ಔಪಾಧಿಕ ಪರಿಣಾಮ. ಅದೇ ಪ್ರಕಾರ ಸಾಹಿತ್ಯಾದಿ ಕಲೆಗಳ ಕಾರ್ಯದಿಂದಲೂ ಕೆಲವರಿಗೆ ಹಣಸಿಗಬಹುದು, ವಸ್ತ್ರಾದಿ ಪಾರಿತೋಷಕ ಸಿಗಬಹುದು, ಆದರದು ಗೌಣ ಮತ್ತು ಔಪಾಧಿಕ. ಇನ್ನು ರಸಾನುಭೂತಿಯ ಮೂಲಕ ಜನತೆಯಲ್ಲಿ ಹೃದಯ ಪರಿವರ್ತನವನ್ನುಂಟುಮಾಡಿ ಅದರಿಂದ ಅವರು ತಮ್ಮ ಭೌತಿಕ ಏಳಿಗೆಯನ್ನು ಸಾಧಿಸಿಕೊಳ್ಳುವ ಬುದ್ಧಿಯನ್ನು ತಾಳಿ ಅನ್ನವಸ್ತ್ರಗಳು ಎಲ್ಲರಿಗೂ ದೊರೆವಂತೆಸಗಿದರೆ ಅಂಥ ಕಲೆಗಾರ ಸುಧನ್ಯನೆಂದು ಈ ಕೆಟ್ಟಕಾಲದಲ್ಲಿ ಯಾರೂ ಹೇಳದಿರಲಾರರು. ಆದರೆ ಸಾಮಾನ್ಯರಿಂದ ಒಮ್ಮಿಂದೊಮ್ಮೆ ಕ್ರಾಂತಿಕಾರಕವೆನಿಸುವ ಕಲಾವಸ್ತುವನ್ನು ಒತ್ತಾಯಿಸಿ ತಯಾರಿಸ ಹೋದರೆ ಅರೆಗರುವಿನಂತಹ ಕೃತಿಗಳು ಪತನವಾಗಿ ಹುಟ್ಟಿಬಂದಾವು.

ಕನ್ನಡ ಸಾಹಿತ್ಯವಿಂದು ಶಾಖೋಪಶಾಖೆಗಳಿಂದ ಹಬ್ಬಿ ಬೆಳೆಯುತ್ತಿದೆ ಎಂಬುದು ನಿಜ. ಆದರೆ ಅದು ನಂದನದ ಮಂದಾರದಂತೆ ಬೆಳೆಯದೆ ರಸ್ತೆಯ ಬದಿಯ ಮುಟ್ಟಿದರೆ ಮುನಿಯಂತೆ ಹಬ್ಬಿ ಬೆಳೆಯುತ್ತಿದೆ. ಎಲ್ಲಿ ನೋಡಿದರೂ

ಅಚ್ಚಾಗಿ ರಾಶಿರಾಶಿಯಾಗಿ ತೋರುವ ಬರಹಗಳಲ್ಲಿ ಪದ, ಅರ್ಥ, ವಾಕ್ಯದೋಷಗಳ ತಾಂಡವನೃತ್ಯವನ್ನಲ್ಲದೆ ಬೇರೊಂದನ್ನು ಕಾಣಲು ಶಕ್ಯವಿಲ್ಲ. ಇದರ ಜೊತೆಗೆ ಅನ್ಯಸರಸ್ವತೀ ವ್ಯಭಿಚಾರ ಕೂಡ ಪ್ಲೇಗಿನಂತೆ ಹರಡುತ್ತಿದೆ. ಪದ, ವಾಕ್ಯ, ಅರ್ಥ, ಅಭಿಪ್ರಾಯಾದಿಗಳ ಚೌರ್ಯವು ತಲೆಹಾಕಿದೆ. ಬರಹಗಾರರಲ್ಲಿ ಶಕ್ತಿ ಸಂಪಾದನೆಯಿಲ್ಲದೆ ಕೀರ್ತಿ ಸಂಪಾದನೆ ಮಾಡುವ ಹುಸಿ ಹಂಬಲು ಹೆಚ್ಚುತ್ತಿರುವುದು ವಿಷಾದಕರ. ಜಗಲಿ ಹಾರದೆ ಗಗನಕ್ಕೆ ಹಾರುವ ಪ್ರವೃತ್ತಿಯು ಕನ್ನಡ ನಾಗರಿಕತೆಗೆ ಲಾಂಛನಾಸ್ಪದವಾಗಿದೆ. ಇಂತಹ ಕೃತಕತೆಯು ಜೀವನದಲ್ಲಿ ಬೇರು ಬಿಡುತ್ತ ಹೋದರೆ ನಾವು ಅಧೋಗತಿಗಿಳಿಯುವುದರಲ್ಲಿ ಎಳ್ಳಷ್ಟೂ ಸಂದೇಹವಿಲ್ಲ. ದೊಡ್ಡವರೆನಿಸಿಕೊಂಡವರಲ್ಲೇ ಸಾಕಷ್ಟು ದೊಡ್ಡಸ್ತಿಕೆ ಇಲ್ಲದ ಕಾರಣ ಅವರಿಂದ ಚಿಕ್ಕವರು ನ್ಯಾಯವಾದ ಮಾರ್ಗದರ್ಶನವನ್ನು ಪಡೆಯಲಾರದಾಗಿದ್ದಾರೆ. ಇದರಿಂದಲೇ ರಸಿಕ ಲೋಕ ಕೂಡ ಕತ್ತಲಲ್ಲಿ ಎಡಹುತ್ತ ತಡಹುತ್ತ ಸಾಗಿರುವುದರಲ್ಲದೆ ಸಂಸ್ಕೃತ ಅಭಿರುಚಿಯನ್ನು ಬೆಳೆಸಿಕೊಳ್ಳುವ ಪ್ರಯತ್ನದತ್ತ ವಿಮುಖವಾಗಿದೆ. ನಿತ್ಯ ವ್ಯವಹಾರದಲ್ಲಿ ಹೇಗೋ ಹಾಗೆ ನಮ್ಮಲ್ಲಿ ಒಂದು ವಿಧದ ಬಿಡಲಾರದ ಮೈಗಳ್ಳತನ ತಲೆ ಹಾಕಿದೆ. ಇದು ಮೃತ್ಯು ಸ್ವರೂಪದ್ದೇ ಸರಿ.

ಆರ್ಥಿಕ ಪ್ರಪಂಚದಲ್ಲಿ ಸೋಶಲಿಜಂ–ಸಾಮ್ಯವಾದ ಸರ್ವಹಿತವೆನಿಸಬಹುದು. ಆದರೆ ಕಲಾಪ್ರಪಂಚದಲ್ಲಿ ಅದು ಸಾಧ್ಯವಿಲ್ಲ. ಅಭಿರುಚಿಯಲ್ಲಿ ಒಂದು Standard ಮಟ್ಟವನ್ನು ಕಾಲಕ್ರಮೇಣ ಸಾಧಿಸಬಹುದೆಂಬುದು ಸಾಮಾನ್ಯವಾದ ಸಾಮೂಹಿಕ ಅಭಿಪ್ರಾಯವಲ್ಲದೆ ವೈಜ್ಞಾನಿಕವಲ್ಲ. ಇನ್ನು ರುಚಿಭೇದ ಇರಬಹುದಾದರೂ ಆ ಭಿನ್ನರುಚಿಗಳೆಲ್ಲವೂ ಮೇಲು ಮಟ್ಟದವಾಗಬೇಕೆಂಬುದು ಗುರಿ. ಆದರೆ, ವಾಸ್ತವ ಪ್ರಪಂಚದಲ್ಲಿ ಅದೂ ಸಂದೇಹಾಸ್ಪದವಾದ ಮಾತೇ. ಆದುದರಿಂದ ರಸಿಕತೆಯಲ್ಲಿ – ಅದರಲ್ಲೂ ಕಲಾನಿರ್ಮಾಪಕರಲ್ಲಿ Aristrocracy - ಶ್ರೀಮಂತಿಕೆ ತಲೆಯೆತ್ತಿದಾಗ ಮಾತ್ರ ರಾಷ್ಟ್ರೀಯ ಕಲಾ ಸಂಸ್ಕೃತಿಯು ವಿಶ್ವದಲ್ಲಿ ಒಂದು ಸ್ಥಾನವನ್ನು ಪಡೆಯಬಹುದು. ಹಾಗಲ್ಲದೆ Mass Appeal – ಪಾಮರರಂಜನೆಗೇ ಮೀಸಲಿಡುವೆವೆಂಬ ಕೃತಪ್ರತಿಜ್ಞಾಭಾವದಿಂದ ಅತಿ ಸರಳತೆಯ ಮಾರ್ಗವನ್ನು ತುಳಿಯಹತ್ತಿದರೆ ಹರಿಜನರು ಬ್ರಾಹ್ಮಣರ ಮಟ್ಟಕ್ಕೆ ಬರುವುದರ ಬದಲು ಬ್ರಾಹ್ಮಣರೇ ಹರಿಜನರ ಮಟ್ಟಕ್ಕಿಳಿದಂತಾದೀತು. ಈ ದೃಷ್ಟಿಯಿಂದ ಕನ್ನಡದ ಮುಖಂಡರೆನಿಸಿದ ಬರಹಗಾರರು ವಿಚಾರಮಾಡಿ ನಾಡಿನ ಕಲಾ ಸಂಸ್ಕೃತಿಗೆ ಈ ದುಷ್ಕಾಲದಲ್ಲಿ ದಾರಿ ತೋರಲು ಮುಂದೆ ಬರುವರೆಂದು ಆಶಿಸಬಹುದೇ?

೩. ವಿಶ್ವಶಾಂತಿ

ಇಂದು ವಿಶ್ವಶಾಂತಿಯ ಮಾತನ್ನು ಬಹಳ ಜನರ ಬಾಯಲ್ಲಿ ಕೇಳುತ್ತೇವೆ. ಅದಕ್ಕಾಗಿ ನಾನಾ ಯೋಜನೆಗಳನ್ನು ರಚಿಸಿಕೊಟ್ಟವರೂ ಇದ್ದಾರೆ. ಜಾಗತಿಕ ಸರಕಾರ ರಚನೆ, ಅಂತರರಾಷ್ಟ್ರೀಯ ಮಹಾಮಂಡಲ ಮುಂತಾದುವನ್ನು ರಚಿಸಬೇಕೆಂದು ಎಲ್ಲರೂ ಹೇಳತೊಡಗಿದ್ದಾರೆ. ಆದರೆ ಜಗತ್ತಿನ ಯುದ್ಧಪ್ರಿಯ ನಾಯಕರು ಮಾತ್ರ ಮಾತಾಡದೆ ತಮ್ಮ ಕಾರ್ಖಾನೆಗಳಲ್ಲಿ ಸಿಡಿಮದ್ದುಗಳನ್ನು ಅಹೋರಾತ್ರಿ ತಯಾರಿಸುತ್ತಲಿದ್ದಾರೆ. ಅಮೇರಿಕದ ಸಂರಕ್ಷಣಾ ಯೋಜನೆಯ ಮುನ್ನಡೆಯನ್ನು ಅವಲೋಕಿಸಿದರೆ, ಅದರ ಕಮ್ಯುನಿಸ್ಟ್ ದ್ವೇಷವನ್ನು ಕಂಡರೆ ಇಂದೋ ನಾಳೆಯೋ ಕಾಲು ಕೆರೆದು ರಶ್ಯವನ್ನು ಯುದ್ಧಕ್ಕೆಳೆದು ಮೂರನೆಯ ಮಹಾಯುದ್ಧವನ್ನಾರಂಭಿಸಿಬಿಡುವುದೋ ಎಂಬಂತಿದೆ. ರಷ್ಯವಾದರೂ ಇದರ ಪ್ರತಿಭಟನೆಗಾಗಿ ಒಂದಾದ ಮೇಲೊಂದರಂತೆ ಪಶ್ಚಿಮ ಯುರೋಪಿನ ರಾಷ್ಟ್ರಗಳಲ್ಲಿ ತನ್ನ ವರ್ಚಸ್ಸನ್ನು ಸ್ಥಾಪಿಸುತ್ತ ನಡೆದಿದೆ. ಚಿಕ್ಕ ಚಿಕ್ಕ ರಾಜ್ಯಗಳಲ್ಲಿ ಆಗಲೇ ಕಮ್ಯೂನಿಸ್ಟರ ಅಧಿಕಾರವನ್ನು ನೆಲೆಗೊಳಿಸಿ ತದಿತರ ಮುಖಂಡರನ್ನು ಬೇಟೆಯಾಡಲು ಹಚ್ಚಿದೆ. ಮೊನ್ನೆ ಮೊನ್ನೆ ಜೆಕೋಸ್ಲೋವಾಕಿಯಲ್ಲಿ ಇಂಥದೊಂದು ಪ್ರಕರಣ ನಡೆಯಿತು. ಕಳೆದ ಮಹಾಯುದ್ಧದಿಂದ ಬಹಳ ನಷ್ಟಕ್ಕೆ ಗುರಿಯಾದರೂ ಅತಿ ರಭಸದಿಂದ ಆತ್ಮರಕ್ಷಣೆಗಾಗಿ ಸಿದ್ಧತೆ ನಡೆಸಿದೆ. ಅಮೇರಿಕವಾದರೋ ಚೀನದಲ್ಲಿಯ ಕಮ್ಯೂನಿಸ್ಟರನ್ನು ಬಗ್ಗು ಬಡಿಯಲು ಅಸ್ತ್ರಧಾರೆಯಿಂದ ಸಹಾಯವನ್ನು ಸಲ್ಲಿಸುತ್ತಿದೆ. ಕೋಟಿಗಟ್ಟಲೆ ಡಾಲರನ್ನು ನೀಡುವ ಯೋಜನೆ ಮಾಡಿರುವುದಲ್ಲದೆ ಇತ್ತೀಚೆಗೆ ಒಂದು ಸಾವಿರ ಯುದ್ಧವಿಮಾನಗಳನ್ನು ಚಿಯಾಂಗರ ನೆರವಿಗಾಗಿ ಕಳುಹಿಸಿಕೊಟ್ಟಿದೆ. ಇದೇ ಪ್ರಕಾರ ಗ್ರೀಸ್, ತುರ್ಕಿ ಮುಂತಾದ ರಾಷ್ಟ್ರಗಳಿಗೂ ಜನ, ಧನ, ಶಸ್ತ್ರಾಸ್ತ್ರಗಳನ್ನು ಅವಿಶ್ರಾಂತವಾಗಿ ರವಾನಿಸುತ್ತಿದೆ.

ಜಗತ್ತಿನ ಲಕ್ಷ್ಯವೆಲ್ಲ ಮೇಲಿನ ಕಾರಣಗಳಿಗಾಗಿ ರಷ್ಯ ಅಮೇರಿಕಗಳತ್ತ ಕೇಂದ್ರೀಕೃತವಾಗಿದೆ. ಈ ಎರಡು ಪ್ರಬಲ ರಾಷ್ಟ್ರಗಳ ತತ್ವಪ್ರಣಾಲಿ ಯಾವುದೇ ಇರಲಿ, ಪರಸ್ಪರರನ್ನು ತಡೆಗಟ್ಟಲು ಅವು ಅನುಸರಿಸುತ್ತಿರುವ ಧೋರಣೆಗಳಿಂದ ಚಿಕ್ಕಪುಟ್ಟ ರಾಷ್ಟ್ರಗಳ ಜೀವನದಲ್ಲಿ ಅನಿಶ್ಚಿತ ಮತ್ತು ಅನಿರೀಕ್ಷಿತ ಬದಲಾವಣೆಗಳುಂಟಾಗಲಾರಂಭಿಸಿವೆ. ಸರಕಾರ ಉರುಳುವುದು, ಮುಖಂಡರಿಗೆ

ಚಿತ್ರಹಿಂಸೆಯಾಗುವುದು, ಸಾಮಾನ್ಯರಲ್ಲಿ ಅಶಾಂತಿ, ಅತೃಪ್ತಿಗಳು ತಲೆದೋರುವುದು, ಆರ್ಥಿಕ ಪರಿಸ್ಥಿತಿ ಹದಗೆಡುವುದು, ಒಳಸಂಚು ನಡೆಯುವುದು ಮತ್ತು ಅದು ಸ್ಫೋಟವಾಗುವುದು ನಿತ್ಯದ ಮಾತಾಗಿದೆ. ಇದರ ಮೇಲೆ ಸಂಯುಕ್ತ ರಾಷ್ಟ್ರಸಂಘವೆಂಬ ಒಂದು ಬೈಗುಳದ ಕಣವಿದೆ. ಅಲ್ಲಿ ಪ್ರತಿ ಸಭೆಯಲ್ಲೂ ಅಮೇರಿಕ ಮತ್ತು ರಷ್ಯಗಳ ಪ್ರತಿನಿಧಿಗಳು ಹಣಾಹಣಿ ಜಗಳವಾಡುವುದು ಮತ್ತು ಚಿಲ್ಲರೆ ರಾಷ್ಟ್ರದ ಪ್ರತಿನಿಧಿಗಳು ಇದರಿಂದ ಬೆದರಿ ಬೆವರಿಡುವುದು, ಸಾಗಿಯೇ ಸಾಗಿದೆ. ಸಂಯುಕ್ತ ರಾಷ್ಟ್ರಸಂಘದಲ್ಲಿ ಚಿಕ್ಕಪುಟ್ಟ ರಾಷ್ಟ್ರಗಳ ವಿಶ್ವಾಸವು ಹಾರಿಹೋಗತೊಡಗಿದೆ. ಪಂಚಮಹಾಪ್ರಭುತ್ವಗಳ ಬಾಲ ಬಡಿದರೆ ಮಾತ್ರ ಅವುಗಳು ಅಲ್ಲಿ ಕುಳಿತುಕೊಳ್ಳಬಹುದು; ಇಲ್ಲವಾದರಿಲ್ಲ. ಈ ಪಂಚಮಹಾಪ್ರಭುತ್ವಗಳೆಂದರೆ ಪಂಚಮಹಾಪಾತಕಿಗಳು – ಎಲ್ಲದರಲ್ಲು ಅಧಿಕ ಪ್ರಸಂಗದ ಮಾತು, ಸ್ವಾರ್ಥಸಾಧನೆ – ಇದರ ಹೊರತು ನ್ಯಾಯಪಕ್ಷಪಾತವೆಂದೂ ಅವಕ್ಕೆ ಬೇಕಿಲ್ಲ.

ಈಗ ಕಾಶ್ಮೀರದ ಪ್ರಶ್ನೆಯನ್ನು ತೆಗೆದುಕೊಂಡರೆ ಸಂಘದ ಅನ್ಯಾಯಪರತೆಯೆನ್ನಲಾಗದಿದ್ದರೂ ನ್ಯಾಯೇತರ ಪರತೆಯನ್ನು ಸ್ಪಷ್ಟವಾಗಿ ಕಾಣಬಹುದು. ಪಾಕಿಸ್ಥಾನದ ಕುತರ್ಕಕ್ಕೂ ಹಿಂದೂಸ್ಥಾನದ ಅಂತರ್ರಾಷ್ಟ್ರೀಯ ನ್ಯಾಯದೃಷ್ಟಿಯ ಕಾರಣಬದ್ಧ ವಾದಕ್ಕೂ ಸಮಾನ ಮನ್ನಣೆ ಕೊಡುವ ಅದರ ಯೋಗ್ಯತೆಗೆ ಕನ್ನಡಿ ಬೇರೆ ಹಿಡಿಯಬೇಕೆ? ಇಂಡೋನೇಶಿಯಾದ ವ್ಯಾಜ್ಯವನ್ನು ಅರ್ಧದಲ್ಲೇ ಮೂಲೆಗೆ ಸೇರಿಸಿ ಸಂಘವು ತಣ್ಣಗೆ ಕುಳಿತಿದೆ.

ನಾಗರಿಕತೆಯು ಏರುತ್ತ ಏರುತ್ತ ಹೋಗಿ ಗೌರೀಶಂಕರ ಮುಟ್ಟಿದೊಡನೆ ತಲೆಕೆಳಗಾಗಿ ಬಿದ್ದು ಬಿಡುವುದು ಇತಿಹಾಸಕ್ಕೇನೇ ಹೊಸದಲ್ಲ. ಹದಿನಾರು ರಾಜರು ತಲೆಕೆಳಗಾದರು, ಆದರೂ ತಲೆಯೆತ್ತಿ ನಿಂತಿರುವೆ ಎಂದು ಭೂಮಿತಾಯಿಯು ಹೇಳುವುದು ಸುಳ್ಳಲ್ಲ. ಒಂದು ಕಾಲದಲ್ಲಿ ಸಾಮಾನ್ಯರಿಗೆ ಸಾಮಾನ್ಯ ಸೌಖ್ಯ ಲಭಿಸಬಹುದು; ಅದು ರಾಮರಾಜ್ಯದ ಅಮೃತಕಾಲ. ಮರುಗಳಿಗೆಯಲ್ಲಿ ಅನೇಕ ಸಾವಿರ ವರ್ಷ ಜನಸಾಮಾನ್ಯರಿಗೆ ಅಸಾಮಾನ್ಯವಾದ ಅಸುಖ ಅಂಟಿಕೊಳ್ಳುವುದು – ಇದೇ ಚಕ್ರ ಅನಾದಿಯಿಂದ ತಿರುಗುತ್ತಿದೆ. 'ದಾತಾ ದರಿದ್ರಃ ಕೃಪಣೋಧನಾಢ್ಯಃ। ಪಾಪೀಚಿರಾಯುಃ ಸುಕೃತೀಗತಾಯುಃ॥' ಎಂಬುದನ್ನರಿತೇ ಅಧ್ಯಾತ್ಮವಿದ್ಯಾವಿಶಾರದರು ಇಂದಿಗೂ ಪರಲೋಕದ ಪರಸುಖದ ಆರಾಧನೆಯನ್ನು ಬೋಧಿಸುತ್ತಿದ್ದಾರೆ. ಅವರನ್ನು ನಿರಾಶಾವಾದಿಗಳು, ಹುಚ್ಚರು, ವ್ಯವಹಾರ ಮೂಢರು ಎಂದು ನಾಗರಿಕರು ಹಾಸ್ಯಮಾಡುತ್ತಾರೆ. ಇದನ್ನು ನೋಡಿಯೇ 'ಒಂದು ಷೋಕು, ಬರಿಯ ಝೋಕು, ಬದುಕಿನೊಂದು ಜಂಭವು' ಎಂದು ಕವಿಯು ಹಾಸ್ಯ ಮಾಡಿದ್ದಾನೆ.

ಮತ್ಸ್ಯ ಪುರಾಣದಲ್ಲಿ ದೊಡ್ಡ ಮೀನು ಸಣ್ಣದನ್ನು ನುಂಗುವ ಮತ್ಸ್ಯ ನ್ಯಾಯವನ್ನು ಹೇಳಿದ್ದಾದರೂ Might is Right – ಬಲವೇ ಹಕ್ಕು ಎಂಬುದನ್ನು ಸಮರ್ಥಿಸುವುದಕ್ಕಾಗಿಯೇ.

ಪ್ರೀತಿತತ್ವಬೋಧಕರು Love is God. ಪ್ರೀತಿಯೇ ದೇವರು ಎಂದು ಬೋಧಿಸಿ ಜಗತ್ತಿನ ಡೊಂಕನ್ನು ತಿದ್ದಲು ಮದ್ದನ್ನು ತಯಾರಿಸಿದರು. ಮೊನ್ನೆ ಮಡಿದ ಮಹಾತ್ಮಾ ಗಾಂಧಿಯವರು ಇಂತಹ ಪ್ರೇಮತತ್ವಾರಾಧಕರು. ಅವರು ಬದುಕಿದ್ದಾಗ ಜಗತ್ತಿನ ಬಹುಸಂಖ್ಯಾತರು ಅವರ ಮಾತಿಗೆ ಕಿವಿಗೊಡಲಿಲ್ಲ. ಸತ್ತಮೇಲೆ ಸ್ವಾಭಾವಿಕ ಮತ್ತು ಕೃತಕ ಕಣ್ಣೀರನ್ನು ಮುಖಂಡರೂ ತದಿತರರೂ ಕರೆದರು. ಮುಗಿಯಿತು; ಅವರ ತತ್ವಗಳು ಅವರೊಡನೆಯೇ ಹೊರಟುಹೋದುವೆಂದು ಜಗವಿಂದು ತಿಳಿದಂತಿದೆ. ಯಾವ ಅವತಾರಪುರುಷನೂ ಜಗತ್ತನ್ನು ಇಡಿಯಾಗಿ, ಸಂಪೂರ್ಣವಾಗಿ, ಚಿರಕಾಲದವರೆಗೆ ತಿದ್ದಿಡಲಾರ. ಇದೇಮಾತು 'ಎಲ್ಲ ದೇವರು ಬಂದು ತಲ್ಲಣಗೊಂಡರು! ಇಲ್ಲಿಯವರ ಕಾಟ ಇಲ್ಯುಳಿಯಿತಲ್ಲೋ– ಇಲ್ಯುಳಿಯಿತಲ್ಲಾ' ಎಂಬ ಸಾಲುಗಳಲ್ಲಿ ಒಡಮೂಡಿದೆ. ಇದು ಇತಿಹಾಸ ತೋರಿದ ಸತ್ಯ. ಆದರೆ ಎಷ್ಟು ಸಲ ಸೋತರೂ ಈ ಪ್ರಯತ್ನ ನಡೆದೇ ನಡೆಯುತ್ತಿದೆಯೆಂಬುದೂ ಅದರಿಂದ ವಿಶಿಷ್ಟ ದೇಶಕಾಲಗಳಲ್ಲಿ ಉದ್ದಿಷ್ಟ ಫಲಸಿಗುತ್ತದೆಯೆಂಬುದೂ ಅಷ್ಟೇ ಸತ್ಯವಾದುದು. ಇದರಿಂದಲೇ Life means strife ಬಾಳೆಂದರೆ ಹೋರಾಟ ಎಂದು ಹೇಳಲಾಗಿದೆ. ಬದುಕಬೇಕೆಂಬ ಆಸೆಯಿಂದ ಬಿಡಿಸಿಕೊಳ್ಳಲಾರದವರಿಗೆ ಪ್ರೀತಿತತ್ವ ಹಿಡಿದು ಶಾಂತಿಗಾಗಿ ಅಜಸ್ರವಾಗಿ ಹೋರಾಡುವುದನ್ನು ಬಿಟ್ಟರೆ ಬೇರೆಯ ಮಾರ್ಗವೇ ಇಲ್ಲ. ಪ್ರೀತಿಸುವುದೊಂದು ಒಳ್ಳೆಯ ಗುಣ, ನಾಗರಿಕ ಲಕ್ಷಣ, ಸಾಧುತ್ವದ ಗುರುತು, ಪುಣ್ಯದಾಯಕ ಕಾರ್ಯ ಎಂದು ತಿಳಿದು ಹಾಗೆ ಮಾಡಬೇಕೆಂದರೆ ಅದು ನಮಗೆ ಬೇಕಾಗಿಲ್ಲವೆಂದು ವಿಜ್ಞಾನಿಗಳೆನ್ನಬಹುದು. ಆದರೆ ಪ್ರೀತಿಸುವುದೊಂದು ಉತ್ತಮ ಸುಖಸಾಧನ, ಅದರಿಂದ ಜೀವನದ ಅನೇಕ ಸಮಸ್ಯೆಗಳನ್ನು ಅತಿ ಸುಲಭವಾಗಿ ಬಿಡಿಸಬಹುದು. ಶಾಂತಿ ಸಮಾಧಾನಗಳನ್ನು ಚಿರಕಾಲ ಪಡೆಯಬಹುದು ಎಂದು ಕೇವಲ ಪ್ರಯೋಜನ ದೃಷ್ಟಿಯಿಂದ ಹೇಳಿದರೂ ಒಪ್ಪದ ಜನರಿಗೇನು ಹೇಳಬೇಕು? ವಿಚಾರಪರತೆ ಹೆಚ್ಚಿದೆಯೆಂದು ಹೇಳಿಕೊಳ್ಳಲಾಗುತ್ತಿದೆಯಾದರೂ ಆ ವಿಚಾರವನ್ನು ಆಚಾರಕ್ಕಿಳಿಸುವ ಕರ್ತವ್ಯಬುದ್ಧಿ ಇಂದಿನ ಜಗತ್ತಿಗೆ ಸಾಕಷ್ಟಿಲ್ಲ. ಅದೊಂದು ಸಾಧಿಸಿತೆಂದರೆ ಗಾಂಧಿಯವರೆಂದಂತೆ ಪೋಲೀಸಿಲ್ಲದೆ ರಾಜ್ಯ ನಡೆಸಬಹುದು. ಆಗ ಜೀವನವೊಂದು ಹೋರಾಟವೆನಿಸದೆ ಸುಖವೆಂಬ ಅರ್ಥವನ್ನು ಅದು ತಾಳುತ್ತದೆ. ಪ್ರೀತಿಯಲ್ಲಿ ಸರ್ವದ್ವಂದ್ವಗಳು ಲಯಹೊಂದುವುವು. ಸಮರಸ ಹೊಂದುವುವು.

ವಿಶ್ವಶಾಂತಿಗೆ ಅಗತ್ಯವಾಗಿ ಬೇಕಾದುದೆಂದರೆ ಈ ಪ್ರೇಮತತ್ವದ ಶಾಂತಿಪಾತ. ಪ್ರೀತಿವಂತರು ಮೃದುತ್ವ, ನಯ, ಔದಾರ್ಯ, ದಯೆ ಮುಂತಾದ ಸಾತ್ವಿಕಗುಣವುಳ್ಳವರಿರುತ್ತಾರೆ. ರಾಜಸರು ಇವರನ್ನು ಹೇಡಿಗಳೆಂದು ಹೀಗಳೆಯಬಹುದು. ಆದರೆ ಸತ್ವಕ್ಕಿರುವ ಸತ್ವವನ್ನು ಸತ್ವಶಾಲಿಗಳೇ ಬಲ್ಲರು; ಅದರಿಂದಾಗುವ ಆನಂದಸಿದ್ಧಿ ಅವರಿಗೆ ಮಾತ್ರ ಗೊತ್ತು. ಅದರಿಂದಲೇ ಮಹಾತ್ಮರು ಲೋಕದ ಯಾವ ಚಿತ್ರಹಿಂಸೆಯಿಂದಲೂ ತಾವು ಹಿಡಿದ ವ್ರತವನ್ನು ಬಿಡುವುದಿಲ್ಲ. ಮನಃಪುಷ್ಟಿಗೆ ಪ್ರೀತಿಗಿಂತ ಹೆಚ್ಚಿನ ಪೌಷ್ಟಿಕ ರಸಾಯನವಿಲ್ಲ. ಪ್ರೀತಿಯಿಂದ ಉಂಟಾಗುವ ಧೈರ್ಯ ಸ್ಥಾಯಿಯಾದಾಗ ಆತ್ಮಬಲವೆನಿಸುವುದು. ಅದರ ಹಿರಿಮೆಯನ್ನು ಕೊಂಡಾಡದ ಉಪನಿಷತ್ತಿಲ್ಲ; ಅದರ ಕೆಚ್ಚಿಗೆ ಬಾಗದ ಬಲಿಷ್ಠನಿಲ್ಲ; ನಿಷ್ಠೆಗೆ ಸೋಲದ ರಸಿಕನಿಲ್ಲ. ಹೊಸ ಜಗತ್ತನ್ನು ಕಟ್ಟಬೇಕೆಂದು ಲೋಕಕ್ಕೆಂದು ಅಕ್ಷರಾದಿ ವಿದ್ಯೆಯನ್ನು ಕೊಡಹೋಗುವ ಮುತ್ಸದ್ದಿಗಳು ಈ ಮಾತನ್ನು ಮರೆತಲ್ಲಿ ಅವರ ಯತ್ನ ಸಂಪೂರ್ಣ ನೀರಿನಲ್ಲಿ ಹೋಮ ಮಾಡಿದಂತಾಗದಿರದು. ನಿಜವಾದ ವಿದ್ಯೆಯೆಂದರೆ ಪ್ರೀತಿವಿದ್ಯೆ. ಅದು ಮಾನವನ ಇಹಪರ ಜೀವನಗಳ ಸಾರಸರ್ವಸ್ವ, ಆತ್ಯಂತ ಸಿದ್ಧಿ, ಅಮೃತತ್ವಯೋಗ, ಶಾಂತಿಗೆ ಅದಲ್ಲದೆ ಮತ್ತೊಂದು ಸಾಧನವಾಗಲಾರದು. ಜೀವನದ ನಾನಾ ಭಾವಗಳ ತುಮುಲ ಪ್ರೀತಿಯಿಂದ ಮಾತ್ರ ಹಿಂಗಬಲ್ಲುದು. ಪ್ರೀತಿ ಬೆಳೆದಲ್ಲಿ ಹೃದಯ ವಿಕಾಸವಾಯಿತೆನ್ನಬೇಕು. ಅದೊಂದು ಐಕ್ಯದ ಅಂಟು, ಸೌಖ್ಯದ ನಂಟು. ಮನೆಯಲ್ಲಿ, ಊರಲ್ಲಿ, ರಾಜ್ಯದಲ್ಲಿ, ಜಗತ್ತಿನಲ್ಲಿ – ಹೀಗೆ ಅದು ಹಬ್ಬುತ್ತ ಹೋಗುವಂತೆ ಯತ್ನಿಸುವುದೇ ಪ್ರಗತಿಯ ಸತ್ಪಥ, ಜೀವನದ ಧ್ರುವತಾರೆ. ಮೇಲೆ ಹೇಳಿದ ಪ್ರಯೋಜನ ದೃಷ್ಟಿಯ ಸತ್ಯವನ್ನಾದರೂ ಮನಗಂಡು ಜಗತ್ತಿನ ಸರಕಾರಗಳು ಮತ್ತು ಅವುಗಳ ರಚನೆಗೆ ಕಾರಣರೆನಿಸಿದ ಪ್ರಜೆಗಳು ವಿಶ್ವಶಾಂತಿಯನ್ನೂ ತನ್ಮೂಲಕ ತಮ್ಮ ನಾಡಿನ, ತಮ್ಮ ಊರಿನ, ತಮ್ಮ ಮನೆಯ ಶಾಂತಿಯನ್ನೂ ಬಯಸುವವರಾದರೆ ಇಲ್ಲಿ ಹೇಳಿದ ಮಾತುಗಳನ್ನು ಮನನಮಾಡಬೇಕು. ಹಿಂದೂಸ್ಥಾನವಿಂದು ಜಗತ್ತಿಗೆ ಮಾರ್ಗದರ್ಶನವೀಯಬಲ್ಲದೆನಿಸಬೇಕಾದರೆ ಅದು ಈ ಪ್ರೇಮವಿದ್ಯೆಯನ್ನು ಅಭ್ಯಸಿಸಿ ಜಗತ್ತನ್ನು ಪ್ರೇಮಧರ್ಮಕ್ಕೆ ಪರಿವರ್ತಿಸಬೇಕು. ನಮ್ಮ ನಾಡಿನ ಪ್ರತಿಯೊಂದು ವ್ಯಕ್ತಿಯೂ ಈ ಪ್ರಯತ್ನದಲ್ಲಿ ತೊಡಗಿದರೆ ದೊಡ್ಡ ದೊಡ್ಡ ರಾಜಕಾರಣಿಗಳ 'ಇಜಂ'ಗಳನ್ನು ಒಂದೇ ತುತ್ತಿಗೆ ನುಂಗಿ ನೀರ್ಕುಡಿದು ರಾಮರಾಜ್ಯದ ಸ್ಥಾಪನೆಗೆ ಅಸ್ತಿವಾರವನ್ನು ಹಾಕಬಹುದು. ಹಾಗೆ ಮಾಡದಿದ್ದರೆ 'ರಾಮರಾಜ್ಯ', 'ಸ್ವರಾಜ್ಯ', 'ಸ್ವಾತಂತ್ರ್ಯಗಳು' ಕೇವಲ ಪುಸ್ತಕದಲ್ಲಿಯ ಬದನೆಕಾಯಿಗಳಾಗಿಯೇ ಉಳಿದಾವು.

ಅಮೇರಿಕದ ವಿಚಾರವನ್ನೆತ್ತಿ ಬರೆಯುತ್ತ ಅಲ್ಲಿಯ ಪ್ರಸಿದ್ಧ ಲೇಖಕರೊಬ್ಬರು ಅಲ್ಲಿ ನಾಗರಿಕತೆ ಮುಂದುವರಿದಷ್ಟು ಸಂಸ್ಕೃತಿ ಮುಂದುವರಿದಿಲ್ಲ ಎಂದು

ಬರೆಯುತ್ತಾರೆ. ಎಂದರೆ ಬುದ್ಧಿ ಹಾರಿದ ಮಟ್ಟಕ್ಕೆ ಹೃದಯ ಹಾರಿಲ್ಲ ಎಂದರ್ಥ. ಇದರಿಂದಲೆ ಇಂದು ಧ್ಯೇಯಬೋಧಕರು ಬಹಳ ಜನ ಸಿಗುತ್ತಾರೆ. ಆದರೆ ಧ್ಯೇಯಾರಾಧಕರು ಬಹು ಸ್ವಲ್ಪ ಜನರು ಕೂಡ ಸುಲಭವಾಗಿ ಕಾಣಸಿಗುವುದಿಲ್ಲ. ವಿಶ್ವಶಾಂತಿಯ ಮಾತನ್ನು ಆಡುವವರು, ಯೋಜನೆ ತಯಾರಿಸಿ ಕೊಡುವವರು ಸಿಕ್ಕರೂ ಅವರ ಆಚರಣೆಗೆ ಬದ್ಧಕಂಕಣರಾಗುವ ಮುತ್ಸದ್ದಿಗಳಿಲ್ಲ. ಇದೇ ಇಂದಿನ ರಾಷ್ಟ್ರ ಜೀವನದಲ್ಲಿಯ ಪರಸ್ಪರ ಭಯ ಸಂಶಯಗಳಿಗೆ ಕಾರಣ.

ಧರ್ಮ ಮತ್ತು ಜಾತಿಗಳ ಬಹುತ್ವದಿಂದ ಜಗತ್ತು ಬಹಳ ಕಷ್ಟನಷ್ಟಗಳಿಗೆ ತುತ್ತಾದುದನ್ನು ಇತಿಹಾಸದಲ್ಲಿ ಕಂಡು ಇಂದು ಆಧುನಿಕರು ಜಾತ್ಯಾತೀತತೆ ಮತ್ತು ನಾಸ್ತಿಕತೆಗಳನ್ನು ಶರಣುಹೋಗುವುದು ಸಾಮಾನ್ಯ ರೂಢಿಯಾಗಿಬಿಟ್ಟಿದೆ. ಹಿಂದೂಸ್ಥಾನವಂತೂ ಕಟುತಮ ಪಾಠವನ್ನು ಕಲಿತಿದೆ; ಪಂಡಿತ ನೆಹರುಗಳು ಕೂಡ ಸಂಘಟಿತ ಜಾತಿಮತಗಳೆಂದರೆ ಮೈಯುರಿಯುತ್ತದೆಂದು ಬರೆದಿದ್ದಾರೆ. ಆದರೆ ಇಂದಿನ ಸರ್ವರಾಷ್ಟ್ರಗಳ ಸರ್ವಸಂಸ್ಕೃತಿಗಳೂ ವಿಶಿಷ್ಟ ಧರ್ಮಗಳ ಅವಲಂಬನದಿಂದ ಮಾನವರು ಸಾವಿರಾರು ವರ್ಷಗಳಿಂದ ಬೆಳೆಸಿಕೊಂಡು ಬಂದ ಹೃದಯ ಪರಿಪಾಕದ ಫಲಗಳೇ ಆಗಿವೆ. ಮಾನವ ಹೃದಯವಿರುವವರೆಗೆ ಧರ್ಮಕ್ಕೆ ಸ್ಥಾನವಿದೆ. ಧರ್ಮವಿಲ್ಲದಿದ್ದಲ್ಲಿ ಅಧರ್ಮವಿದ್ದೇ ಇರುವುದಲ್ಲದೆ ಕೇವಲ ಧರ್ಮಾತೀತತೆ ನೆಲಸದು. ಧರ್ಮಾತೀತತೆಯ ಮಟ್ಟಕ್ಕೇರಬೇಕಾದರೂ ಮೊದಲು ಒಂದು ಧರ್ಮ ಸಂಸ್ಕಾರ ಅಗತ್ಯವೆಂಬುದನ್ನು ರಾಮಕೃಷ್ಣ ಪರಮಹಂಸ ಮತ್ತು ಗಾಂಧಿಯವರ ಜೀವನಗಳಿಂದ ಕಂಡುಕೊಳ್ಳಬಹುದು. ಆದುದರಿಂದ ಭಾವ ಶುದ್ಧಿಗೆ ಧರ್ಮ ಮೊದಲ ಮೆಟ್ಟಿಲು; ಅದರಿಂದ ಸರ್ವಸಿದ್ಧಿಯಾಗುವುದೆಂದು ಹೇಳುವುದು ಆಧುನಿಕತೆಗೆ ಒಪ್ಪವಾಗದಿರಬಹುದು. ಈ ದೃಷ್ಟಿಯಿಂದ ವಿಚಾರಿಸಿದರೆ ಮತ್ತು ಮನುಷ್ಯನ ಪ್ರತಿಯೊಂದು ನಾಗರಿಕ ಕಾರ್ಯವನ್ನೂ ಕೇವಲ ಕಾಯದೆ ಮತ್ತು ಪೋಲಿಸು ಬಲಗಳಿಂದ ಆಳಲಾಗದು ಎಂಬುದನ್ನು ಮನನ ಮಾಡಿದರೆ, ಸಾಮಾನ್ಯ ಜನರಿಗೆ ಧರ್ಮದ ಅಗತ್ಯವೆಷ್ಟೆಂಬುದು ಸ್ಪಷ್ಟವಾಗುತ್ತದೆ. ಆದುದರಿಂದ ವಿಶ್ವಶಾಂತಿಗಾಗಿ ಪ್ರೇಮಸಂಸ್ಕಾರವನ್ನು ಜಗತ್ತಿನ ಜನತೆಗೆ ಕೊಡಬಯಸುವವರು ವೈಜ್ಞಾನಿಕವಾದ ವಿಶ್ವಧರ್ಮವೊಂದಕ್ಕೆ ಶರಣಾಗಬೇಕಾಗುವುದೆಂಬುದು ಅನಿವಾರ್ಯವಾದ ಅನುಮಾನ (Inference) ಅಲ್ಲವೇ?

ಸ್ವಾತಂತ್ರ್ಯದುಣಿಸು ಸರ್ವರಿಗೂ ಸಿಗಬೇಕಾದರೆ, ಚಿರಸ್ಥಾಯಿಯೆನಿಸಬೇಕಾದರೆ ಧಾರ್ಮಿಕರಾಗಿರುವ ಸ್ವಾತಂತ್ರ್ಯ ಬೇಕು ಎಂದು ರೆವರೆಂಡ್ ಪಿಟ್ಟೆಂಜರರು ಬರೆಯುವುದಾದರೂ ಮೇಲೆ ಹೇಳಿದ ವಿಚಾರ ಪ್ರಣಾಲಿಯು ಹಿನ್ನೆಲೆಯಿಟ್ಟುಕೊಂಡೇ. ಅದೇ ಪ್ರಕಾರ ಅಂತರ್‌ರಾಷ್ಟ್ರೀಯ ಪ್ರಮುಖರು

ವಿಧರ್ಮವೊಂದನ್ನು ಸರ್ವಧರ್ಮ ಸಮನ್ವಯ ಸಿದ್ಧಾಂತದ ಮೇಲೆ ರಚಿಸಿ ಅದಕ್ಕೆ ಶಾಂತಿಯನ್ನು ಅಭಿಮಾನಿ ದೇವತೆಯಾಗಿ ತೆಗೆದುಕೊಂಡು, ರಣತೃಷೆಯುಳ್ಳ ರಾಷ್ಟ್ರಮುಖಂಡರ ಪಾಶವಿಕ ಬುದ್ಧಿಯನ್ನು ಪಳಗಿಸಲು ಹೊರಡುವುದು ಅವಶ್ಯಕ. ಆದರೆ ಇಂತಹ ಸತ್ಸಾಧನವನ್ನು ಆಚರಣೆಗೆ ತರಬೇಕಾದರೆ ಈಗಿರುವಂತೆ ಪ್ರತಿಯೊಂದು ರಾಷ್ಟ್ರವೂ ಸಂಪೂರ್ಣ ಸ್ವತಂತ್ರವೆಂದು ಆ ಪ್ರಕಾರ ಭಿನ್ನಾಭಿಪ್ರಾಯ ತಾಳುವುದನ್ನೇ ಸದಾ ಅನುಸರಿಸುತ್ತಿದ್ದರೆ ಸಾಧ್ಯವಾಗದು. ಆದುದರಿಂದ ದುಷ್ಟರನ್ನು ಬಗ್ಗಿಸಿ ದಾರಿಗೆ ಹಚ್ಚಲು ಮೊದಲು ಸಾತ್ವಿಕ ತೇಜೋವಂತರು ತಮ್ಮ ತಮ್ಮ ರಾಷ್ಟ್ರಗಳನ್ನು ಸಿದ್ಧಪಡಿಸಿ, ತನ್ಮೂಲಕ ಈ ಗುರಿಯ ಆರಾಧನೆಯಲ್ಲಿ ಶ್ರದ್ಧೆಯುಳ್ಳ ರಾಷ್ಟ್ರಗಳು ಒಟ್ಟು ಸೇರಿ, ದುರಹಂಕಾರಿ ರಾಷ್ಟ್ರಗಳಿಗೆ ಚತುರೋಪಾಯ ಪ್ರಯೋಗದಿಂದ ಶಾಂತಿಧರ್ಮವನ್ನು ಹಿಡಿವಂತೆ, ಒತ್ತಾಯಪಡಿಸಬೇಕು. ಎಂದರೆ, ಪ್ರತಿಯೊಂದು ರಾಷ್ಟ್ರದ ಜನತೆಯೂ ತನ್ನಲ್ಲಿ ಒಬ್ಬೊಬ್ಬ ಗಾಂಧಿಯವರಂಥ ನಾಯಕನನ್ನು ನಿರ್ಮಿಸುವುದನ್ನು ತನ್ನ ಕರ್ತವ್ಯವನ್ನಾಗಿಟ್ಟುಕೊಳ್ಳಬೇಕು. ಇಡಿ ಹಿಂದೂಸ್ಥಾನದ ಅಭಿಪ್ರಾಯವನ್ನು ತಿದ್ದುವ ಸ್ಥಾನವನ್ನು ಗಾಂಧಿಯವರು ಕೇವಲ ಸಾತ್ವಿಕವಾದ ಆಧ್ಯಾತ್ಮಿಕ ಬಲದಿಂದ ಸಾಧ್ಯವಮಾಡಿಕೊಂಡಿದ್ದುದು ನಿರಾಶಾವಾದಿಗಳಿಗೊಂದು ಪ್ರತ್ಯುದಾಹರಣೆಯಾಗಿದೆ. ಹಾಗೆ ಪ್ರತಿಯೊಂದು ರಾಷ್ಟ್ರವೂ ಒಕ್ಕಟ್ಟಿಗೆ ಕಾರಣವಾದ ಪ್ರೇಮಸೂತ್ರವನ್ನು ಒಳಗೊಂಡ, ವಿಶ್ವಭ್ರಾತೃತ್ವ ಭೋದಕವಾದ, ಶಾಂತಿಯೇ ಧ್ಯೇಯವಾಗಿರುವ ವಿಶ್ವಧರ್ಮ ಸಂಸ್ಥೆಯನ್ನು ರಚಿಸಲು ಶಂಕುಸ್ಥಾಪನೆ ಮಾಡಬೇಕು; ತನ್ಮೂಲಕ ವಿಶ್ವಬಾಂಧವ್ಯವನ್ನು ಕ್ರಮೇಣ ಜನತೆಯ ಹೃದಯದಲ್ಲಿ ಬಿಂಬಿಸಿ ನಿಧಾನವಾಗಿಯಾದರೂ ನಿಶ್ಚಿತವಾದ ಜಯದ ಮೆಟ್ಟಿಲನ್ನು ಏರುತ್ತಾ ಹೋಗಬೇಕು. ಹಿಂದುಸ್ಥಾನದ ಧೋರಣವನ್ನು ವಿವರಿಸುತ್ತ ಮಹಾಪ್ರಧಾನಿ ಪಂಡಿತ ನೆಹರುಗಳು ಅಪ್ಪಣೆ ಕೊಡಿಸಿದಂತೆ ಕಾರ್ಯಪ್ರಪಂಚದಲ್ಲಿ ಈಗ ಆತ್ಮರಕ್ಷಣೆಗೆ ಸಿದ್ಧತೆ ನಡೆಸಿ ನಮ್ಮ ಮನೆಯಲ್ಲಿ, ನಾಡಿನಲ್ಲಿ ನಾವು ಅಜೇಯರೆನಿಸಿ ಮಾನವ ಕುಲದ ಏಳಿಗೆಗಾಗಿ ಉಕ್ತ ಧರ್ಮದ ಕೇಂದ್ರವನ್ನು ತೆರೆದು ನಮ್ಮಲ್ಲಿ ಒಂದು ಶಾಂತಿಸಂಸ್ಥೆಯ ಬ್ರಹ್ಮಚಾರಿ ಸನ್ಯಾಸಿದಲವೊಂದನ್ನು ಇಲ್ಲವೆ ಸ್ಕೌಟ್ ಇಲ್ಲವೆ ರೋವರ್ಸ್‌ದಲವನ್ನು ಸಂಘಟಿಸಿ ಸಂಸ್ಥೆಯು ದೇಶವಿದೇಶಗಳಿಗೆ ಕಳುಹಿ, ಜಗತ್ತಿನ ತಾಮಸಿಕ ವೃತ್ತಿಯನ್ನು ಪರಿಮಾರ್ಜನ ಮಾಡಲು ತೊಡಗುವುದರಿಂದ ನಮ್ಮ ರಾಷ್ಟ್ರವು ತನ್ನ ಮತ್ತು ಉಳಿದೆಲ್ಲ ರಾಷ್ಟ್ರಗಳ ಸುಖಶಾಂತಿ ಸಮೃದ್ಧಿಗಳನ್ನೂ ಸಾಧಿಸಬಲ್ಲುದು. ಎಷ್ಟು ಒದ್ದಾಡಿದರೂ ಈ ಗುರಿಗೆ ಇದನ್ನುಳಿದ ಬೇರೊಂದು ಸಾಧನ ಇಷ್ಟು ಚಿರಪರಿಣಾಮಕಾರಿಯೆನಿಸಿ ಉಪಯೋಗಕ್ಕೆ ಬರದು. ನಾಡಿನ ವಿಚಾರಶೀಲರು, ಕರ್ಮಯೋಗಿಗಳು,

ಜಗದ್ಧಿತೇಚ್ಛುಗಳು ಇದಕ್ಕಾಗಿ ಬಂಡವಾಳ ಹೂಡುವುದು ಅನಿವಾರ್ಯವಲ್ಲವೆ? ಇದರಿಂದ ದಿವಂಗತ ಗಾಂಧಿಯವರು ಕನಸು ಕಂಡ ವಿಶ್ವಶಾಂತಿಗೆ ಭದ್ರವಾದ ತಳಹದಿಯನ್ನು ಹಾಕಿದಂತಾಗುವುದಿಲ್ಲವೆ? ನಾಡಿನ ತರುಣ ಜಗತ್ತು ತಮ್ಮ ದೀರ್ಘವಾದ ಆಯುಷ್ಯದಲ್ಲಿ ಕೆಲ ನಿಮಿಷಗಳನ್ನಾದರೂ ಉಕ್ತಧ್ಯೇಯದ ಆರಾಧನೆಗೆ ಬಳಸಲು ಮನಸ್ಸು ಮಾಡುವುದೇ?

ಓಂ ಶಾಂತಿ, ಶಾಂತಿಃ, ಶಾಂತಿಃ

೪. ರಾಷ್ಟ್ರೀಯ ಪುನರುಜ್ಜೀವನ

ಅಮೇರಿಕವೆಂದರೆ ಕುಬೇರನ ರಾಜ್ಯ, ಸ್ವರ್ಗಸುಖವೇ ಅಲ್ಲಿ ನೆಲಸಿದೆ, ನಾಗರಿಕತೆಗೆ ಅಲ್ಲಿಯೇ ಕಲಶವನ್ನಿಡಲಾಗಿದೆ ಎಂದು ಹಲವರಿಂದು ತಿಳಿದುಕೊಂಡಿರುವುದು ಪ್ರಚಾರದ ದೋಷದಿಂದ. ರಾಮರಾಜ್ಯದಲ್ಲಿಯೂ ಒಬ್ಬ ಕುಬುದ್ಧಿಯ ಅಗಸನಿದ್ದನಂತೆ. ಈ ನಿದರ್ಶನದಂತೆ ಯಕ್ಷಲೋಕದಂತಹ ಅಮೇರಿಕದ ಆ ಸಂಯುಕ್ತ ಸಂಸ್ಥಾನದಲ್ಲಿಯೂ ತಾಮಸವೃತ್ತಿಗೇನೂ ಕಡಿಮೆಯಿಲ್ಲವೆಂದು ಕ್ಲ್ಯಾಡ್ ಬೆಡೆಲನು ಅಲ್ಲಿ ಕುಳಿತುಕೊಂಡೇ ಬರೆದುಬಿಟ್ಟಿದ್ದಾನೆ. ಏನೆಂದು? – "ನೀನೇನಾದರೂ ಅಮೇರಿಕದವನಾಗಿರುವೆಯಾದರೆ, ಅಲ್ಲಿ ನೆಲಸಿರುವೆಯಾದರೆ, ನಿನ್ನ ಆ ಸರಕಾರವೂ ನಿನ್ನ ಆ ಸ್ವತಂತ್ರರಾಜ್ಯವೂ ಸ್ವಲ್ಪ ಕಾಲದಲ್ಲಿಯೇ ಈಗಿಂದಲೇ ತಕ್ಕ ಪ್ರಯತ್ನ ಮಾಡದಿದ್ದರೆ, ಖಂಡಿತ ಉರುಳಿಬೀಳುತ್ತದೆ!"

"ತಮ್ಮಾ! ನಿನ್ನ ಮನೆಗೆ ಬೆಂಕಿ ಬಿದ್ದಿದೆ!" – ಎಂದು ಮೇಲೆ ಹೇಳಿದ ಆ ಬರಹಗಾರನು ಹೇಳಬೇಕಾದರೆ ಅಮೇರಿಕನರಿಂದು ಅದೆಂತಹ ಸ್ಥಿತಿಯಲ್ಲಿರಬೇಕಾಯಿತು?

"ಚದುರರ ಮೆಚ್ಚು, ಭಾವುಕರ ಕೈಪಿಡಿ, ಜಾಣರ ಬಯ್ಕೆ, ಸತ್ಕಲಾ–
ವಿದರ ವಿಲಾಸಮಕ್ಕರಿಗರಾಭರಣಂ, ಬುಧರಿಚ್ಛೆಯಚ್ಚು, ವೀ–
ರದ ಕಣಿ, ಕೂರ್ತುಕೂರಿಸಿದ ನಲ್ಲಳ ಮೆಯ್ಸಿರಿ, ತಾನೆನಿಪ್ಪ ಸ–
ಮ್ಮದದೊಳೆ ಬಣ್ಣಿಕುಂ ಧರಣಿ, ಪಶ್ಚಿಮರಾಜ್ಯದ ವೈಭವಂಗಳಂ–"
ಎಂಬ ಈ ಪ್ರಚಾರಕ್ಕೆ ಮರುಳಾದವರಿಂದು ಕಣ್ದೆರೆಯಬೇಕು.

ಒಂದೂರಿಗೆ ಹೋದಾಗ, ಕಾರಣಾಂತರದಿಂದ ಉಳಿಯುವುದಕ್ಕೆ ಸ್ಥಳವು ಸಿಕ್ಕದ ಕುಬೇರನೊಬ್ಬನು "ನನಗೇನು? ಸೆಟ್ಟಿ ಇಳಿದಲ್ಲಿಯೇ ಪಟ್ಟಣ! ಸಂಕವು ಮುರಿದಲ್ಲಿಯೇ ಸ್ನಾನ! ಏನು ನನಗೆ ಬೇಕಾದರೂ, ಯಾವಾಗಲೆಂದರೆ ಆಗ ನಾನು ಪಡೆಯಬಲ್ಲೆ!" ಎಂದುಕೊಂಡು, ಅಲ್ಲಿಯೇ ಸನಿಹದ 'ಒಬ್ಬಳ'ಲ್ಲಿ ಆ ರಾತ್ರಿ ತಾನು ಉಳಿದುಕೊಂಡುದಾಗಿ ಹೇಳಿರುವನು. ಈ ಪ್ರವೃತ್ತಿ ಅಮೇರಿಕದ

ಜನಗಳಲ್ಲಿ ದಿನೇದಿನೇ ವೃದ್ಧಿಗೊಳ್ಳುತ್ತಿದೆಯೆಂದೂ, ಹೀಗೆಯೇ ಅನೀತಿ ಬೆಳೆಯುತ್ತ ಹೋದರೆ ಅಲ್ಲಿಯ ಪ್ರಜಾಸತ್ತೆ ಅರ್ಥರಹಿತವಾಗುವುದೆಂದೂ, ಅದೇ ಲೇಖಕ ಮಹಾಶಯನೇ ಎದೆಗುದಿಯಿಂದ ಸಾರುತ್ತಿದ್ದಾನೆ.

'ವಿಶೇಷಹಕ್ಕು'ಗಳಿಗಾಗಿಯೆಂದು ಕೆಲವೇ ಮಂದಿ ಕೆಲಸಗಾರರಿಗೆ ಅರ್ಹತೆ ಹೆಚ್ಚಿಲ್ಲದಾಗಲೂ, ಉಳಿದ ಬಹುಮಂದಿಗೂ ಹೆಚ್ಚಾಗಿ ದುಡ್ಡುಕೊಡುವ ಉಪಪ್ರದಾನ (ಲಂಚ) ಪದ್ಧತಿ ಅಲ್ಲಿಯ ಜನರ ನರನಾಡಿಗಳಲ್ಲಿ ಹರಡಿದೆ. ಹೋಟೇಲುಗಳಲ್ಲಿಯಂತೂ ಹೇಳುವುದೇ ಬೇಡ; ಕಾಸುಕೊಟ್ಟರೆ ದೊರೆಯದ ಸಾಮಗ್ರಿಯೇ ಇಲ್ಲ! ನೀತಿ–ಅನೀತಿ, ಪಾಪ–ಪುಣ್ಯ, ಧರ್ಮ–ಅಧರ್ಮ, ಇವುಗಳ ವಿಚಾರ ಹರದಾರಿ ದೂರ. ಪ್ರಾಮಾಣಿಕರಾದವರು ಕೂಡ ಅಲ್ಪಸ್ವಲ್ಪ ಲಂಚವನ್ನು ಕೊಡುವುದೂ ತೆಗೆದುಕೊಳ್ಳುವುದೂ ವ್ಯಾಪಾರದ ನೀತಿಮತ್ತೆಗೆ ಒಪ್ಪುವ ಪ್ರಾಮಾಣಿಕತೆಯೆಂದೇ ತಿಳಿದು ಆಚರಿಸುತ್ತಾರೆ.

ಒಳ್ಳೆಯ ಶೀಘ್ರಲಿಪಿಕಾರಿಯೊಬ್ಬಳು ಕೆಲಗಂಟೆಗಳು ಮಾತ್ರ ಕೆಲಸಮಾಡಿ, ಉಳಿದ ಕಾಲದಲ್ಲಿ ಸರಕಾರೀ ಅಪ್ಪಣೆಯನ್ನು ಪಡೆದೇ ವಿಹಾರಕ್ಕೆ ನಡೆದುಬಿಡುತ್ತಾಳೆ. ಅದೇ ಕಾರ್ಯಾಲಯದ ಉಳಿದ ಕೆಲಸಗಾರರು ವಾರಕ್ಕೆ ೪೦ ಗಂಟೆಗಳ ಕಾಲ ೧೨ರಿಂದ ೧೫ ಡಾಲರುಗಳ ಕೂಲಿಯನ್ನು ತೆಗೆದುಕೊಂಡು ಕೆಲಸಮಾಡುತ್ತ ಬಿದ್ದಿರಬೇಕೆಂದರೆ, ಒಪ್ಪುವುದಿಲ್ಲ. ಆಗ ಅವರು ಮನಃಪೂರ್ವಕವಾಗಿ ಕೆಲಸಮಾಡದೆಯೇ, ಸರಕಾರದಿಂದ ಯತ್ಕಿಂಚಿತ್ ದಕ್ಷಿಣೆಯನ್ನು ಪಡೆದು, ಅಷ್ಟಷ್ಟಕ್ಕೇ ಕೆಲಸ ಮಾಡುತ್ತ, ಸೋಮಾರಿಗಳಾಗಿ ಕಾಲವನ್ನು ತಳ್ಳುವುದಕ್ಕೆ ಹಾತೊರೆಯುತ್ತಾರೆ. ಅಂತಹ ಪರಿಸ್ಥಿತಿಯಲ್ಲಿ ಅದೇ ಅವರಿಗೆ ಉತ್ತಮವೆನಿಸುತ್ತದೆ. ಇದಕ್ಕೆಲ್ಲ ಯಾರು ಹೊಣೆ?

ಉಪಾಧ್ಯಾಯರನ್ನು ತೆಗೆದುಕೊಳ್ಳಿಯಿನ್ನು. ಸಾಮಾನ್ಯವಾಗಿ ಅವರಿಗೆ ಕೆಲಸವು ಹೆಚ್ಚು, ಸಂಬಳವು ಕಡಿಮೆ; ಇದರ ಜೊತೆಗೆ, ಅವರು ಪಡೆದ ಆ ಡಿಗ್ರಿಯ ಮತ್ತು ಸೇವಾಕಾಲದ ಮೇಲೆ ಅವರ ಸಂಬಳವನ್ನು ನಿರ್ಣಯಿಸಲಾಗುತ್ತದೆಯಲ್ಲದೆ, ಅವರ ಯೋಗ್ಯತೆಯ ಮತ್ತು ಕಾರ್ಯಕ್ಷಮತೆಯ ದೃಷ್ಟಿಯಿಂದ ಅದು ಸಲ್ಲುತ್ತಿಲ್ಲ. ಪ್ರಜಾಸತ್ತೆಯ ಉದ್ಧಾರಕ್ಕಾಗಿಯೇ ಇದೆಲ್ಲ ಆಗುತ್ತಿರುವುದೇನು?

ಯಾವ ಸಂಘವನ್ನು ಅಥವಾ ಸಂಸ್ಥೆಯನ್ನು ತೆಗೆದುಕೊಂಡರೂ, ಅದು ತನ್ನ ಹಕ್ಕಿಗಾಗಿ ಮಾತ್ರ ಹೊಡೆದಾಡುವುದಲ್ಲದೆ, ತಮ್ಮ ಗುಂಪಿನ ಧ್ಯೇಯವನ್ನು ಅನುಸರಿಸದೆ ಉಳಿದವರಿಗೆ ಯಾವ ರೀತಿಯ ನೆರವನ್ನೂ ನೀಡುತ್ತಿಲ್ಲ. ಕೇವಲ ಸಂಕುಚಿತ ಕುಟುಂಬದಂತೆಯೇ ಅದು ನಡೆಯುತ್ತದೆ. ಸಂಬಳವನ್ನು ಇಲ್ಲಿ ದುಡಿಯುವುದಿಲ್ಲ. ದುಡಿಯದೆಯೇ ಯೇನಕೇನ ಪ್ರಕಾರೇಣ ಸಿಕ್ಕಿದಷ್ಟನ್ನು

ಪಡೆಯುವುದೇ ಹೆಚ್ಚು. ದುಡಿವವರು ದುಡಿದೇ ಸಾಯುತ್ತಾರೆ. ಉಂಡಾಡಿಗಳು ಉಂಡೇ ಸಾಯುತ್ತಾರೆ. ಈ ಅವ್ಯವಸ್ಥೆಯಿಂದ ಉತ್ಪಾದನವು ಗಂಟೆಯೊಂದಕ್ಕೆ ಎಷ್ಟು ಆಗಬೇಕೋ ಅಷ್ಟು ಆಗುವುದಿಲ್ಲ.

ವ್ಯಾಪಾರಿಗಳು, ರಾಜತಂತ್ರಜ್ಞರು, ಶಿಕ್ಷಕರು, ರೈತರು – ಇವರಲ್ಲಿ ಕೇವಲ ಯಾರೊಬ್ಬರು ಮಾತ್ರ ಪರಿವರ್ತನ ಪಡೆದರೂ ಸಾಲದು; ಎಲ್ಲರೂ ಪರಿವರ್ತನ ಪಡೆಯಬೇಕು. ಅದರಲ್ಲಿಯೂ ಹಿಂದುಮುಂದಿನ ಆಲೋಚನೆಯಿಲ್ಲದೆ ತಮ್ಮತಮ್ಮ ಹೊಣೆಗಾರಿಕೆಯನ್ನರಿಯದೆ, ಶಿಸ್ತಿಲ್ಲದೆ, ಸುಮ್ಮನೆ ಪ್ರಜಾಸೃಷ್ಟಿಗೆ ಕಾರಣರಾಗುತ್ತಿರುವ ತಾಯ್ತಂದೆಯರು ಎಲ್ಲರಿಗೂ ಮೊದಲು ತಮ್ಮ ದೃಷ್ಟಿಕೋನವನ್ನು ಬದಲಾಯಿಸಬೇಕು. ಯಾವ ದೇಶದಲ್ಲಿಯೇ ಆಗಲಿ, ನಾಗರಿಕತೆ ಉಳಿಯಬೇಕಾದರೆ, ಅಲ್ಲಿಯ ನಾಗರಿಕರು ಈ ಕೆಳಗಿನ ಅಷ್ಟ ವಿಧಿಗಳನ್ನು ತಪ್ಪದೆ ಪರಿಪಾಲಿಸಬೇಕಾಗಿದೆ.

೧. ಅಸ್ತೇಯ : ಕಳಬೇಡ, ಲಂಚಕೊಡುವುದು ಒಂದು ಕಳ್ಳತನವೇ.

೨. ದೋಷಜ್ಞತೆ : ನಿನ್ನ ಸುತ್ತಮುತ್ತಲಿನ ಆ ಕಿಡುಗತನಕ್ಕೆ ಬಲಿಯಾಗದೆ, ನ್ಯಾಯಕ್ಕಾಗಿಯೂ ಸಾಮ್ಯಕ್ಕಾಗಿಯೂ ಹೋರಾಡು.

೩. ಆತ್ಮಸಂಯಮ ಮತ್ತು ಸ್ವಾರ್ಥತ್ಯಾಗ : ಇವುಗಳ ವಿಚಾರವಾಗಿ ನಿಮ್ಮವರೊಂದಿಗೂ ಇತರರೊಂದಿಗೂ ಚರ್ಚಿಸುವುದು ಮಾತ್ರವಲ್ಲದೆ, ಆಚರಿಸಲೂ ಯತ್ನಿಸು.

೪. ವಿಶಾಲಭಾವನೆ : ಕುಟುಂಬದ ಹೊರಗೂ ಯಾವುದಾದರೊಂದು ಸಾಮಾಜಿಕ ಹೊಣೆಯನ್ನು ನಿರ್ವಹಿಸು.

೫. ಸೋಮಾರಿಗಳ ಸಂಘಟನದ ಕುರಿತು ತಿರಸ್ಕಾರ : ತರುಣರೊಡನೆ ಈ ವಿಷಯವಾಗಿ ಚರ್ಚಿಸಿ, ಸಾಮೂಹಿಕ ಸೋಮಾರಿತನವನ್ನು ನಿರ್ಮೂಲಗೊಳಿಸುವುದಕ್ಕೂ ವೈಯಕ್ತಿಕ ಉದ್ಯಮ ಸಾಹಸಗಳನ್ನು ಏಳಿಗೆಗೆ ತರುವುದಕ್ಕೂ ಪ್ರಯತ್ನಿಸು.

೬. ಮಾನವತೆಯ ಪುರಸ್ಕಾರ : ಹಣದಿಂದಲೂ ಹೃದಯವೇ ಹೆಚ್ಚಿನದೆಂದೂ, ಸಮಾಜಸೇವೆಯೇ ಹೆಚ್ಚಿನದೆಂದೂ, ಕಳ್ಳಸಂತೆಯೆಂಬುದು ಸಮಾಜದ ಕೊಲೆಯೆಂದೂ, ವ್ಯಾಪಾರೀ ವರ್ಗಕ್ಕೆ ಬೋಧಿಸು.

೭. ಪಿತೃತ್ವಭಾರ : 'ನಾನು ತಂದೆ ಅಥವಾ ತಾಯಿ'ಯೆಂಬ ಹೊಣೆಗಾರಿಕೆಯ ಕರ್ತವ್ಯಬುದ್ಧಿಯನ್ನು ನಿಶ್ಚಯಾತ್ಮಕ ಬುದ್ಧಿಯಿಂದ ತಿಳಿದುಕೊಂಡು, ಹೊಣೆಯನ್ನೂ, ಶಿಸ್ತನ್ನೂ ನಿನ್ನ ಮಕ್ಕಳಿಗೂ ಕಲಿಯಿಸು.

೮. ಪಾತ್ರನಿರ್ವಹಣ : ನಿನ್ನ ಪಾಲಿಗೆ ಬಂದ ಕರ್ತವ್ಯವನ್ನು ಚಾಚೂತಪ್ಪದೆ ಮಾಡಿಕೊಂಡು ಹೋಗು; ಅಧೋಮುಖವಾಗಿರುವ ಪ್ರಜಾಸತ್ತೆಯ ಪುನರುದ್ಧಾರಕ್ಕಾಗಿ ನಿನ್ನ ಜೀವನದ ಕೆಲವೇಳೆಯನ್ನು ಮೀಸಲಿಡು.

ಅನೈತಿಕ ಬುದ್ಧಿಯ ಬಳಕೆಯನ್ನು ತಡೆದು, ಒಂದು ರಾಷ್ಟ್ರದಲ್ಲಿ ನಿಜವಾದ ಪ್ರಜಾಪ್ರಭುತ್ವವು ನೆಲೆನಿಲ್ಲಬೇಕಾದರೆ, ಅಲ್ಲಿಯ ಪ್ರಜೆ ಅಥವಾ ನಾಗರಿಕನು ಸ್ತ್ರೀಪುರುಷ ಬೇಧವಿಲ್ಲದೆ ಈ ಮೇಲಿನ ಅಷ್ಟನಿಯಮಗಳನ್ನು ಶಕ್ತಿ ಮೀರಿ ಪಾಲಿಸತಕ್ಕುದು ಅನಿವಾರ್ಯವೆಂಬುದನ್ನು ಯಾರೂ ಅಲ್ಲಗಳೆಯಲಾರರು. ಭಾರತಕ್ಕೂ ಇದೊಂದು ಕರ್ತವ್ಯ. ಪುನಃ ಸ್ಮರಣಕ್ಕೆ ಕಾರಣವೆನಿಸುವ ಸದ್ಬೋಧ; ಅಲ್ಲದೆ, ಹಿಂದಿನ ನಮ್ಮ ಆ ಧರ್ಮಶಾಸ್ತ್ರಕಾರರ ನೀತಿಸಾರವನ್ನು ಆಚರಣೆಗೆ ತರಲೂ ಒಂದು ಪ್ರಚೋದಕವೆನಬಹುದಲ್ಲವೇ?

ಜನರು ಪ್ರಜಾಸತ್ತೆಯ ತತ್ವಗಳನ್ನು ಮೀರಿ ನಡೆಯುವುದೇ ಪ್ರಜಾಸತ್ತೆಯ ಮೃತ್ಯು. ಪ್ರಜಾಸತ್ತೆಯಲ್ಲಿ ಸ್ವಾತಂತ್ರ್ಯದ ಅನುಭವವು ಅನ್ಯರಿಗೆ ಇರುವ ಸಮಾನಸ್ವಾತಂತ್ರ್ಯಕ್ಕೆ ಭಂಗವು ಬಾರದಂತೆಯೇ ಅದು ಸಾಗಬೇಕು. ಅದೆಲ್ಲಿ ಇಲ್ಲವೋ ಅಲ್ಲಿ ಪ್ರಜಾತಂತ್ರವೆಂಬುದಿಲ್ಲ; ಸಮತೆಯೆಂಬುದಿಲ್ಲ; ನಾಗರಿಕತೆಯೆಂಬುದೂ ಇಲ್ಲ. ಅಲ್ಪಸಂಖ್ಯಾತರ ಸುಖಕ್ಕಾಗಿ ಬಹುಸಂಖ್ಯಾತರು ದುಡಿದು ಬಳಲುವುದು ಪ್ರಜಾಪ್ರಭುತ್ವಕ್ಕೆ ಶತ್ರು; ಸರ್ವಸಮ ಸುಖವೇ ಅದರ ಜೀವಾಳ.

ಕರ್ತವ್ಯ–ನೀತಿ–ನ್ಯಾಯಗಳಿಂದ ಎಲ್ಲಿ ವ್ಯಕ್ತಿಗಳು ಪರಾಙ್ಮುಖರಾಗುವರೋ ಆ ನಾಡು ಪ್ರಜಾಸತ್ತೆಯ ಮಸಣವೆನಿಸುತ್ತದೆ. ಇಂತಹ ದುಷ್ಕಾಲವು ಪ್ರಾಪ್ತವಾಗಿರುವುದನ್ನು ಕಂಡು ಅಮೇರಿಕದ ಆ ಮೇಲಿನ ಲೇಖಕನು ತನ್ನ ನಾಡುಗನನ್ನು ಕುರಿತು – "ತಮ್ಮಾ! ನಿನ್ನ ಮನೆಗೆ ಬೆಂಕಿ ಬಿದ್ದಿದೆ, ನೋಡು; ಅದನ್ನು ಆರಿಸಲು ಪ್ರಯತ್ನಮಾಡು!" ಎಂದು ಎಚ್ಚರಗೊಳಿಸುತ್ತಿದ್ದಾನೆ. ಮನೆಗೆ ಬೆಂಕಿ ಬಿದ್ದಾಗ, ಅದನ್ನಾರಿಸಲು ಅಗ್ನಿಶಾಮಕ ದಳಗಳು ಬೇಕಾಗುವಂತೆ ರಣತೃಷ್ಣೆ ಕೆರಳಿರುವ ಅಮೇರಿಕದಂತಹ ನಾಡಿನಲ್ಲಿ ಶಾಂತಿಸ್ಥಾಪಕದಳ, ನೀತಿಬೋಧಕ ಮಂಡಲ, ಧರ್ಮಸಂಸ್ಥಾಪಕ ಸಾಧುಕುಲ, ನಿರ್ಭೀತ–ವಿಚಾರಪರ–ಕಾರ್ಯಕರ್ತೃ ಸೈನ್ಯ–ಇವು ತಲೆಯೆತ್ತಿ ಮುಂಬರದಿದ್ದರೆ, ಅಲ್ಲಿಯ ಜನಗಳ ಕರ್ತವ್ಯ ಮೌಢ್ಯವನ್ನು ಕಳೆಯದಿದ್ದರೆ, ಅದರ ವಿನಾಶವು ಕಟ್ಟಿಟ್ಟಿದ್ದೇ ಎಂದು ವಿವೇಕಿಗಳೆನ್ನದೆ ಇರರು.

ಅಮೇರಿಕದಲ್ಲಿ ಮೂಡಿರುವ ಈ ಎಚ್ಚರಿಕೆ ಭಾರತದಲ್ಲಿಯೂ ಎಲ್ಲೆಡೆ ಮೂಡಬೇಕಾಗಿದೆ. ನೈತಿಕ ಅವನತಿಯಲ್ಲಿ ಇಂದು ಭಾರತವೂ ಏನೂ ಹಿಂದುಳಿದಿಲ್ಲ. ಕ್ಷುದ್ರತೆ, ಕೇವಲ ಸ್ವಾರ್ಥ, ಅಲ್ಪತ್ವ, ಧನಲೋಭ, ವಂಚನೆ,

ಲಂಚ, ಕಳ್ಳಸಂತೆ ಇವೇ ಮೊದಲಾದ ತಾಮಸ ಗುಣಗಳು ವೃದ್ಧಿ ಪಡೆಯದಂತೆ, ಈಗ ಇಲ್ಲಿಯ ಪ್ರಮುಖವಾಗಿ ಹೊರಟಿರುವ ಸಂಘವೆಂದರೆ, ಮೊನ್ನೆಮೊನ್ನೆ ಜನ್ಮವನ್ನು ತಾಳಿರುವ ಆ 'ಸರ್ವೋದಯ ಸಮಾಜ'ವೊಂದೇ. ಈ ಸಮಾಜವು ಶಾಖೋಪಶಾಖೆಗಳಾಗಿ ಬೆಳೆದು ಸ್ವೀಯ ಉದ್ದೇಶಗಳ ಸಾಧನೆಯಲ್ಲಿ ಯಶಸ್ವಿಯಾಗುವಂತೆ ಆಸೇತುಹಿಮಾಚಲದ ತರುಣತರುಣಿಯರು ನೆರವಿತ್ತು ದುಡಿವುದು ಅವಶ್ಯ.

ರಾಷ್ಟ್ರೀಯ ಪ್ರಜಾಸತ್ತೆಗೆ ಕೇವಲ ವಿರುದ್ಧಗುಣಗಳಾದ ಆ ಜಾತೀಯತೆ, ವರ್ಗ ಕಲಹ, ಪಕ್ಷಪ್ರತಿಪಕ್ಷಗಳ ದ್ವಂದ್ವ, ಇವೇ ಮೊದಲಾದ ಜ್ವಾಲೆಗಳಿಂದ ನಮ್ಮ ನಾಡು ಉರಿಯುತ್ತಿರುವ ಈ ಕಾಲದಲ್ಲಿ ಶಾಂತಿಯ ನೀರನ್ನೆರೆಯಲು ಸಾಧ್ಯವಾಗದಿದ್ದರೆ, ನಮ್ಮ ಈ ಹಿಂದೀ ಸ್ವಾತಂತ್ರ್ಯವು ಚಿರಕಾಲ ಬಾಳುವುದು ಸಂದೇಹಾಸ್ಪದವೇ ಸರಿ.

೫. ಸಾಹಿತ್ಯದ ಪ್ರಾಧಾನ್ಯ

ಶಾರೀರಿಕ ಅವಶ್ಯಕತೆಗಳನ್ನು ಪೂರಯಿಸಲು ಮಾನವನು ವೈಜ್ಞಾನಿಕ, ಔದ್ಯಮಿಕ ಇಲ್ಲವೇ ತಾಂತ್ರಿಕ ವಿದ್ಯೆಗಳನ್ನು ಅಭ್ಯಸಿಸುವುದು ಹೇಗೆ ಅವಶ್ಯಕವೋ ಹಾಗೆ ಮಾನಸಿಕ ಅವಶ್ಯಕತೆಗಳನ್ನು ಪೂರಯಿಸಲು ಸಾಹಿತ್ಯಾಭ್ಯಾಸವು ಅನಿವಾರ್ಯವಾದ ಅಗತ್ಯ. ದೇಹದ ಆರೋಗ್ಯವು ಮಾನಸಿಕ ಆರೋಗ್ಯಕ್ಕೆ ತಳಹದಿ ಎಂಬುದು ನಿಜವೇ; ಆದರೆ ದೃಢ ಮನಸ್ಸು ಮಾಡಿದರೆ ದೇಹದ ಪ್ರವೃತ್ತಿ ಪ್ರೇರಣೆಗಳನ್ನು ಮೀರಿ ನಿಲ್ಲಬಹುದು. ಪ್ರಾಣಿಗಳ ಜೀವನವು ಕೇವಲ ದೈಹಿಕ; ಮಾನವನ ಜೀವನದಲ್ಲಿ ದೇಹಕ್ಕೆ ತಕ್ಕ ಸ್ಥಾನವಿದ್ದರೂ ಮನಸ್ಸೇ ಪ್ರಧಾನವಾದುದು. ಅದೇ ಅವನ ಮನುಷ್ಯತ್ವವನ್ನು ಬೆಳೆಯಿಸಿ ದೇವತ್ವದತ್ತ ಒಯ್ಯುವ ಸಾಧನ. ಆದುದರಿಂದ ಉದರಭರಣ ವಿದ್ಯೆಯ ಜೊತೆಗೆ ಸಂಸ್ಕೃತಿ ಪೋಷಣದ ವಿದ್ಯಾಭ್ಯಾಸವಿಲ್ಲದೆ ಮಾನವನ ಜೀವನ ಸಾರ್ಥಕವೆನಿಸಲಾರದು. ಈ ದೃಷ್ಟಿಯಿಂದ ಸಾಹಿತ್ಯಾಭ್ಯಾಸದ ಪ್ರಾಧಾನ್ಯವನ್ನು ಪ್ರತಿಯೊಬ್ಬ ನರ–ನಾರಿಯೂ ಮನಗಾಣಬಹುದು.

ಮನಸ್ಸಿಗೆ ತಿಳಿವಳಿಕೆ ಕೊಡಲು, ಸಂಸ್ಕಾರ ಕೊಡಲು ಇತರ ಶಾಸ್ತ್ರಗಳಿರುವುದು ನಿಜ. ಅವು ಜೀವನದ ಒಂದೊಂದು ಅಂಶವನ್ನೇ ಎತ್ತಿಹಿಡಿದು ವಿಶೇಷ ಜ್ಞಾನಗಳನ್ನು ಬೌದ್ಧಿಕವಾಗಿ ತಿಳಿಸುವುವು. ಅವುಗಳಲ್ಲಿ ಒಂದೊಂದನ್ನೇ ತೆಗೆದುಕೊಂಡರೆ ಅವು ಸರ್ವಧಾರಿಯಲ್ಲ, ಜೀವನದ ವಿವಿಧಾಂಗಗಳನ್ನು ಸೋದಾಹರಣವಾಗಿ ಪ್ರತಿಬಿಂಬಿಸುವ ಕನ್ನಡಿಗಳಲ್ಲ. ಕಲೆಗಳಲ್ಲೆಲ್ಲ ಶ್ರೇಷ್ಠವೆನಿಸಿದ್ದು ಸಾಹಿತ್ಯ; ಅದಕ್ಕೆ ಮಾತು ಬರುತ್ತವೆ; ಉಳಿದ ಕಲೆಗಳು ಮೌನಿಗಳು. ಇಂಥ ಮಾತಿನ ಮಹಾದ್ಭುತ ಶಕ್ತಿಯುಳ್ಳ ಮನುಷ್ಯನಿಗೇ ವಿಶಿಷ್ಟವಾಗಿ ಇರುವ ಸಾಹಿತ್ಯವಾದರೋ ಜೀವನದ ವಿವಿಧಾನುಭವಗಳನ್ನು ರಸರೂಪದಿಂದ ಹೃದಯದಲ್ಲಿ ಬಿಂಬಿಸಿ ರಸಿಕನಲ್ಲಿ ಸಮರಸಭಾವ, ಭೋಗಯೋಗ ಸಮನ್ವಯ ಭಾವ, ಸುಖದುಃಖ ಸಮತಾಭಾವ ಇವನ್ನು ಬೆಳೆಯಿಸಲು ಸಹಕಾರಿಯಾಗುತ್ತದೆ. ಜೀವನವನ್ನು ಅತಿಯಾಗಿ ಪುರಸ್ಕರಿಸುವ ಇಲ್ಲವೆ ಅತಿಯಾಗಿ ತಿರಸ್ಕರಿಸುವ ಹಟಕ್ಕೆ ಬೀಳದೆ "ಇದ್ದಷ್ಟು ದಿನವಾದರೂ ಇರುವಷ್ಟು ಪ್ರೀತಿಯ ಇನ್ನಷ್ಟು ರುಚಿನೋಡಿ ಹೋಗೋಣವೇ" ಎಂಬ ರಸತತ್ವವನ್ನು ಅದು ಹೃದ್ಗತಮಾಡಿ

ಕೊಡುವುದು. ಇದೇ ಸಾಹಿತ್ಯದ ಹಿರಿಮೆ. ಮಾನವನಲ್ಲಿ ಮಾನವತೆಯನ್ನು ಮೂಡಿಸಲು, ವಿಶ್ವಕುಟುಂಬಿತ್ವವು ಉದಯಿಸಲು, ಸಚ್ಚಿದಾನಂದವು ಉದ್ಭವಿಸಲು ಸಾಧನವಾಗುವ ಸಾಹಿತ್ಯವೇ ಆದರ್ಶ ಸಾಹಿತ್ಯ. ಪ್ರಜಾಪ್ರಭುತ್ವದಲ್ಲಿ ಮಾನವನ ನಾಗರಿಕತೆಯನ್ನು ಸುಧಾರಿಸುವ ದೃಷ್ಟಿಯಿಂದ ವಿದ್ಯಾಪ್ರಸಾರಕ್ಕೆ ಮಹತ್ವವನ್ನು ಕೊಡಲಾಗಿದೆ. ಆ ವಿದ್ಯೆ ಸದ್ವಿದ್ಯೆಯೆನಿಸಿಕೊಂಡು ಉದ್ದೇಶವನ್ನು ಸಾಧಿಸಿಕೊಡಬಲ್ಲುದಾಗಬೇಕಾದರೆ, ಅದು ತನ್ನ ಕೊನೆಯ ಮೆಟ್ಟಿಲಿನಲ್ಲಿ ಸಾಹಿತ್ಯಲೋಕವನ್ನೇ ಆಶ್ರಯಿಸಬೇಕಾಗುತ್ತದೆ.

ಮಾನವನಿಗೆ ವಿಚಾರಶಕ್ತಿಯಂತೆ ಮಾತಾದರೂ ವಿಶಿಷ್ಟ ವರ. ಅದರಿಂದ ಅವನಲ್ಲಿ ವಿಶಿಷ್ಟ ವ್ಯಕ್ತಿತ್ವ ಮೂಡುವಂತಾಗಿದೆ. 'ಮಾತು ಬಲ್ಲವನು ಮಾಣಿಕ್ಯ ತರಬಲ್ಲ' ಎಂದು ಏಕೆ ಹೇಳುತ್ತಾರೆ? ಸಹಜೀವಿಗಳ ಹೃದಯವನ್ನು ಒಲಿಸಿಕೊಳ್ಳಲು ಸರಸವಾದ ಮಾತಿಗಿಂತ ಪ್ರಬಲವಾದ ಸಾಧನವಿಲ್ಲ. ಸರಸವೆಂದ ಕೂಡಲೆ ಸಾಹಿತ್ಯ ಬಂದಿತಲ್ಲಿಗೆ. ಮನುಷ್ಯನ ಮನಸ್ಸಿನ ಸ್ಥಾಯಿಭಾವಗಳಾದ ಪ್ರೀತಿ (ರತಿ), ಕಾರ್ಯೋತ್ಸಾಹ, ದಯೆ, ಆಶ್ಚರ್ಯ, ನಗೆ(ಹಾಸ), ಶಮ, ಅಸಹ್ಯಭಾವ (ಜುಗುಪ್ಸೆ) ಭಯಪ್ರದರ್ಶನ (ಭಯಾನಕ), ಸಿಟ್ಟು ಎಂಬ ಒಂಬತ್ತನ್ನು ಮನಸ್ಸಿಗೆ ರಂಜಿಸುವಂತೆ ಪರಿಪೂರ್ಣಗೊಳಿಸಿ ಹೌದುಹೌದೆನಿಸುವ ಮಾತೇ ಸಾಹಿತ್ಯ. ನಮ್ಮ ನಿತ್ಯಜೀವನದಲ್ಲಿ ನಾವು ಸದಾ ಇದನ್ನು ನಮಗೆ ಗೊತ್ತಿಲ್ಲದಂತೆ ಕೇವಲ ಸ್ವಾಭಾವಿಕವಾಗಿ ಬಳಸುತ್ತೇವೆ, ಅನುಭವಿಸಿ ಆನಂದಿಸುತ್ತೇವೆ, ಒಲಿದು ನಲಿಯುತ್ತೇವೆ. ಇದನ್ನೇ ಸ್ವಲ್ಪ ಪರಿಷ್ಕರಿಸಿ ವ್ಯಾಕರಣ ಶುದ್ಧವಾಗಿ ಬರೆದರೆ ಇದರಿಂದ ಕಥೆ, ಹರಟೆ ಮುಂತಾದ ಸಾಹಿತ್ಯ ಪ್ರಕಾರಗಳು ಹುಟ್ಟುತ್ತವೆ. ನಾವು ನಿತ್ಯವೂ ಮಾತಾಡುವಾಗ ಮಾಡುವ ಭಾವಸಹಜವಾದ ಅಂಗಚೇಷ್ಟೆಗಳನ್ನು ಸಂಸ್ಕರಿಸಿದರೆ ಅಭಿನಯವಾಗುವುದು. ನಮ್ಮ ಮಾತು, ನಡತೆ ಮತ್ತು ಉಡುಪುಗಳ ಆಧಾರದಿಂದಲೇ ನಾಟ್ಯಶಾಸ್ತ್ರದಲ್ಲಿ ವಾಚಿಕ, ಆಂಗಿಕ ಮತ್ತು ಆಹಾರ್ಯ ಎಂದು ಅಭಿನಯವನ್ನು ಮೂರು ವಿಧವಾಗಿ ವರ್ಗೀಕರಿಸಲಾಗಿದೆ.

ಜೀವನಕ್ಕೂ ಸಾಹಿತ್ಯಕ್ಕೂ ಇಂಥ ನಿಕಟ ಸಂಬಂಧವಿದೆ ಎಂಬುದನ್ನು ಗಮನಿಸದೆ ಇಂದು ಸಾರ್ವಜನಿಕರು, ಅದರಲ್ಲೂ ಉದ್ಯಮಿಗಳು, ಹಳ್ಳಿಗರು ಮತ್ತು ಸ್ತ್ರೀಯರು ಸಾಹಿತ್ಯವೆಂದರೆ ಕಥೆ, ಕಾದಂಬರಿ, ಸಿನಿಮಾವಷ್ಟೇ. ಅದರಿಂದ ಆಗುವ ಪ್ರಯೋಜನವೆಂದರೆ ನೋಡಿ ನಕ್ಕು ಬರುವುದಷ್ಟೇ– ಎಂದು ಗ್ರಹಿಸಿರುವುದು ಶೋಚನೀಯವಾಗಿದೆ. ಹೆಂಗಸರಿಗೆ ಓದೇಕೆ? ಎಂಬ ಸವಾಲಿನಂತೆ ಸಾಹಿತ್ಯವೇಕೆ? ಎಂಬ ಸವಾಲನ್ನೂ ಅವರೇ ಹಾಕಿಕೊಂಡು ನಿರ್ವಿದ್ಯರೂ ಅರಸಿಕರೂ ಆಗಿ ತಮಗೂ ಅನ್ಯರಿಗೂ ಬೇಸರ ಬರುವ ಇತರ ಚಟುವಟಿಕೆಗಳನ್ನು

ತಾತ್ಕಾಲಿಕ ವಿನೋದ ಲಾಭಕ್ಕಾಗಿ ಆಶ್ರಯಿಸುತ್ತಿದ್ದಾರೆ. ಧರ್ಮ, ನೀತಿ, ಮಾನವತೆ, ಮಾನವ ಸ್ವಭಾವ, ರಸ, ರುಚಿ, ಕಷ್ಟ, ಸುಖ, ನ್ಯಾಯ, ಅನ್ಯಾಯ, ದಯೆದಾಕ್ಷಿಣ್ಯ ಮುಂತಾದ ಸರ್ವಾಂಶಗಳನ್ನೂ ಸೋದಾಹರಣವಾಗಿ ಸೂಚ್ಯವಾಚ್ಯ ಸರಸಪಂಕ್ತಿಗಳಿಂದ ಕತೆ, ಕಾದಂಬರಿ, ಗದ್ಯ, ಪದ್ಯ ಮುಂತಾದ ನಾನಾ ಪ್ರಕಾರಗಳಿಂದ ಅನುಭವಕ್ಕೆ ತಂದುಕೊಡುವ ಸಾಹಿತ್ಯವು ಜೀವನ ವಿಕಾಸಕ್ಕೆ ಸಂಜೀವಿನಿಯಲ್ಲದೆ ಮತ್ತೇನು? ಪ್ರತಿಯೊಂದು ವ್ಯಕ್ತಿಗೂ ಎಲ್ಲ ಸಂದರ್ಭಗಳಲ್ಲೂ ಧರ್ಮಕ್ಕಾಗಿ ಧರ್ಮಶಾಸ್ತ್ರವನ್ನೂ, ನೀತಿಗಾಗಿ ನೀತಿಶಾಸ್ತ್ರವನ್ನೂ, ಮಾನವತೆಗಾಗಿ ತತ್ವಶಾಸ್ತ್ರವನ್ನೂ, ಮಾನವಸ್ವಭಾವದ ಪರಿಚಯಕ್ಕಾಗಿ ಮನಃಶಾಸ್ತ್ರವನ್ನೂ, ವಿವೇಕ ವಿಚಾರಗಳಿಗಾಗಿ ನ್ಯಾಯಶಾಸ್ತ್ರವನ್ನೂ – ಹೀಗೆ ಒಂದೊಂದು ಅಂಶಕ್ಕೆ ಒಂದೊಂದು ಶಾಸ್ತ್ರವನ್ನು ಓದಿ ಪೂರೈಸಲು ಸಾಧ್ಯವೆ? ಅದೇ ರಾಮಾಯಣ, ಮಹಾಭಾರತ, ಶಾಕುಂತಲ ಮೊದಲಾದ ೪–೬ ಕಾವ್ಯಗಳನ್ನು ಓದಿದರೆ ಎಲ್ಲ ಅಂಶಗಳೂ ಅಚ್ಚಳಿಯದೆ ಮನಸ್ಸಿನ ಮೇಲೆ ನಿಲ್ಲುವುವು. ಸಾಹಿತ್ಯದ ಉದ್ದೇಶವನ್ನು ಹಿಂದಿನವರಾದರೂ ಹೀಗೆಯೇ ಸಮರ್ಥಿಸಿದ್ದಾರೆ. ಮುಗ್ಧಮತಿಗಳಿಗೆ, ಅಂದರೆ, ಶಾಸ್ತ್ರಾಭ್ಯಾಸ ಸಾಧ್ಯವಿಲ್ಲದವರಿಗೆ ಕೃತ್ಯ ಯಾವುದು, ಅಕೃತ್ಯ ಯಾವುದು? ಎಂಬುದನ್ನು ಸರಳವಾಗಿ ಸೂಚಿಸುವುದೇ ಸಾಹಿತ್ಯದ ರಸವಿದ್ಯೆ. ಆಜ್ಞೆ ಮಾಡದೆ, ಆದರೆ ಆಗಲಿ ಹೋದರೆ ಹೋಗಲಿ ಎಂಬ ಧಾಟಿಯಿಂದ ಸಲಹೆ ಕೊಡದೆ, ಅತ್ಯಂತ ಹಿತವಾದ ಮತ್ತು ಪ್ರಿಯವಾದ ಧಾಟಿಯಿಂದ ಹೃದಯಕ್ಕೆ ಹೌದು ಹೌದೆನಿಸುವಂತೆ, ಪ್ರಸನ್ನಭಾವದಿಂದ ಯೋಗ್ಯವಾದುದನ್ನು ಯೋಗ್ಯವೆಂದು ಒಪ್ಪಿ ಅದನ್ನು ಆಚರಿಸಲು ನಿರ್ಧರಿಸುವಂತೆ ಈ ರಸವಾಹಿನಿಯು ಪ್ರಚೋದಿಸುತ್ತದೆ.

ಅನ್ಯರೊಡನೆ ಸಹಾನುಭೂತಿಪಡುವ ಮಾನವತೆಯ ಮೂಲಸೂತ್ರವೇ ಸಾಹಿತ್ಯದ ಹೃದಯ. ರಸಾಸ್ವಾದದ ಗುಟ್ಟೇ ಅದು. "ಆತ್ಮವತ್ ಸರ್ವಭೂತಾನಿ ಯಃಪಶ್ಯತಿ" ಎಂಬ ಪರಮಧರ್ಮ ಸಾರವನ್ನು ಸಾಕ್ಷಾತ್ಕರಿಸಿ ಕೊಡುವುದೇ ರಸಮಾರ್ಗ. ಸಾಹಿತ್ಯದಲ್ಲಿ ಸ್ಪಷ್ಟಾಸ್ಪಷ್ಟವಾಗಿ ನಿರೂಪಿಸಿರುವ ಭಾವರಸಗಳೆಲ್ಲ ಮಾನವ ಹೃದಯದ್ದೇ ಇದ್ದು ಅನ್ಯಾನುಭವವನ್ನು ರಸಿಕರು ತಮ್ಮದನ್ನಾಗಿ ಮಾಡಿಕೊಂಡು, ಭೌತಿಕ ಕಾರ್ಯಕ್ಕೆ ಅವಕಾಶಕೊಡದೆ ಇದ್ದರೂ ಕೊಟ್ಟುದರಿಂದ ಆಗಬಹುದಾಗಿದ್ದ ಎಲ್ಲ ಮಾನಸಿಕ ಪರಿವರ್ತನಗಳನ್ನೂ ಸಾಧಿಸಿಕೊಳ್ಳಲಾಗುತ್ತದೆ. ಸ್ವಪ್ನದಲ್ಲಿ ಹುಲಿಯನ್ನು ಕಂಡರೆ ಅಥವಾ ಅದು ಕಚ್ಚಿದರೆ ವಾಸ್ತವಿಕವಾಗಿ ದೇಹಕ್ಕೆ ಯಾವ ಅಪಾಯವೂ ಆಗದಿದ್ದರೂ ಮನಸ್ಸಿನಲ್ಲಿ ಎಚ್ಚೆತ್ತಮೇಲೂ ಅದರ ಪರಿಣಾಮವಾದ ಭಯಭಾವ ಉಳಿಯುವಂತೆ ಸಾಹಿತ್ಯಾನುಶೀಲನದಿಂದ ಗಮ್ಯವಾಗುವ ಅನುಭವವು ಕಾರ್ಯಪ್ರಪಂಚದಲ್ಲಿ ವಾಸ್ತವಿಕ ಪರಿಣಾಮವೇನನ್ನೂ

ಹೆಚ್ಚಾಗಿ ಮಾಡದೆ (ಹೆಚ್ಚಾಗಿ ಎಂದದ್ದು ಆನಂದ ಮತ್ತು ದುಃಖಗಳಲ್ಲಿ ಕಣ್ಣೀರು ಬರುವುದು ವಾಸ್ತವಿಕ ಅನುಭವವಿರುವುದರಿಂದ), ಹೃದಯ ಪರಿವರ್ತನವನ್ನು ಸಾಧಿಸಿಕೊಳ್ಳಲಾಗುತ್ತದೆ. ಈ ಕಾರಣದಿಂದ ಸಾಮಾನ್ಯಜ್ಞಾನ, ನಾಗರಿಕತೆಯ ಕರ್ತವ್ಯಾಕರ್ತವ್ಯ, ಸಾಮಾಜಿಕ ವಿನಯ, ವಿವೇಕ, ಯೋಗ್ಯತಾಯೋಗ್ಯತೆಗಳು, ಇಂಗಿತಜ್ಞತೆ, ಪರಾನುಕಂಪಗುಣ, ವ್ಯಕ್ತಿಪರಿಚಯ ಮುಂತಾದ ಬುದ್ಧಿಭಾವನೆಗಳಿಗೆ ಸಂಸ್ಕಾರ ಕೊಟ್ಟು ನಾಗರಿಕವಾದವುಗಳನ್ನಾಗಿ ಮಾಡುವ ಉದ್ದೇಶವು ಸಾಹಿತ್ಯ ಪ್ರಧಾನವಾದ ವಿದ್ಯಾಭ್ಯಾಸದಿಂದ ಸಾಧ್ಯವಾಗುವುದೆಂದು ಧಾರಾಳವಾಗಿ ಹೇಳಬಹುದು.

ಕಥಾಭಕ್ತರಿಗೆ ಕಡಿಮೆಯಿಲ್ಲವೆಂದು ಹಿಂದೆ ಹೇಳಿದೆ. ಆದರೆ ಕೆಲವು ಮಂದಮತಿಗಳಿಗೆ ಯಾವ ವಾಸ್ತವಿಕ ಇಲ್ಲವೆ ಕಾವ್ಯಾನುಭವವೂ ಮನಃಪರಿವರ್ತನಕ್ಕೆ ಕಾರಣವಾಗದು. ಏಕೆಂದರೆ, ಅವರಿಗೆ ಅರ್ಥವಾಗುವುದು ಬೆತ್ತದ ಭಾಷೆಯೊಂದೇ. ಅಂಥ ಹೃದಯ ಮತ್ತು ಬುದ್ಧಿಗಳು ತಮ್ಮ ನಿಷ್ಕ್ರಿಯೆಯಿಂದ ಕೂಡ ಕ್ರೂರತಮ ಪಾಪವನ್ನು ಆಚರಿಸಲು ಹಿಂದೆ ಮುಂದೆ ನೋಡತಕ್ಕಂಥವಲ್ಲ. ಅಂಥವಲ್ಲದೆ ಸರಳಹೃದಯಿ, ಕುತೂಹಲ ಬುದ್ಧಿಗಳಿಗೆ ಕಥಾದಿಗಳಿಂದ ಪಾತ್ರಪರಿಚಯದ ಮೂಲಕ ನೈತಿಕ ಸಂಸ್ಕಾರ ಸಿಗಬಲ್ಲುದು. ಆದರೆ ಕೇವಲ ಕಥೆ ಮತ್ತು ನಾಟಕಾದಿಗಳಿಂದ ಮುಗ್ಧತೆ ಹೋಗಬಹುದಾದರೂ ಮಧ್ಯತೆಯಲ್ಲದೆ ಪ್ರೌಢಿ ಬರಲಾರದು. ಅದಕ್ಕೆ ಪ್ರಬಂಧ ಮತ್ತು ಕವಿತೆಗಳನ್ನು ಓದಿ ಆನಂದಿಸುವ ಅಭ್ಯಾಸ ಅವಶ್ಯಕ. ಸರ್ವಕಲೆಗಳಲ್ಲಿ ಸಾಹಿತ್ಯವು ಪ್ರಬುದ್ಧ ಎನಿಸಿದರೆ, ಸಾಹಿತ್ಯದ ಸರ್ವಾಂಶಗಳಲ್ಲಿ ಭಾವಗೀತ ಮಕುಟಮಣಿಯೆನಿಸುವುದು. ಅದು ರಸಿಕತೆಗೆ ನಿಕಷವೆನಿಸುವುದು. ಹಾಡುಗಳೆಲ್ಲ ಭಾವಗೀತಗಳೆನಿಸಲಾರವು. ಭಾವದ ತೀವ್ರತೆ, ಗಾಂಭೀರ್ಯ, ಸೂಕ್ಷ್ಮತೆ ಮತ್ತು ಶೀಘ್ರ ಪರಿಣಾಮಿತ್ವಗಳುಳ್ಳ ಮೇಘದೂತದಂಥ ಗ್ರಂಥವೇ ಭಾವಗೀತ.

ಸಾಹಿತ್ಯದಿಂದ ಮೇಲೆ ಹೇಳಿದಂತೆ ಆನಂದ ಮತ್ತು ಹೃದಯ ಪರಿವರ್ತನಗಳು ಸಂಭವಿಸಬೇಕಾದರೆ ಸಾತ್ವಿಕತೆಯ ಅಡಿಗಲ್ಲಾದ ಪ್ರಾಮಾಣಿಕತೆಯ ಅಂಶ ಸಾಮಾಜಿಕರ ಹೃದಯದಲ್ಲಿ ಇರಲೇಬೇಕು. "ಮಾರಿ"ಯಂಥ ಸಂಸ್ಕಾರವುಳ್ಳ "ಗುಂಡಾ" ಬುದ್ಧಿಯುಳ್ಳವರು ಅದನ್ನೇ ಬೆಳೆಸಿಕೊಳ್ಳುವ ಯೋಗಸಾಧನೆಯಲ್ಲಿದ್ದರೆ ಮಾತ್ರ ಅವರ ಮೇಲೆ ಸತ್ವೋದ್ರೇಕ ಜನ್ಯವಾದ ಈ ರಸವಿದ್ಯೆಯು ಯಾವ ಪರಿಣಾಮವನ್ನೂ ಉಂಟುಮಾಡಲಾರದು. ಆದರೆ ಅಂಥವರು ವಿರಳ. ಅಂಥ ಬುದ್ಧಿಯ ಕೆಲವಂಶ "ಸಾಹಿತ್ಯದಲ್ಲಿದ್ದುದು ಸಾಹಿತ್ಯದಲ್ಲಿ; ಅದೆಲ್ಲ ಇಲ್ಲಿ ಪ್ರಯೋಜನಕ್ಕೆ ಬರುವುವೇ?" ಎಂದು ಪುರಾಣ ಹೇಳಿ ಬದನೆಕಾಯನ್ನು

ಕೊಳ್ಳಹೋದ ಆಚಾರ್ಯರಂತೆ ತಿಳಿದೂ ಆಚರಿಸದ ಸಾಮಾನ್ಯರಲ್ಲಿ ಎಲ್ಲೆಲ್ಲೂ ಕಾಣಬಹುದು. ಇದು ಸಾಹಿತ್ಯದ ಉದ್ದೇಶಕ್ಕೆ ಕುಠಾರಪ್ರಾಯವಾದುದು. ಇದು ರಸಿಕತೆಂಯುಲ್ಲ, ರಸಿಕಂಮನ್ಯತೆ. ಇಂಥವರಿಗೆಂದೂ ನಿಜವಾದ ರಸಾಸ್ವಾದವಾಗಲಾರದು. ಇವರು ಜೀವನದಲ್ಲಿ ನಿರ್ಘೃಣರೂ, ಕಪಟಿಗಳೂ, ಸ್ವಾರ್ಥಸಾಧಕರೂ ಆಗಿರುವರೆಂದು ಸುಲಭವಾಗಿ ವಿಂಗಡಿಸಿ ಹೇಳಿ ಬಿಡಬಹುದು!

ಮಾನವನ ಸಾಮಾಜಿಕ, ಆರ್ಥಿಕ ಜೀವನದ ಎಲ್ಲ ಕಾರ್ಯಗಳನ್ನೂ ನಡೆಸುವುವು ಅವನ ಹೃದಯ ಮತ್ತು ಬುದ್ಧಿಗಳೇ ಆಗಿರುವುದರಿಂದ ಅವುಗಳನ್ನು ಸಂಸ್ಕರಿಸಿದರೆ, ಸುಧಾರಿಸಿದರೆ ಅವಕ್ಕೆ ಅಧೀನವಾದ ಅವನ ಕಾರ್ಯಗಳಲ್ಲೆಲ್ಲ ಸುಧಾರಣೆ ತಲೆ ದೋರುವುದು ಸ್ವಾಭಾವಿಕ. ಸುಧಾರಣೆಗಾಗಿಯೇ ಹೊರಡದೆ, ಗುಪ್ತವಾಗಿ ಸೂಚ್ಯವಾದ ತನ್ನ ಧ್ವನಿ ಶಕ್ತಿಯಿಂದ (Power of Suggestion) ಸಾಮಾಜಿಕರ ಮನವನ್ನು ತಿದ್ದಬಲ್ಲ ಸಾಹಿತ್ಯವೇ ಉತ್ತಮೋತ್ತಮವೂ ನಿತ್ಯ ನೂತನವೂ ಎನಿಸುವ ರಸದ ಬುಗ್ಗೆ. ಸಾಹಿತ್ಯವೆಂದರೆ ಇಂಥ ಸಾಹಿತ್ಯ. ಇದರ ಪ್ರಾಧಾನ್ಯವನ್ನು ಯಾರೂ ಯಾವ ಕಾಲದಲ್ಲೂ ಅಲ್ಲಗಳೆಯಲಾರರು.

ಸೂಚ್ಯಾರ್ಥವನ್ನು ಗ್ರಹಿಸುವ ಬುದ್ದಿಯನ್ನು ಕಳೆದುಕೊಂಡ ಸಾಮಾಜಿಕರಿಗೆ ವಾಚ್ಯಸಾಹಿತ್ಯ ಅಥವಾ ಪ್ರಚಾರ ಸಾಹಿತ್ಯ ಅತ್ಯಗತ್ಯ. ಈ ೨೦ನೆಯ ಶತಮಾನದಲ್ಲಿ ನೀತಿ ಅನೀತಿಗಳನ್ನು ಪ್ರಸರಿಸಲು ಇದೇ ಸಾಧನವನ್ನು ಪರಿಣಾಮಿತ್ವದ ದೃಷ್ಟಿಯಿಂದ ಬಳಸಲಾಗುತ್ತಿದೆ. ಇದರ ಕೃತಕತೆಯನ್ನು ಹಾಸ್ಯಾಸ್ಪದವಾಗುವಲ್ಲಿಯವರೆಗೆ ಬೆಳೆಸಲಾಗಿದೆ. "ಸಾವಿರ ಸುಳ್ಳು ಹೇಳಿ ಒಂದು ವಸ್ತುವನ್ನು ಮಾರು" ಎಂಬುದು ಇಂದಿನ ಗಾದೆಯಾಗಿದೆ. ಜಾಹೀರಾತು, ನೋಟೀಸು, ಹಸ್ತಪತ್ರಿಕೆ ಇವುಗಳಿಗೆ ಮರುಳಾಗುವ ಜನರು ಅಮೇರಿಕದಲ್ಲಿ ಒಳ್ಳೆಯ ಪ್ರಾಯಶ್ಚಿತ್ತವನ್ನು ಅನುಭವಿಸಿದರು. ಎಲ್ಲ ವಸ್ತುಗಳೂ ಅತ್ಯುತ್ತಮ, ಸರ್ವಸಂಜೀವಿನಿ ಎಂಬ ಬರಹದ ಕೆಳಗೇ ಹೊರಬೀಳಲಾರಂಭಿಸಿದ್ದರಿಂದ ನಿಜವಾಗಿ ಯೋಗ್ಯವಾವುದು, ಅಯೋಗ್ಯವಾವುವು? ಎಂಬುದನ್ನು ಅರಿಯಲಾರದೆ, ಹಾಗೆ ತಿಳಿಸಿ ಹೇಳಲು, ಜನರೇ ಸ್ವಂತ ಖರ್ಚಿನಿಂದ ತಜ್ಞರ ಸಮಿತಿಯೊಂದನ್ನು ನಿಯಮಿಸಬೇಕಾಯಿತಂತೆ! ಅವರು ಪರೀಕ್ಷಿಸಿ ಯುಕ್ತವೆಂದು ಹೇಳಿದ ಬಳಿಕವೇ ಒಂದು ಹೊಸ ಪದಾರ್ಥವನ್ನು ಕೊಳ್ಳಲು ಅಲ್ಲಿಯ ಜನರಿಂದು ಬಯಸುತ್ತಾರೆ. ಇದೊಂದು ಬಗೆ. ಇದಲ್ಲದೆ ನ್ಯಾಯವಾಗಿ ಸಾಮಾಜಿಕರನ್ನು ಪ್ರಗತಿಗೆ ಹಚ್ಚಲು ಸದ್ಬೋಧ ಮಾಡಬೇಕಾದರೆ ಹಿಂದಿನ ಕಾಲದ ನೀತಿಕತೆಗಳ ಸ್ಥಾನವನ್ನು ಇಂದು ಪ್ರಚಾರಸಾಹಿತ್ಯ ಆಕ್ರಮಿಸಿದೆ. ಇದು ಬೆತ್ತದಭಾಷೆಗೆ ಸರಿಸಮವಾದುದು. ಸ್ಥೂಲಬುದ್ಧಿಯವರಿಗೆ, ಅರಚಿ ಹೇಳಬೇಕಾಗುತ್ತದೆ. ಇಲ್ಲಿ ಹೊಡೆವವನಿಗಿಂತ ಹೊಡೆಸಿಕೊಳ್ಳುವುದು ಅನಿವಾರ್ಯ ಎನಿಸುವಂತೆ

ನಡೆದುಕೊಳ್ಳುವವರ ಅನಾಗರಿಕತೆಯೇ ಹೆಚ್ಚಿನದು. ಇಂಥ ಪ್ರಚಾರ ಸಾಹಿತ್ಯ ಅಗತ್ಯವೆನಿಸುವಂತೆ ಬುದ್ಧಿಮಾಂದ್ಯಕ್ಕೆ ಇಳಿದ ಸಾಮಾಜಿಕರೇ ಇಲ್ಲಿ ನಿಂದ್ಯರಲ್ಲದೆ ಅಂಥ ಸಾಹಿತ್ಯವಲ್ಲ. ಇದು ಇಂದು ರೋಗಕ್ಕೆ ತಕ್ಕ ಮದ್ದೆನಿಸಿದೆ. ಅಶನದಾರಿದ್ರ್ಯ ವಸನ ದಾರಿದ್ರ್ಯ, ನಿದ್ರಾದಾರಿದ್ರ್ಯಗಳನ್ನು ನಿವಾರಿಸಲು ಕುಂಭಕರ್ಣ ಯೋಗಸ್ಥರಾಗಿರುವ ಜನತೆಯನ್ನು ಎಚ್ಚರಿಸುವ ಸಾಹಿತ್ಯಕ್ಕೇ ಸದ್ಯಃ ಪ್ರಾಧಾನ್ಯ ಕೊಡಬೇಕಾಗಿದೆ. ಸದ್ಬುದ್ಧಿಯನ್ನು ದೂರ ತಳ್ಳಿ ಸೋಮಾರಿತನದ ಮುಸುಕನ್ನು ಹೊದೆದು ಕುಳಿತು ಕಣ್ಣಿದ್ದೂ ಕುರುಡರೆನಿಸುವ ನಮ್ಮಲ್ಲಿಯ ಅನೇಕರನ್ನು ಎಚ್ಚರಿಸಲು ಬಾರುಗೋಲಿನ ಸಾಹಿತ್ಯವಲ್ಲದೆ ಮತ್ತಾವುದು ಸಮರ್ಥವಾಗಬಲ್ಲುದು?

ಈ ಬಾರುಗೋಲಿನ ಸಾಹಿತ್ಯಕ್ಕಾದರೂ ಒಂದು ಪದ್ಧತಿಯಿದೆ. ಸಿನಿಮ ಕಥೆ ಇಲ್ಲವೆ ನಾಟಕದಂತೆ ಸಂಕ್ಷೇಪ ರಾಮಾಯಣದ ನೀತಿಯಿಂದ ದುರಂತ ಚಿತ್ರವೊಂದನ್ನು ಕಾರ್ಯಕಾರಣ ಸಮನ್ವಯವಿಲ್ಲದೆ ರಚಿಸಿದರೆ ಉದ್ದೇಶ ಹಾನಿಯಾಗದಿರದು. Made to order ತಯಾರ್ ಸಾಹಿತ್ಯವೆನಿಸುವ ಇದಕ್ಕೆ ತಯಾರಿಸಿದ ಸೂತ್ರಗಳ ಅನುಸರಣ ಅವಶ್ಯಕ. ಈ ಕ್ರಮ ಪಾಶ್ಚಾತ್ಯರಲ್ಲಿ ಚೆನ್ನಾಗಿ ಅನುಸರಿಸುತ್ತಾರೆ. ನಮ್ಮಲ್ಲಿ ಆ ಕ್ರಮದಿಂದ ಪ್ರಚಾರವೂ ಅಲ್ಲ, ಅಪಪ್ರಚಾರವೂ ಅಲ್ಲ ಎನಿಸುವ ಕಸ ಸಾಹಿತ್ಯದ ಕಂತೆಗಳ ಪ್ರಕಟನೆಯೇ ಹೆಚ್ಚಾಗಿ ಹೋಗಿರುವುದು ವಿಷಾದಕರ.

'ಅತಿ ಪರಿಚಯದಿಂದ ಅವಜ್ಞೆ', 'ಅಗ್ಗಕ್ಕೆ ಸಿಕ್ಕಿದ್ದು ಮುಗ್ಗಿದ ಜೋಳ' ಎಂಬ ವಾಕ್ಯಗಳಲ್ಲಿಯ ನೀತಿಯಂತೆ ಅನಪೇಕ್ಷಿತವಾಗಿ ಪುಸ್ತಕಗಳೂ ಪತ್ರಿಕೆಗಳೂ ಹೊರಡುತ್ತಿರುವುದರಿಂದ ಆದರ್ಶ ವಾಙ್ಮಯದ ಗೌರವವೂ ಜನತೆಯಲ್ಲಿ ಕೆಳಮಟ್ಟಕ್ಕಿಳಿಯುವಂತಾಯಿತು. ಹಿರಿಯರು ಹಿಮ್ಮೆಟ್ಟದೆ ಸಾರಾಸಾರ ವಿಚಾರವನ್ನು ಕಠೋರ ಪ್ರಭುಸಮ್ಮಿತೆಯಿಂದ ಹೇಳದಿದ್ದುದೇ ಇದಕ್ಕೆ ಕಾರಣ. ಉದಾಸೀನಪರರಾದ ಜನರಿಗೆ ಇದೊಂದು ನೆಪವಾಯಿತು. ಸಾಹಿತ್ಯವನ್ನು ಕಡೆಗಣಿಸಿ ಮಾತನಾಡಲು "ತ್ರಪಯತಿ ನಿತರಾಂ ಸಾಹಿ ಸಾಹಿತ್ಯಕಂಥಾ" ಎಂದು ಬಲ್ಲವರೂ ಹೇಳುವಂತಾಯಿತು. ಈ ದುರ್ವಿಪಾಕದ ಯುಗದಲ್ಲಿ ಬದುಕುವ ದುರ್ಭಾಗ್ಯವನ್ನು ಪಡೆದ ಲೇಖಕ ಇಲ್ಲವೆ ರಸಿಕನು ಹತಾಶನಾಗದೆ ಗತ್ಯಂತರವಿಲ್ಲ.

ಅಜ್ಞರೆಲ್ಲ ಸೇರಿ ಸುಜ್ಞನ ಆಯ್ಕೆಗೆ ಹೊರಟಂತೆ ಅರಸಿಕರೆಲ್ಲರೂ ಇಂದು ಲೇಖಕರ ರಸಶಕ್ತಿಯನ್ನು ನಿರ್ಣಯಿಸುವ ವಿಮರ್ಶಾಸಾಹಿತ್ಯವನ್ನು ಹೊರಗೆಡಹುತ್ತಿರುವುದೂ ಸಾಹಿತ್ಯದ ಪ್ರಾಧಾನ್ಯವನ್ನು ಅಧೋಮುಖ ಮಾಡಲು ಕಾರಣವಾಗಿದೆ. ರೋಗಿಯನ್ನು ಪರೀಕ್ಷಿಸಲು ವೈದ್ಯನೇ ಬೇಕೆಂಬುದು ಗೊತ್ತಿದ್ದರೂ ಸಾಹಿತ್ಯವನ್ನು ಸಮೀಕ್ಷಿಸಲು ರಸಜ್ಞರೇ ಅವಶ್ಯಕ ಎಂಬುದನ್ನು ಮಹಾಜನರು

ಮರೆತಂತಿದೆ. ಇದೇ ಇಂದಿನ "ಡೆಮಾಕ್ರಸಿ". ಹುರಿಯಾಳುಗಳ ಕಾರ್ಯಶಕ್ತಿಯ ವೈಶಿಷ್ಟ್ಯವನ್ನು ಅಳೆಯಲಾರದ ಮತದಾರರು ಗಾಳಿಯಲ್ಲಿ ಗುಂಡು ಹಾರಿಸಿದಂತೆ ತಮಗೆ ಅನಿಸಿದವರಿಗೆ ಮತಕೊಟ್ಟು ಬರುವಂತೆ ವಿಮರ್ಶಕಂಮನ್ಯರೂ ತಮಗೆ "ಅನಿಸಿ"ದ್ದನ್ನು ಅರಸುದನಿಯಿಂದ ಪ್ರಕಟಿಸಿ ಜಾಹೀರಾತಿನ ಸ್ಥಿತಿಗೆ ವಿಮರ್ಶೆಯನ್ನು ಒಯ್ದು ಮುಟ್ಟಿಸಿರುವುದು ಸಾಹಿತ್ಯದ ಬಗ್ಗೆ ತನ್ಮೂಲಕ ಸಾಹಿತಿಗಳ ಬಗ್ಗೆ ಜನರು ತಾತ್ಸಾರಮಾಡುವಂತೆ ಮಾಡಿದೆ. ಕಲಿತವರೆನಿಸಿಕೊಂಡ ವಿವಿಧೋದ್ಯೋಗಿಗಳು ತಮಾಷೆ ನೋಡುವಂತೆ ಸಾಹಿತ್ಯದ ವಾಚನ ಅಭಿನಯಾದಿಗಳನ್ನು ನೋಡ ಬರುವುದೇ ಇದಕ್ಕೆ ಸಾಕ್ಷಿ. ಸಾಹಿತ್ಯವನ್ನು ಕೇವಲ ಕ್ರೀಡಾವಸ್ತುವೆಂದು ಕಾಣುವಂತಾದುದೂ ಸಿನಿಮಾತಾರೆಯರಂತೆ ಅಲಂಕಾರ ಕರಂಡಕಗಳೆನಿಸಿದ ಕೆಲ ಆಧುನಿಕ ವಿದ್ಯಾವತಿಯರನ್ನು ಕೇವಲ ಭೋಗವಸ್ತುಗಳೆಂದು ಜನರು ತಿಳಿವಂತಾದುದೂ ಸಾಹಿತ್ಯ ಮತ್ತು ವಿದ್ಯೆಗಳ ಅಧೋಗತಿಯನ್ನು ಸೂಚಿಸುತ್ತದೆ. ಇಂಥ ದುಃಸ್ಥಿತಿಗೆ ಉಳಿದ ದುಃಸ್ಥಿತಿಗಳಿಗೆ ಹೇಗೋ ಹಾಗೇ ಬರಹಗಾರ ಓದುಗರಿಬ್ಬರೂ ಸರಿಯಾಗಿ ಪಾಲುದಾರರು. ಗಂಡಹೆಂಡಿರ ಜಗಳದಲ್ಲಿ ಹಿಂಸೆಯ ರೂಪ ಬೇರಾದರೂ ಪ್ರಮಾಣ ಪರಸ್ಪರ ಒಂದೇ ಇರುವುದೇ ಸಾಮಾನ್ಯವಾಗಿ ಕಂಡುಬರುವಂತೆ ಇಲ್ಲಿಯೂ ಸಾಹಿತಿ ಮತ್ತು ಸಾಹಿತ್ಯಾಭ್ಯಾಸಿಗಳು ಪರಸ್ಪರರ ಸಾಂಸ್ಕೃತಿಕ ಅಧಃಪತನಕ್ಕೆ ಸ್ಥೂಲವಾಗಿ ಸಮಭಾಗಿಗಳೆಂದೇ ಹೇಳಬೇಕಾಗಿದೆ.

ಸಾಹಿತ್ಯದ ಪುನರುತ್ಥಾನವಾಗಬೇಕಾದರೆ ಅದರ ಪ್ರಾಧಾನ್ಯವನ್ನು ನಾಗರಿಕರಲ್ಲಿ ಬಿಂಬಿಸಬೇಕಾಗಿದೆ. ಇದಕ್ಕೆ ಅಲಸ್ಯವನ್ನು ಗೆದ್ದ ಸಾಹಿತ್ಯಾಭ್ಯಾಸಿಗಳು ಪ್ರಾಮಾಣಿಕ ಪ್ರಯತ್ನವನ್ನು ಮಾಡಲು ಒಕ್ಕಟ್ಟಾಗುವುದು ಅವಶ್ಯಕ. ಇಲ್ಲದಿದ್ದರೆ ಸರಸ್ವತಿಯನ್ನು ಕೊಟ್ಟಿಗೆಯಲ್ಲಿ ಕಟ್ಟಿ ಬಾರುಗೋಲಿನಿಂದ ಹೊಡೆಯುವುದನ್ನು ನಿತ್ಯವೂ ಕಾಣುವ ಪ್ರಸಂಗ ಉಳಿಯುತ್ತದೆ.

"ಸಿರ್ವಾನ್ ಪುಚ್ಛವತೋ ಹಯಾ ಇತಿ ವದಂತ್ಯತ್ರಾಧಿಕಾರೇ ಸ್ಥಿತಾಃ" ಎಂಬಂತೆ, ಬಂಗಾರ ಇದ್ದಲುಗಳನ್ನು ಒಟ್ಟಿಗೆ ತೂಗಿ ಎಸೆಯುವ ಪ್ರವೃತ್ತಿಯನ್ನು ಸಾಮಾನ್ಯ ಓದುಗರ ಮನದಿಂದ ಹೊಡೆದೋಡಿಸಲು ಇಂಥ ಸರ್ವಸಿದ್ಧವಾದ ಸಹಕೃತವಾದ ಪ್ರಯತ್ನವನ್ನು ಪ್ರಾರಂಭಿಸಬೇಕು.

ಮನುಷ್ಯನೆಂದರೆ ಮನಸ್ಸು. ಮನಸ್ಸನ್ನು ಪಳಗಿಸಲು, ಮನಸ್ಸನ್ನು ಬಳಸಿಕೊಂಡು ಹುಟ್ಟಿದ "ಮನಸಿಜ" ಎನಿಸುವ ಸಾಹಿತ್ಯವೇ ಅವಶ್ಯಕವಲ್ಲವೇ? ಮನಸ್ಸನ್ನು ಮಥಿಸುವ "ಮನ್ಮಥ"ನೆನಿಸುವ ಸಾಹಿತ್ಯವೇ ಅಗತ್ಯವೆನಿಸದೆ? ಮನ್ಮಥಕಾಂತೆಯಾದ ರತಿಯ ಕಾಂತಾಸಂಮಿತಿಯ ಪ್ರಾಧಾನ್ಯವನ್ನು ಅನಾದಿಕಾಲದಿಂದ ಇಂದಿನವರೆಗೂ ಕಾಣಬಹುದಾಗಿದೆ. ಭೋಗರತಿ, ಯೋಗರತಿ– ಯಾವುದಕ್ಕಾದರೂ ಸಾಹಿತ್ಯವೇ

ಗತಿ. ಸುಶಿಕ್ಷಿತ ಸಮಾಜವನ್ನು ನಿರ್ಮಿಸಲು ಸುಶಿಕ್ಷಿತರನ್ನು ತಯಾರಿಸಬೇಕು. ಹಾಗೆ ಸುಶಿಕ್ಷಣ ಕೊಡಲು ಉತ್ತಮ ಸಾಹಿತ್ಯವೊಂದೇ ಸಮರ್ಥವೆಂಬುದನ್ನು ಪ್ರಯೋಗ ವಿಜ್ಞಾನಿಗಳು ಮನಗಾಣದಿರರು.

ಕಥೆ, ಕಾದಂಬರಿ, ನಾಟಕ, ಪದ್ಯಾದಿಗಳಲ್ಲಿ ಕಲ್ಪಿತ ಇಲ್ಲವೆ ಕಲ್ಪನೀಯ ಪಾತ್ರಗಳೂ ಸನ್ನಿವೇಶಗಳೂ ಜೀವನದಲ್ಲಿರುವಂತೆಯೇ ಸ್ವಲ್ಪ ಹೆಚ್ಚು ಕಡಿಮೆಯಿಂದ ಚಿತ್ರಿಸಲ್ಪಟ್ಟಿರುತ್ತವೆ. ಯಾವ ಅಂಶವನ್ನು ರಸಿಕರ ಮನದ ಮೇಲೆ ಹೆಚ್ಚಾಗಿ ಬಿಂಬಿಸಬೇಕೆಂದು ಕವಿಗೆನಿಸುವುದೋ ಅದನ್ನು ಅಲ್ಲಿ ಸ್ವಲ್ಪ ಅತಿಶಯವನ್ನು ಬೆರಸಿ ಹೇಳಿರುತ್ತಾನೆ; ಅರ್ಥಸ್ಪಷ್ಟತೆಗಾಗಿ ಉಪಮಾದಿ ನಿದರ್ಶನಗಳನ್ನು ಕೊಟ್ಟಿರುತ್ತಾನೆ. ಈ ಎಲ್ಲ ಸಾಧನಗಳಿಂದ ರಸಿಕರು ಆಯಾಪಾತ್ರಗಳ ಅಂತರಂಗವನ್ನು ಹೊಕ್ಕು ತಂತಮ್ಮ ಸದಸತ್ ಪ್ರವೃತ್ತಿಗಳಿಗನುಗುಣವಾಗಿ, ತಂತಮ್ಮ ಅನುಭವದ ಹಿನ್ನೆಲೆಯಲ್ಲಿ ಅವುಗಳ ನಡೆ, ನುಡಿ, ಹಾವ, ಭಾವ, ಚಟುವಟಿಕೆಗಳಲ್ಲಿ ಯುಕ್ತಾಯುಕ್ತತೆಯನ್ನು ತಮ್ಮ ಅಂತಃಕರಣದ ಪ್ರೇರಣೆಯಂತೆ ತಾತ್ಕಾಲಿಕವಾಗಿ ನಿರ್ಣಯಿಸಿ, ಕೆಲವನ್ನು ಮೆಚ್ಚಿಕೊಂಡು ಅವುಗಳಲ್ಲಿ ಸಮಾವೇಶಹೊಂದಿ ತಲ್ಲೀನರಾಗುತ್ತಾರೆ. ಈ ತಲ್ಲೀನತೆಯಿಂದ ಕಥೆಯಲ್ಲಿರುವ ಪ್ರಧಾನ ಪಾತ್ರಗಳ ದೃಷ್ಟಿಯಿಂದ ಉಳಿದ ಪಾತ್ರಗಳನ್ನು ನೋಡಿ, ತಂತಮ್ಮ ತ್ಯಾಜ್ಯ ಮತ್ತು ಗ್ರಾಹ್ಯ ವಿಮರ್ಶನ ಬುದ್ಧಿಯಿಂದ ಕಾರ್ಯಾಕಾರ್ಯ ವಿವೇಚನೆ ಮಾಡುತ್ತಾರೆ. ಈ ವಿವೇಚನಾನುಸಾರವಾಗಿ ಆಗಿಂದಾಗ ತಮ್ಮ ನೆಚ್ಚಿನ ಮತ್ತು ಮೆಚ್ಚಿನ ಪಾತ್ರಗಳ ತಪ್ಪಿಗೆ ಮರುಗುವ, ದುಃಖಕ್ಕೆ ಕರಗುವ ಭಾವವನ್ನೂ ಆಗದ ಪಾತ್ರಗಳ ಆಯಾ ಸ್ಥಿತಿಗಳಿಗೆ ಕೆರಳುವ, ಹಾಗೇ ಆಗಬೇಕೆಂದು ತೃಪ್ತಿ ಹೊಂದುವ ಭಾವವನ್ನೂ ರಸಿಕರು ತಾಳುತ್ತಾರೆ. ಮುಖ್ಯಪಾತ್ರದೊಡನೆ ಉಂಟಾಗುವ ಸಹಾನುಭೂತಿಯೇ ರಸಾಸ್ವಾದದ ಮೂಲ. ಈ ಸಹಾನುಭೂತಿಯು ತನ್ನದು–ಅವನದು (ಅವಳದು) ಎಂಬ ಭೇದಬುದ್ಧಿಯನ್ನು ದಾಟಿ ಮೇಲಿನ ಮಟ್ಟಕ್ಕೆ ಹೋದ ನಿಮಿಷದಲ್ಲಿ ರಸ ಅಥವಾ ಕಾವ್ಯಾನಂದ ಉಂಟಾಗುವುದು. ಈ ಅನುಭವವು ಹೃದಯವನ್ನು ಮಥಿಸಿ, ಕಲಕಿ ಉತ್ತಮಿಕೆಯ ಕಡೆಗೆ ಒಲವನ್ನೂ ಅಧಮತೆಯ ಕಡೆಗೆ ಜಿಗುಪ್ಸೆಯನ್ನೂ ಹುಟ್ಟಿಸುವುದೇ ಕಾವ್ಯದಿಂದಾಗುವ ನೈತಿಕ ಮತ್ತು ಸಾಂಸ್ಕೃತಿಕ ಪ್ರಯೋಜನ. ರಾಮನಂತೆ, ಸೀತೆಯಂತೆ ಇದ್ದರೆ ಇರಬೇಕು; ರಾವಣನಂತೆ ಶೂರ್ಪಣಖೆಯಂತೆ ಇರಕೂಡದು ಎಂದು ಯಾವ ಕಾವ್ಯ ಅಥವಾ ಸಾಹಿತ್ಯವನ್ನು ಅವಲೋಕಿಸಿದರೆ ನಮ್ಮಲ್ಲಿ ಪ್ರವೃತ್ತಿಯುಂಟಾಗುವುದೋ ಅದೇ ಉತ್ತಮ ಸಾಹಿತ್ಯ. ಪಾತ್ರಗಳನ್ನೂ ಸನ್ನಿವೇಶಗಳನ್ನೂ ಸ್ಪಷ್ಟವಾಗಿ ಹೇಳದಿರುವ ಕವನ ಮುಂತಾದವುಗಳಲ್ಲಿ ಭಾವಗ್ರಹಣ ಮಾಡಲು ರಸಿಕರು ತಮ್ಮ ಕಲ್ಪನೆಯನ್ನು

ಬಹಳ ದುಡಿಸಬೇಕು. ಇಲ್ಲದಿದ್ದರೆ ಕವಿಯ ಉದ್ದೇಶವೇ ಅರ್ಥವಾಗುವುದಿಲ್ಲ. ಅವನು ಹೇಳಿದ ಭಾವವೇ ಗಮ್ಯವಾಗುವುದಿಲ್ಲ. ರಸವೇ ಹುಟ್ಟುವುದಿಲ್ಲ. ಅದೊಂದು ಕಟ್ಟಿಲ್ಲದ ಭಾವಚಿತ್ರ. ಕಟ್ಟನ್ನು ಶ್ರಾವಕರೇ ಕಲ್ಪಿಸಿಕೊಳ್ಳಬೇಕು. ಇದು ಸಾಮಾನ್ಯರಿಗೆ ಕಷ್ಟವೆನಿಸುತ್ತದೆ ಕೆಲವೆಡೆ. ಆದರೆ ಒಮ್ಮೆ ಈ ಗುಟ್ಟು ತಿಳಿದರೆ ಅದರಿಂದ ಆಗುವ ಸೂಕ್ಷ್ಮ ಮತ್ತು ಶೀಘ್ರ ಪರಿಣಾಮ ಮತ್ತಾವುದರಿಂದಲೂ ಆಗದು.

ಚರಿತ್ರೆಯನ್ನು ಕಥೆಯೆಂದು ತಿಳಿದರೆ ಅಲ್ಲಿ ಬರುವ ಸ್ತ್ರೀಪುರುಷ ಪಾತ್ರಗಳಲ್ಲಾದರೂ ಓದುಗರಿಗೆ ಮೇಲಿನಂತೆಯೇ ಮೆಚ್ಚಿಕೆಗೆ ಬರುವ ಮತ್ತು ಬಾರದ ವರ್ಗಗಳು ಒಮ್ಮಿಂದೊಮ್ಮೆ ಹೊಳೆದುಬಿಡುತ್ತವೆ. ರುಕ್ಮಿಣಿ–ಸತ್ಯಭಾಮೆಯರಲ್ಲಿಯ ತಾರತಮ್ಯ, ಕೃಷ್ಣ–ರಾಮರಲ್ಲಿಯ ಗುಣಭೇದ, ಪ್ರತಾಪಸಿಂಹ–ಶಿವಾಜಿಗಳಲ್ಲಿರುವ ಶೌರ್ಯಭೇದ, ಗಾಂದಿ–ತಿಲಕರಲ್ಲಿರುವ ದೃಷ್ಟಿ ವೈಷಮ್ಯ, ಕ್ಯಾ, ಲಕ್ಷ್ಮಿ ಮತ್ತು ಸರೋಜಿನಿನಾಯಿಡು ಅವರಲ್ಲಿಯ ಪ್ರವೃತ್ತಿ ಮತ್ತು ವೃತ್ತಿಗಳ ತಾರತಮ್ಯ ಇತ್ಯಾದಿಗಳನ್ನು ರಸಿಕರು ಗ್ರಹಿಸಿ ಅವರಲ್ಲಿ ತಂತಮಗೆ ಅಚ್ಚುಮೆಚ್ಚಿನವರಾರೆಂದು ನಿಮಿಷಾರ್ಧದಲ್ಲಿ ಆರಿಸಿಕೊಂಡುಬಿಡುವರು. ಅವರ ಚರಿತವೇ ಆದರ್ಶವೆಂದು ತಿಳಿಯುವರು. ಇನ್ನೂ ಮುಂದೆ ಹೋದ ಬೌದ್ಧಿಕ ವಿಮರ್ಶಕರು ರಾವಣ–ರಾಮರ, ಕೌರವ–ಧರ್ಮರಾಯರ, ಗಾಂಧಿ–ಜಿನ್ನಾರ, ಸೀತೆ–ಶೂರ್ಪನಖಿಯರ, ವಾಲಿ–ಸುಗ್ರೀವರ, ದೇವಕಿ–ಪೂತನೆಯರ, ಕಮಲಾದೇವಿ ಮತ್ತು ಕಮಲಾ ನೆಹರುಗಳ, ಮೇಡಂ ಕ್ಯೂರಿ ಮತ್ತು ಲೇಡಿ ಮೌಂಟ್‌ಬ್ಯಾಟನ್ನರ ಕೃತ್ಯಾಕೃತ್ಯಗಳನ್ನು ತಮ್ಮ ನ್ಯಾಯದ ತಕ್ಕಡಿಯಲ್ಲಿ ಹಾಕಿ ತೂಗಿ, ಅವರವರು ಆಯಾ ಸಂದರ್ಭಗಳಲ್ಲಿ ಮಾಡಿದುದರ ಯುಕ್ತಾಯುಕ್ತತೆಯನ್ನು ಅಳೆದು, ಅವರವರ ವೈಯಕ್ತಿಕ ಮತ್ತು ದೇಶಕ್ಕೆ ಸಂಬಂಧಿಸಿದ ನಡೆನುಡಿಗಳ ಪಾವಿತ್ರ್ಯ, ಅಪಾವಿತ್ರ್ಯ, ಬುದ್ಧಿಮತ್ತೆ, ಬುದ್ಧಿಹೀನತೆ, ಧೀರತೆ, ಅಧೀರತೆ, ಅಸಹಾಯಕತೆ, ಅಸಹಾಯಶೂರತೆ, ಸ್ವಪ್ರಕಾಶತೆ ಪರಪ್ರಕಾಶತೆ, ವ್ಯಕ್ತಿತ್ವಪ್ರಭೆ, ವ್ಯಕ್ತಿತ್ವಹೀನತೆ ಇವುಗಳನ್ನು ತಿಳಿದು ತಮ್ಮ ಆದರ್ಶಗಳನ್ನು ರೂಪಿಸಿಕೊಳ್ಳುತ್ತಾರೆ. ಮನಃಶಾಸ್ತ್ರಗಳಾದರಂತೂ ಹೇಳುವುದೇ ಬೇಡ. ಭೋಗ್ಯತೆಯೊಂದೇ ಯೋಗ್ಯತೆಯೆಂದು ತಿಳಿದ ಸೀತೆಯ ಅಬಲತೆಯನ್ನೂ, ಭೋಗ್ಯತೆಯ ಜೊತೆಗೆ ಭೋಗ ಕರ್ತೃತ್ವದಿಂದ ವ್ಯಕ್ತಿತ್ವ ಪಡೆದ ದ್ರೌಪದಿಯನ್ನೂ ಇವರು ತೂಗಿ ನೋಡದಿರರು. ಹೀಗೆ ಸಾಹಿತ್ಯವು ಹೃದಯಕ್ಕೂ ಬುದ್ಧಿಗೂ ಜೀವನ ಚಿತ್ರಗಳನ್ನೇ ಎದುರಿಗಿಟ್ಟು "ಸುಖದುಃಖ ಸಂಗಮವಾದ ಹೃದ್ರಂಗವು ಪಾವನವೆಂಬೆನು ಯಾವಾಗಲೂ" ಎಂಬ ಸತ್ಯವನ್ನು ಸಾಕ್ಷಾತ್ಕರಿಸಿ ಕೊಡುತ್ತದೆ.

ಇಂಥ ಅಮೂಲ್ಯವೆನಿಸುವ ಸಾಹಿತ್ಯವಿದ್ಯೆಯ ಪ್ರಾಧಾನ್ಯವನ್ನು ಎತ್ತಿ ಆಡುವ ಸಂದರ್ಭವೊದಗಿರುವುದು ವಿಷಾದಕರ. ಜನತೆ ಸಾಹಿತ್ಯವನ್ನು ಅನಾದರ ಮಾಡಿದುದರಿಂದ ಉತ್ತಮ ಆದರ್ಶಗಳಲ್ಲಿ ಕೆಲವೆನಿಸುವ ಒಕ್ಕಟ್ಟು, ಪರಹಿತಬುದ್ಧಿ, ಅನಸೂಯೆ, ಸಹಿಷ್ಣುತೆ, ಕರ್ತವ್ಯದೃಷ್ಟಿ, ಉಪಾಯಚಿಂತನ, ಪ್ರಾಮಾಣಿಕತೆ, ದೇಶಹಿತೇಚ್ಛೆ, ಕಾರ್ಯತತ್ಪರತೆ, ಹೊಣೆಗಾರಿಕೆ ಮುಂತಾದ ಹೃದಯ ಸಂಸ್ಕಾರಗಳನ್ನು ದೃಢಪಡಿಸಿಕೊಳ್ಳಲಾರದೆ, ಇಂದು ಅನ್ನೋತ್ಪಾದನ, ಅರ್ಥೋಪಾರ್ಜನ, ಆತ್ಮರಕ್ಷಣ, ದೇಶರಕ್ಷಣ, ಉದ್ಯಮಸಾಹಸ, ಜ್ಞಾನಾರ್ಜನ, ಕಾರ್ಯಸಾಧಕತೆ, ನಿಃಸ್ವಾರ್ಥತೆ ಇವಾವನ್ನೂ ಸಾಧಿಸಿಕೊಳ್ಳಲಾರದೆ ಸರ್ವಾಂಗ ದಾರಿದ್ರ್ಯದಲ್ಲಿ ಮುಳುಗಿ ತೊಳಲಾಡುತ್ತಿದೆ. ಕ್ಷುದ್ರತೆ, ಅಸೂಯೆ, ಸ್ವಾರ್ಥ, ಅಪ್ರಮಾಣಿಕತೆ ಮತ್ತು ಹೇಡಿತನಗಳಿಂದ ಯಾವುದನ್ನೂ ಸಾಧಿಸಲಾಗದೆ ಅಳುಬುರುಕ ಬಾಳನ್ನು ನೂಕುತ್ತಿದೆ. ಈಗಲಾದರೂ ಸಾಹಿತ್ಯದತ್ತ ಜನ ತಿರುಗಿದರೆ ಈ ಸರ್ವರೋಗಗಳು ಪರಿಹಾರವಾದಾವು!

❍ ❍ ❍

ಪ್ರೊ.ಬಿ.ಎಚ್.ಶ್ರೀಧರ : ಜೀವನದ ಮುಖ್ಯ ಘಟನೆಗಳು

ಜನನ	: ೨೪ ಏಪ್ರಿಲ್ ೧೯೧೮ ಬಿಜೂರು ಗ್ರಾಮ (ಅವಿಭಜಿತ ದಕ್ಷಿಣ ಕನ್ನಡ)ದ ಬವಲಾಡಿಯಲ್ಲಿ
ತಂದೆ	: ಸೀತಾರಾಮ ಹೆಬ್ಬಾರ
ತಾಯಿ	: ನಾಗಮ್ಮ
ತಂಗಿಯರು	: ರುಕ್ಮಿಣಿ, ಸುಶೀಲ, ರಮ
ಶಿಕ್ಷಣ	
ಪ್ರಾಥಮಿಕ	: ಬಿಜೂರಿನ ಪ್ರಾಥಮಿಕ ಶಾಲೆಯಲ್ಲಿ
ಮಾಧ್ಯಮಿಕ	: ಮಿಡಲ್ ಸ್ಕೂಲ್, ಸೊರಬ (೩ ವರ್ಷ) ಮಿಡಲ್ ಸ್ಕೂಲ್, ಸಾಗರ (೧ ವರ್ಷ)
ಪ್ರೌಢ	: ಮುನಿಸಿಪಲ್ ಹೈಸ್ಕೂಲ್, ಸಾಗರ, ಎಸ್.ಎಸ್.ಎಲ್.ಸಿ. ಶಿವಮೊಗ್ಗ ಕೇಂದ್ರದಲ್ಲಿ
ಇಂಟರ್ ಮಿಡಿಯಟ್	: ಮೈಸೂರಿನ ಯುವರಾಜ ಕಾಲೇಜಿನಲ್ಲಿ
ಬಿ.ಎ. (ಆನರ್ಸ್)	: ಮೈಸೂರಿನ ಮಹಾರಾಜ ಕಾಲೇಜಿನಲ್ಲಿ (೧೯೪೧)ರಲ್ಲಿ ರಾಜ್ಯಕ್ಕೆ ಮೊದಲಿಗನಾಗಿ ಉತ್ತೀರ್ಣ ಪೂರ್ಣ ಕೃಷ್ಣರಾವ್ ಬಂಗಾರದ ಪದಕ ನವೀನಂ ರಾಮಾನುಜಾಚಾರ್ಯ ಬಂಗಾರದ ಪದಕ 'ಕವಿಯೂ ವಿಜ್ಞಾನಿಯೂ' ಪ್ರಬಂಧಕ್ಕೆ ಹೊನ್ನಸೆಟ್ಟಿ ಬಹುಮಾನ
ಎಂ.ಎ. ಆನರ್ಸ್	: ಮಹಾರಾಜ ಕಾಲೇಜು, ಮೈಸೂರು.
ವಿವಾಹ	: ಮೇ (೧೯೪೬) ರಮಾದೇವಿಯವರೊಡನೆ
ಮಕ್ಕಳು	: ಸುಮಾ, ಪ್ರತಿಭಾ, ವಿಜಯಾ, ರಾಜಶೇಖರ, ರಾಜೇಶ್ವರಿ
ವೃತ್ತಿ	: ಪುಣೆಯ ಫೀಲ್ಡ್ ಕಂಟ್ರೋಲರ್ ಆಫ್ ಮಿಲಿಟರಿ ಎಕೌಂಟ್ಸ್ ಆಫೀಸಿನಲ್ಲಿ ಒಂದು ವರ್ಷ 'ಗುಮಾಸ್ತಗಿರಿ' (೧೯೪೨) * ಭಟ್ಕಳದ ಇಸ್ಲಾಮಿಯ ಆಂಗ್ಲೋ ಉರ್ದು ಹೈಸ್ಕೂಲಿನಲ್ಲಿ ಸಹ ಶಿಕ್ಷಕರಾಗಿ ೪ ವರ್ಷ ಹಾಗೂ ಹೆಡ್ ಮಾಸ್ಟರ್ ಆಗಿ ೧ ವರ್ಷ * 'ಕರ್ಮವೀರ' ವಾರಪತ್ರಿಕೆ (ಹುಬ್ಬಳ್ಳಿ)ಯ ಉಪಸಂಪಾದಕರಾಗಿ (೧೯೪೭–೫೧) * ಕುಮಟದ ಕೆನರಾ ಕಾಲೇಜಿನಲ್ಲಿ ಸಂಸ್ಕೃತ ಪ್ರಾಧ್ಯಾಪಕ (೧೯೫೧–೬೨)ರಾಗಿ * ಶಿರಸಿಯ ಎಂ.ಎಂ. ಕಲಾ–ವಿಜ್ಞಾನ ಮಹಾವಿದ್ಯಾಲಯದಲ್ಲಿ ಉಪ ಪ್ರಾಚಾರ್ಯರಾಗಿ (೧೯೬೨–೬೯) ಸಂಸ್ಕೃತ ಮತ್ತು ಕನ್ನಡ ಪ್ರಾಧ್ಯಾಪಕರಾಗಿ.

* ಸಿದ್ಧಾಪುರದ ಎಂ.ಜಿ.ಸಿ. ಕಾಲೇಜಿನಲ್ಲಿ ಪ್ರಾಚಾರ್ಯರಾಗಿ (೧೯೬೯–೭೬)
* ಶಿರಸಿಯ ಮಾಡರ್ನ್ ಎಜ್ಯುಕೇಷನ್ ಸೊಸೈಟಿಯ ಆನರರಿ ಮೆನೇಜರ್‌ಗಾಗಿ ೧೫–೬–೧೯೮೨ ರವರೆಗೆ

ನಿಧನ : ಏಪ್ರಿಲ್ ೨೪, ೧೯೯೦

ಪ್ರಕಟಣೆಗಳು : ೧೯ನೇಯ ವಯಸ್ಸಿನಲ್ಲಿ ಇಂಟರ್ ಮೀಡಿಯಟ್ ಓದುತ್ತಿದ್ದಾಗ ಬೆಂಗಳೂರಿನ 'ಸುಬೋಧ' ರಾಮರಾಯರ ಕರೆಯ ಮೇರೆಗೆ ಬರೆದು ಪ್ರಕಟಿಸಿದ ಚಂಪಕಮಾಲಾ ವೃತ್ತದಲ್ಲಿದ್ದ ಕವನ ಮೊದಲ ಪ್ರಕಟಣೆ. ೧೯೯೦ರಲ್ಲಿ ಕೈಗಾ ಅಣು ವಿದ್ಯುತ್ ಸ್ಥಾವರ ಕುರಿತು 'ನಾಗರಿಕ' ಪತ್ರಿಕೆಯಲ್ಲಿ ಕೊನೆಯ ಲೇಖನ. ಈ ಮಧ್ಯದಲ್ಲಿ ೫೦ಕ್ಕೂ ಹೆಚ್ಚು ಪುಸ್ತಕಗಳು, ನೂರಾರು ಲೇಖನಗಳು ಪ್ರಕಟವಾದವು.

ಪ್ರಶಸ್ತಿ/ಗೌರವಗಳು

ಕಾವ್ಯಸೂತ್ರ : ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ
ತೀ.ನಂ.ಶ್ರೀ ಸ್ಮಾರಕ ಬಹುಮಾನ
ಮೈಸೂರು ವಿ.ವಿ. ಸುವರ್ಣ ಮಹೋತ್ಸವ ಬಹುಮಾನ

ರಾಷ್ಟ್ರಸೂತ್ರ : ರಾಜ್ಯ ಸರಕಾರ ಅನುದಾನ
ಮೂರು ಸಾವಿರ ಮಠ, ಹುಬ್ಬಳ್ಳಿ, ಬಹುಮಾನ

ಜ್ಞಾನಸೂತ್ರ : ಹುಬ್ಬಳ್ಳಿಯ ಲೋಕ ಶಿಕ್ಷಣ ಟ್ರಸ್ಟ್ ಬಹುಮಾನ

ಮಾನಸ ದರ್ಪಣ : ಮದ್ರಾಸ್ ಕ್ರಿಶ್ಚಿಯನ್ ಟೆಕ್ಸ್ಟ್‌ಬುಕ್ ಕಮಿಟಿ ಬಹುಮಾನ

ನೌಕಾಗೀತ : ಕೇಂದ್ರ ಸರಕಾರದ ಸಂರಕ್ಷಣಾ ಶಾಖೆ ಬಹುಮಾನ

ರಸಯಜ್ಞ : ದೇವರಾಜ ಬಹಾದೂರ ಬಹುಮಾನ

ಮನುಸ್ಮೃತಿ
(ರಾಜಧರ್ಮ) : ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಪದವಿ ತರಗತಿ ಪಠ್ಯಪುಸ್ತಕ
೫೫ನೇಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಪತ್ರಿಕಾ ಗೋಷ್ಠಿ ಅಧ್ಯಕ್ಷ ಉ.ಕ. ಜಿಲ್ಲಾ ಮೂರನೆಯ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ (೧೯೭೪)
ಕುಂದಾಪುರದಲ್ಲಿ 'ಜೇಸೀ' ಸನ್ಮಾನ (೧೯೮೦)
ಶಿರಸಿಯ ರೋಟರಿ ಕ್ಲಬ್ ಸನ್ಮಾನ (೧೯೮೭)
ಶಿರಸಿಯ 'ರಂಗ ಸಂಗ' ಕಲಾರಂಗದವರಿಂದ ಪೌರ ಸನ್ಮಾನ (೧೯೮೭)
ಯುಗ ಪುರುಷದ ಬಳಗದಿಂದ ಕಿನ್ನಗೋಳಿಯಲ್ಲಿ ಸನ್ಮಾನ (೧೯೮೮)

ಬಿ.ಎಚ್.ಶ್ರೀಧರ ಕೃತಿ ಸೂಚಿ

೧. ಕಾವ್ಯ

ಮೇಘನಾದ	ಸಾಹಿತ್ಯ ಮಂದಿರ, ಮೈಸೂರು	೧೯೪೫
ಕಿನ್ನರಗೀತ	ಕಥಾಂಜಲಿ ಗ್ರಂಥಮಾಲೆ, ಬೆಂಗಳೂರು	೧೯೪೭
ಅಮೃತಬಿಂದು	ಸಂಯುಕ್ತ ಕರ್ನಾಟಕ ಕಾರ್ಯಾಲಯ, ಹುಬ್ಬಳ್ಳಿ	೧೯೪೯
ಮಂಜುಗೀತ	ಲೇಖಕರು, ಕುಮಟ	೧೯೫೮
ರಸಯಜ್ಞ	ವಿದ್ಯಾರಣ್ಯ ಪ್ರಕಾಶನ ಸಂಸ್ಥೆ, ಶಿರಸಿ	೧೯೬೪
ಮುತ್ತುರತ್ನ	ಸುಲಭ ಸಾಹಿತ್ಯ ಪ್ರಕಾಶನ, ಕುಮಟ (ಮ.ಮು. ೧೯೮೭)	೧೯೬೮
ನೌಕಾಗೀತ	ಅಪ್ರಕಟಿತ (ಖಾಸಗಿ ಪ್ರಸಾರದಲ್ಲಿ)	೧೯೬೮
ಕದಂಬ ವೈಭವ	ಪ್ರಬುದ್ಧ ಕರ್ನಾಟಕದಲ್ಲಿ	೧೯೭೦;
	ಸಾಹಿತ್ಯ ಮಂದಿರ ಶಿರಸಿ	೧೯೮೭
ಕಂಟಕಾರಿ ಮಹಾಕಾವ್ಯಂ	ದೀನಬಂಧು ಪ್ರಜಾಶನ, ಹೊನ್ನಾವರ	೧೯೮೧
ಜಾತವೇದ	ಪಿ.ಎ.ಎನ್. ಪಬ್ಲಿಷರ್ಸ್, ಬೆಂಗಳೂರು	೧೯೮೪
ಅಮೃತಬಿಂದು (ಶ್ರೀಧರ ಕಾವ್ಯ ವಾಚಿಕೆ)	ಸಾಹಿತ್ಯ ಪರಿಷತ್ತು ಬೆಂಗಳೂರು	೨೦೦೭

೨. ಯಕ್ಷಗಾನ

ಯಕ್ಷಗಾನ ಪಂಚರಾತ್ರ ವಾರ್ಧಿಕ್ಯ, ಶಿರಸಿಯ 'ಧ್ಯೇಯನಿಷ್ಠ ಪತ್ರಕರ್ತ' ದಿನ ಪತ್ರಿಕೆಯಲ್ಲಿ ೫-೧೨-೧೯೯೩ ರಿಂದ ೮-೫-೧೯೯೪ರ ವರೆಗೆ ಪ್ರತಿ ಭಾನುವಾರ

೩. ನಾಟಕ

ಮಯೂರ ಶರ್ಮ, ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ	೧೯೮೮
ಸೋಮಾರಿಗಳ ಕ್ಲಬ್ (ಅಪ್ರಕಟಿತ)	೧೯೮೭

೪. ಆತ್ಮಕಥೆ

ಜೀವಯಾನ, ಬಿ.ಎಚ್.ಶ್ರೀ. ಸಾಹಿತ್ಯ ಪ್ರಶಸ್ತಿ ಸಮಿತಿ, ಶಿರಸಿ ೧೯೯೪

೫. ವಿನೋದ-ವಿಡಂಬನೆ

ಬೇತಾಳಗಳ ಕುಣಿತ	ಸರ್ವೋದಯ ಸಾಹಿತ್ಯ ಮಾಲೆ, ಹುಬ್ಬಳ್ಳಿ	೧೯೫೧
ಭಾಷಣಗಳ ಭೈರವರ ಒಡ್ಡೋಲಗ	ಎ.ಎಂ.ಜಿ. ಸಾಹಿತ್ಯ ಪ್ರಕಾಶನ, ಉಡುಪಿ	೧೯೬೬

೬. ವಿಮರ್ಶೆ

ಬೇಂದ್ರೆ	ಎಂ.ಜಿ.ಎಂ. ಕಾಲೇಜು ಉಡುಪಿ	೧೯೫೬
ಹೊಸಗನ್ನಡ ಸಾಹಿತ್ಯ ಶೈಲಿ	ಪ್ರತಿಭಾ ಗ್ರಂಥಮಾಲೆ, ಧಾರವಾಡ	೧೯೫೬
ಕವೀಂದ್ರ ರವೀಂದ್ರ	ಶಶಿ ಪ್ರಕಾಶನ, ಬೆಂಗಳೂರು	೧೯೫೯

ಕಾವ್ಯಸೂತ್ರ	ವಿದ್ಯಾರಣ್ಯ ಗ್ರಂಥ ಪ್ರಕಾಶನ, ಶಿರಸಿ	೧೯೬೮
ಪ್ರತಿಭೆ	ರವೀಂದ್ರ ಪ್ರಕಾಶನ, ಕಾರ್ಗಲ್	೧೯೭೮
ಸಂಸ್ಕೃತಗಳ ಕನ್ನಡಗಳ ಬಾಂಧವ್ಯ	ಅಖಿಲ ಕರ್ನಾಟಕ ಸಂಸ್ಕೃತ ಪರಿಷತ್ ಮಂಗಳೂರು	೧೯೮೧
ಪಸರಿಪ ಕನ್ನಡಕ್ಕೊಡೆಯನೀಗ ದರಾಂಕಿತ ಬೇಂದ್ರೆ	ಶ್ರೀಮಾತಾ ಪ್ರಕಾಶನ ಧಾರವಾಡ	
ಜನ್ನ (ಸಂ.ವಿ.ಸಿ)	ಐ.ಬಿ.ಎಚ್.ಪ್ರಕಾಶನ ಬೆಂಗಳೂರು	೧೯೭೫

೭. ವೈಚಾರಿಕ

ಭಾರತೀಯ ನಾಗರಿಕತೆಗೆ	ಪ್ರಸಾರಾಂಗ	೧೯೫೯
ಮನುವಿನ ಕೊಡುಗೆ	ಕ.ವಿ.ವಿ. ಧಾರವಾಡ (ಮರುಮುದ್ರಣ)	೧೯೭೧
ಪಂಚಮುಖಿ	ಅಂತರಂಗ ಕಾರ್ಯಾಲಯ, ಉಡುಪಿ	೧೯೫೫
ವಿದೇಶದ ತಿಳಿವಳಿಕೆಗಳು	ರಾಮಕೃಷ್ಣ ಪ್ರಿಂಟಿಂಗ್ ವರ್ಕ್ಸ್, ಕುಮಟ	೧೯೫೯
ಜ್ಞಾನಸೂತ್ರ	ವಿದ್ಯಾರಣ್ಯ ಗ್ರಂಥ ಪ್ರಕಾಶನ, ಶಿರಸಿ	೧೯೬೯
ಮಾನಸದರ್ಪಣ (ಹನುಮಂತರಾವ್ ಅವರೊಂದಿಗೆ)	ಸಮಾಜ ಪುಸ್ತಕಾಲಯ, ಧಾರವಾಡ	೧೯೭೩
ರಾಷ್ಟ್ರಸೂತ್ರ	ವಿಶ್ವ ಪ್ರಕಾಶನ, ಹುಬ್ಬಳ್ಳಿ	೧೯೭೪
ವಿಚಾರ ವಿಜಯ	ರವೀಂದ್ರ ಪುಸ್ತಕಾಲಯ, ಕಾರ್ಗಲ್	೧೯೮೧
ಭಾರತೀಯ ಮೂರ್ತಿಶಿಲ್ಪ	ಬಂಡಾಯ ಪ್ರಕಾಶನ, ಅರೆಅಂಗಡಿ	೨೦೦೯

೮. ಇತಿಹಾಸ

ಬನವಾಸಿಯ ಕದಂಬರು	ಶತಮಾನೋತ್ಸವ ಸಮಿತಿ, ಬನವಾಸಿ (ಎಲ್.ಟಿ. ಶರ್ಮಾರೊಂದಿಗೆ)	೧೯೬೬
ಬನವಾಸಿಯ ಇತಿಹಾಸ	ಸಾಹಿತ್ಯ ಮಂದಿರ, ಶಿರಸಿ	೨೦೦೪

೯. ಇತರೆ

ಮಯೂರ ಶರ್ಮ	ಐ.ಬಿ.ಎಚ್. ಪ್ರಕಾಶನ, ಬೆಂಗಳೂರು (ಮರುಮುದ್ರಣ ೧೯೭೧)	೧೯೭೧
ಕೌಶಿಕ ರಾಮಾಯಣ	ಐ.ಬಿ.ಎಚ್. ಪ್ರಕಾಶನ, ಬೆಂಗಳೂರು	೧೯೭೨
ರಮಣ ಮಹರ್ಷಿ	ಸುಲಭ ಸಾಹಿತ್ಯ ಪ್ರಕಾಶನ, ಕುಮಟ	೧೯೬೯
ಉತ್ತರ ಕನ್ನಡ ಜಿಲ್ಲೆಯ	ಪ್ರೇಕ್ಷಣೀಯ ಸ್ಥಳಗಳು	(ಉಪಲಬ್ಧವಿಲ್ಲ)
ಬನವಾಸಿಯ ಕೈಪಿಡಿ		೧೯೭೧
ಸಾಹಿತ್ಯ ಚಿಂತನ	(ಮಂಜುವಾಣಿಯಲ್ಲಿ ಧಾರಾವಾಹಿಯಾಗಿ)	
ಶಿವಪುರಾಣ	(ಮಂಜುವಾಣಿಯಲ್ಲಿ ಧಾರವಾಹಿಯಾಗಿ)	
ವೇದರಹಸ್ಯಸಾರ	ರಾಜಶೇಖರ ಹೆಬ್ಬಾರ, ಶಿರಸಿ	೨೦೦೩

೧೦. ಅನುವಾದ (ಇಂಗ್ಲಿಷಿನಿಂದ)

ಭಾರತೀಯ ರಾಜ್ಯಧರ್ಮದ ಸತ್ವ ಮತ್ತು ಸ್ವರೂಪ
(ಆರವಿಂದರ The Foundations of Indian Culture (ಭಾಗ–೧) ಅನುವಾದ)
ಸುಲಭ ಸಾಹಿತ್ಯ ಪ್ರಕಾಶನ, ಕುಮಟ ೧೯೫೫

ಭಾರತೀಯ ವಾಙ್ಮಯ
(ಅರವಿಂದರ The Foundations of Indian Culture (ಭಾಗ–೨) ಅನುವಾದ)
ಎನ್.ಆರ್.ರಾವ್‌ರೊಂದಿಗೆ ಸುಲಭ ಸಾಹಿತ್ಯ ಪ್ರಕಾಶನ, ಕುಮಟ ೧೯೫೭

ಟಿ.ಎಸ್.ಈಲಿಯಟ್ (ಎ.ಸಿ.ಬ್ರ್ಯಾಡ್ ಬ್ರೂಕ್‌ರ T.S.Eliot ಅನುವಾದ)
ಎಂ.ಜಿ.ಎಂ. ಕಾಲೇಜು ಉಡುಪಿ. ೧೯೫೭

ಸ್ವಾತಂತ್ರ್ಯ ಮೀಮಾಂಸೆ
(ಜೆ.ಎಸ್. ಮಿಲ್ಲರರ On Liberty ಅನುವಾದ ಎನ್.ಆರ್. ರಾವ್‌ರೊಂದಿಗೆ)
ಕುಮಟ ೧೯೬೧

ಮಾತೃಶ್ರೀ (ಪಶುಪತಿಯವರ On the Mother Divine ಅನುವಾದ)
ಶ್ರೀ ಅರವಿಂದೋ ಸೊಸೈಟಿ, ಶಿವಮೊಗ್ಗ ೧೯೭೫

ವೇದರಹಸ್ಯ (ಅರವಿಂದ The Secret of the Veda ಅನುವಾದ) (ಅಪ್ರಕಟಿತ)

ನೆಹರೂ ಉವಾಚ (ಉಪಲಬ್ಧವಿಲ್ಲ)

ರಮಣ ಮಾರ್ಗ ಭಾಗ ೧ ಮತ್ತು ಭಾಗ –೨
(ಓಂ ಸಾಧು ಅವರ The Path of Ramana Part-1 & Part 2 ಅನುವಾದ)
ಅಪ್ರಕಟಿತ

ಅನುವಾದ (ಸಂಸ್ಕೃತ)


ಕಾಳಿದಾನ ಕಾವ್ಯ ಸೌರಭ ರೋಟರಿ ಕ್ಲಬ್, ಕುಮಟ (ಉಪಲಬ್ಧವಿಲ್ಲ) ೧೯೬೨
ಕುಂದಮಾಲೆ (ನಾಟಕ) ಗೀತಾ ಬುಕ್ ಹೌಸ್, ಮೈಸೂರು ೧೯೬೭
ಸಂಸ್ಕೃತ ಸುಭಾಷಿತ ಸಂಗ್ರಹ ಪ್ರಸಾರಾಂಬ, ಕ.ವಿ.ವಿ. ಧಾರವಾಡ ೧೯೭೧
ರಾಜಧರ್ಮ ಪ್ರಸಾರಾಂಗ, ಕ.ವಿ.ವಿ. ಧಾರವಾಡ ೧೯೭೪
(ಮನುಸ್ಮೃತಿ ೭ನೇ ಅಧ್ಯಾಯದ ಅನುವಾದ – ಟಿಪ್ಪಣಿ, ಪೀಠಿಕ ಸಹಿತ ಬಿ.ಆರ್.ಮೋಡಕರೊಂದಿಗೆ)

೧೧. ಸಂಪಾದಿತ

ನವರತ್ನ (ಮಿಸಲೆನಿ) ಸುಲಭ ಸಾಹಿತ್ಯ ಪ್ರಕಾಶನ, ಕುಮಟ (ವರ್ಷ ನಮೂದಿಸಿಲ್ಲ)

ಬವವಾಡಿ ಹಿರಿಯಣ್ಣ ಹೆಬ್ಬಾರ್ ವಿರಚಿತ
ಭಾನುಮತಿ ಕಲ್ಯಾಣ (ಯಕ್ಷಗಾನ) ಕಾವ್ಯಾಲಯ ಪ್ರಕಾಶಕರು, ಮೈಸೂರು
೧೯೫೮

ರಸೋ ವೈ ಸಃ (ಹಿರಿಯಣ್ಣ ಹೆಬ್ಬಾರರ ಯಕ್ಷಗಾನ ಮತ್ತು ಭಕ್ತಿ ಸ್ತೋತ್ರಗಳು)
'ಸಾಹಿತ್ಯ ಮಂದಿರ' ಶಿರಸಿ ೧೯೮೭



ಮನಸ್ಸಿಗೆ ತಿಳಿವಳಿಕೆ ಕೊಡಲು, ಸಂಸ್ಕಾರ ಕೊಡಲು ಇತರ ಶಾಸ್ತ್ರಗಳಿರುವುದು ನಿಜ. ಅವು ಜೀವನದ ಒಂದೊಂದು ಅಂಶವನ್ನೇ ಎತ್ತಿಹಿಡಿದು ವಿಶೇಷ ಜ್ಞಾನಗಳನ್ನು ಬೌದ್ಧಿಕವಾಗಿ ತಿಳಿಸುವುವು. ಅವುಗಳಲ್ಲಿ ಒಂದೊಂದನ್ನೇ ತೆಗೆದುಕೊಂಡರೆ ಅವು ಸರ್ವಧಾರಿಯಲ್ಲ, ಜೀವನದ ವಿವಿಧಾಂಗಗಳನ್ನು ಸೋದಾಹರಣವಾಗಿ ಪ್ರತಿಬಿಂಬಿಸುವ ಕನ್ನಡಿಗಳಲ್ಲ. ಕಲೆಗಳಲ್ಲೆಲ್ಲ ಶ್ರೇಷ್ಠವೆನಿಸಿದ್ದು ಸಾಹಿತ್ಯ; ಅದಕ್ಕೆ ಮಾತು ಬರುತ್ತವೆ; ಉಳಿದ ಕಲೆಗಳು ಮೌನಿಗಳು. ಇಂಥ ಮಾತಿನ ಮಹಾದ್ಭುತ ಶಕ್ತಿಯುಳ್ಳ ಮನುಷ್ಯನಿಗೇ ವಿಶಿಷ್ಟವಾಗಿ ಇರುವ ಸಾಹಿತ್ಯವಾದರೋ ಜೀವನದ ವಿವಿಧಾನುಭವಗಳನ್ನು ರಸರೂಪದಿಂದ ಹೃದಯದಲ್ಲಿ ಬಿಂಬಿಸಿ ರಸಿಕನಲ್ಲಿ ಸಮರಸಭಾವ, ಭೋಗಯೋಗ ಸಮನ್ವಯ ಭಾವ, ಸುಖದುಃಖ ಸಮತಾಭಾವ ಇವನ್ನು ಬೆಳೆಯಿಸಲು ಸಹಕಾರಿಯಾಗುತ್ತದೆ. ಜೀವನವನ್ನು ಅತಿಯಾಗಿ ಪುರಸ್ಕರಿಸುವ ಇಲ್ಲವೆ ಅತಿಯಾಗಿ ತಿರಸ್ಕರಿಸುವ ಹಟಕ್ಕೆ ಬೀಳದೆ "ಇದ್ದಷ್ಟು ದಿನವಾದರೂ ಇರುವಷ್ಟು ಪ್ರೀತಿಯ ಇನ್ನಷ್ಟು ರುಚಿನೋಡಿ ಹೋಗೋಣವೇ" ಎಂಬ ರಸತತ್ವವನ್ನು ಅದು ಹೃದ್ಗತಮಾಡಿ ಕೊಡುವುದು. ಇದೇ ಸಾಹಿತ್ಯದ ಹಿರಿಮೆ. ಮಾನವನಲ್ಲಿ ಮಾನವತೆಯನ್ನು ಮೂಡಿಸಲು, ವಿಶ್ವಕುಟುಂಬಿತ್ವವು ಉದಯಿಸಲು, ಸಚ್ಚಿದಾನಂದವು ಉದ್ಭವಿಸಲು ಸಾಧನವಾಗುವ ಸಾಹಿತ್ಯವೇ ಆದರ್ಶ ಸಾಹಿತ್ಯ. ಪ್ರಜಾಪ್ರಭುತ್ವದಲ್ಲಿ ಮಾನವನ ನಾಗರಿಕತೆಯನ್ನು ಸುಧಾರಿಸುವ ದೃಷ್ಟಿಯಿಂದ ವಿದ್ಯಾಪ್ರಸಾರಕ್ಕೆ ಮಹತ್ವವನ್ನು ಕೊಡಲಾಗಿದೆ. ಆ ವಿದ್ಯೆ ಸದ್ವಿದ್ಯೆಯೆನಿಸಿಕೊಂಡು ಉದ್ದೇಶವನ್ನು ಸಾಧಿಸಿಕೊಡಬಲ್ಲುದಾಗಬೇಕಾದರೆ, ಅದು ತನ್ನ ಕೊನೆಯ ಮೆಟ್ಟಿಲಿನಲ್ಲಿ ಸಾಹಿತ್ಯಲೋಕವನ್ನೇ ಆಶ್ರಯಿಸಬೇಕಾಗುತ್ತದೆ.

ತೇಜು ಪಬ್ಲಿಕೇಷನ್ಸ್